

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 12 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 175 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಹಾಸನಾಂಬ ದೇವಾಲಯಕ್ಕೆ ಪ್ರವೇಶ ಕಲ್ಪಿಸಲು ಐಡಿ ಕಾರ್ಡ್ ದುರುಪಯೋಗ
ಇಬ್ಬರು ಸರ್ಕಾರಿ ಅಧಿಕಾರಿಗಳ ಅಮಾನತು

ಹಾಸನ: ಹಾಸನಾಂಬ ದೇವಾಲಯಕ್ಕೆ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶ ಕಲ್ಪಿಸಲು ತಮ್ಮ ಐಡಿ ಕಾರ್ಡ್ ದುರುಪಯೋಗ ಮಾಡಿದ ಆರೋಪದ ಅಡಿಯಲ್ಲಿ ಇಬ್ಬರು ಸರ್ಕಾರಿ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಸಚಿವ ಕೃಷ್ಣ ಬೈರೇಗೌಡ ಅವರ ಸೂಚನೆಯ ಮೇರೆಗೆ ಈ ಶಿಸ್ತು ಕ್ರಮವನ್ನು ಕೈಗೊಳ್ಳಲಾಗಿದೆ.

ಸರ್ಕಾರಿ ಗುರುತಿನ ಚೀಟಿಯನ್ನು ದುರುಪಯೋಗಪಡಿಸಿಕೊಳ್ಳುವುದು ಗಂಭೀರ ಅಪರಾಧ. ಈ ಇಬ್ಬರು ಅಧಿಕಾರಿಗಳು ತಮ್ಮ ಅಧಿಕೃತ ಗುರುತಿನ ಚೀಟಿಯನ್ನು ಅನಧಿಕೃತ ಜನರಿಗೆ ನೀಡಿ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಿದ್ದರು ಎಂದು ಸಚಿವರು ತಿಳಿಸಿದ್ದಾರೆ.

ಇಂತಹ ಕೃತ್ಯಗಳು ಸರ್ಕಾರಿ ನೌಕರರಿಗೆ ತಕ್ಕುದಾದದ್ದಲ್ಲ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಇದು ಕೇವಲ ಒಂದು ಪ್ರತ್ಯೇಕ ಘಟನೆ. ಈ ಘಟನೆ ಹೊರತುಪಡಿಸಿ ಎಲ್ಲಾ ಸರ್ಕಾರಿ ನೌಕರರು ಸಾರ್ವಜನಿಕರಿಗೆ ಅತ್ಯುತ್ತಮ ದರ್ಶನ ವ್ಯವಸ್ಥೆಯನ್ನು ಖಾತ್ರಿಪಡಿಸುವಲ್ಲಿ ಅನುಕರಣೀಯ ಕೆಲಸ ಮಾಡಿದ್ದಾರೆ. ಇದು ಉತ್ತಮ ತಂಡದ ಕೆಲಸ. ಉತ್ತಮ ಕೆಲಸ ▶ 6ನೇ ಪುಟಕ್ಕೆ

ಪರಿಸರ ಸ್ನೇಹಿ ದೀಪಾವಳಿ
ಹಸಿರು ಪಟಾಕಿಗಷ್ಟೇ ಅವಕಾಶ

ಬೆಂಗಳೂರು,ಅ.11–ರಾಜ್ಯಾದ್ಯಂತ ಪರಿಸರಸ್ನೇಹಿ ದೀಪಾವಳಿ ಆಚರಣೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸಿದ್ದು, ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ನೀಡಬೇಕು ಎಂದು ಆಯಾಯ ಜಿಲ್ಲಾ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠರಿಗೆ ತಾಕೀತು ಮಾಡಿದೆ.

ನಿಷೇಧಿಸಿರುವ ಪಟಾಕಿಗಳನ್ನು ಮಾರಾಟ ಮಾಡುವವರು, ದಾಸ್ತಾನು ಹೊಂದಿರುವವರ ವಿರುದ್ಧ ಪರಿಸರ ಕಾಯ್ದೆಯಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಶಬ್ದ ಮಾಲಿನ್ಯವನ್ನು ನಿಯಂತ್ರಿಸಲು 2004ರಲ್ಲಿ ಪ್ರತಿ ಜಿಲ್ಲೆಯಲ್ಲೂ ಸ್ಥಾಪನೆಯಾಗಿರುವ ಜಿಲ್ಲಾ ಪರಿಸರ ಸಂರಕ್ಷಣೆ ಪ್ರಾಧಿಕಾರಕ್ಕೆ ಜವಾಬ್ದಾರಿ ವಹಿಸಲಾಗಿದೆ.

ರಾಸಾಯನಿಕಯುಕ್ತ ಪಟಾಕಿಗಳ ಬಳಕೆಯಿಂದ ವಾಯುಮಾಲಿನ್ಯವಾಗುತ್ತದೆ. ಪಟಾಕಿಗಳನ್ನು ಅಸುರಕ್ಷಿತ ಸ್ಥಳಗಳಲ್ಲಿ ಸಂಗ್ರಹಿಸಿ, ಅವುಗಳು ಸ್ಫೋಟಗೊಂಡು ಅನೇಕ ಜನರ ಪ್ರಾಣಹಾನಿ, ಆರೋಗ್ಯಕ್ಕೆ ತೊಂದರೆಯಾಗಿದೆ. ಅದೂ ದೀಪಾವಳಿ ಸಂದರ್ಭಗಳಲ್ಲಿ ವಾಯುಮಾಲಿನ್ಯ ವಿಪರೀತವಾಗಿರುವುದು ಕಂಡು ಬಂದಿದೆ ಇದನ್ನೆಲ್ಲ ಗಮನಿಸಿ ಸುಪ್ರೀಂಕೋರ್ಟ್ ಮಾಲಿನ್ಯ ತಡೆ ಗಟ್ಟಲು ತೀರ್ಪು ನೀಡಿದೆ. ಅದರಂತೆ, ಸರ್ಕಾರವೂ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ವಿವಿಧ ಇಲಾಖೆಗಳು, ಪ್ರಾಧಿಕಾರಗಳು ಜಾರಿಗೆ ತರಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಸುಪ್ರೀಂಕೋರ್ಟ್ 2005ರಲ್ಲಿ ಪಟಾಕಿ ಬಳಕೆ ಕುರಿತಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದು, 2015, 2018ರಲ್ಲಿ ಹಲವಾರು ನಿರ್ದೇಶನಗಳನ್ನೂ ನೀಡಿದೆ. ಅದರಂತೆ, ಬೆಳಗ್ಗೆ 8ರಿಂದ ರಾತ್ರಿ 10ವರೆಗೆ ಮಾತ್ರ ಪಟಾಕಿ ಸಿಡಿಸಬಹುದು. ಉಳಿದ ಸಮಯದಲ್ಲಿ ಸಿಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಈ ನಿರ್ದೇಶನದ ಮೇರೆಗೆ ದೀಪಾವಳಿ ಹಬ್ಬವನ್ನು 'ಪರಿಸರ ಸ್ನೇಹಿ ದೀಪಾವಳಿ–2025'ಯಾಗಿ ಆಚರಿಸಲು ಪರಿಸರ ಸಚಿವರು ಸೂಚಿಸಿದ್ದಾರೆ. ಹೀಗಾಗಿ ನಿಷೇಧಿತ ಪಟಾಕಿಗಳ ಉತ್ಪಾದನೆ, ಸಂಗ್ರಹ, ಮಾರಾಟ, ಬಳಕೆ ನಿಷೇಧಿಸಲಾಗಿದೆ. ಅಂತಹ ಪಟಾಕಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಕಾನೂನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಬೇಕು ಎಂದು ಸರ್ಕಾರದ ಎಲ್ಲಾ ಇಲಾಖೆ, ಸ್ಥಳೀಯ ಸಂಸ್ಥೆ ಹಾಗೂ ಪ್ರಾಧಿಕಾರಗಳ ಮುಖ್ಯಸ್ಥರಿಗೆ ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಹೊರಡಿಸಿರುವ ಸುತ್ತೋಲೆಯಲ್ಲಿ ಹೊರಡಿಸಿದ್ದಾರೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಟ್ಟುನಿಟ್ಟಿನ ಸೂಚನೆ



ಹಸಿರು ಪಟಾಕಿಗಳನ್ನು ಮಾತ್ರವೇ ಬಳಸಲು ಅವಕಾಶವಿದ್ದು, ಇತರೆ ಪಟಾಕಿಗಳನ್ನು ನಿಷೇಧಿಸಬೇಕು. ಇದಕ್ಕೆ ಸ್ಥಳೀಯ ಸಂಸ್ಥೆಗಳು, ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. –ಸುತ್ತೋಲೆಯಲ್ಲಿ ಸೂಚನೆ

ಬಾಲಕಿ ಅತ್ಯಾಚಾರ–ಹತ್ಯೆ ನಂತರ ಫುಟ್‌ಪಾತ್ ಮೇಲೆ ಮಲಗಿದ್ದ ಮಹಿಳೆ ಅತ್ಯಾಚಾರಕ್ಕೂ ಯತ್ನಿಸಿದ್ದ ದುಷ್ಕರ್ಮಿ

ಪೊಲೀಸರ ವಿಚಾರಣೆಯಲ್ಲಿ ಆತಂಕಕಾರಿ ವಿಷಯ ಬಹಿರಂಗ

ಮೈಸೂರು, ಅ.11(ಆರ್‌ಕೆ)– ಕಳೆದ ಗುರುವಾರ ದಸರಾ ವಸ್ತುಪ್ರದರ್ಶನದ ಬಳಿ ಪೋಷಕರೊಂದಿಗೆ ಮಲಗಿದ್ದ ಅಪ್ರಾಪ್ತ ಬಾಲಕಿ ಹೊತ್ತೊಯ್ದು ಅತ್ಯಾಚಾರವೆಸಗಿ ಬರ್ಬರವಾಗಿ ಹತ್ಯೆಗೈದ ಬಳಿಕವೂ ದುಷ್ಕರ್ಮಿ ಕಾರ್ತಿಕ್, ಛತ್ರಿಮರದ ಬಳಿ ಫುಟ್‌ಪಾತ್‌ನಲ್ಲಿ ಮಲಗಿದ್ದ ಮಹಿಳೆಯೊಬ್ಬರ ಮೇಲೂ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ ಎಂಬ ಆತಂಕಕಾರಿ ವಿಷಯ ಬೆಳಕಿಗೆ ಬಂದಿದೆ.


ಆರೋಪಿ ಕಾರ್ತಿಕ್

ಪ್ರಕರಣದ ನಂತರ ಸಿಕ್ಕಿ ಬಿದ್ದ ಆರೋಪಿಯನ್ನು ನಿನ್ನೆ (ಅ.10) ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಟ್ರಾಮಾ ಕೇರ್ ಸೆಂಟರ್‌ನ ಜೈಲು ವಾರ್ಡ್‌ನಲ್ಲಿ ವಿಚಾರಣೆ ನಡೆಸಿದ ಪೊಲೀಸರಿಗೆ ಆತ ಈ ಸ್ಫೋಟಕ ಮಾಹಿತಿ ಬಾಯ್ಬಿಟ್ಟಿದ್ದಾನೆ ಎನ್ನಲಾಗಿದೆ. ದಸರಾ ವಸ್ತುಪ್ರದರ್ಶನದ ಬಳಿ ಗುರುವಾರ ಮುಂಜಾನೆ ಸುಮಾರು 4ರಿಂದ 4.30 ಗಂಟೆಯಲ್ಲಿ ಅಪ್ರಾಪ್ತ ಬಾಲಕಿ ಹೊತ್ತೊಯ್ದು, ಅತ್ಯಾಚಾರ ನಡೆಸಿ, ಚಾಕುವಿನಿಂದ 19 ಬಾರಿ ಇರಿದು ಕೊಂದ ನಂತರ, ಅರಮನೆ ಪೂರ್ವ ದ್ವಾರದ ಫುಟ್‌ಪಾತ್ ಮೇಲೆ ನಡೆದುಕೊಂಡು ಹಾರ್ಡಿಂಜ್ ಸರ್ಕಲ್ ಮೂಲಕ ಬಿ.ಎನ್.ರಸ್ತೆ ಹಾದು ಛತ್ರಿಮರದ ಬಳಿ ಹೋಗಿದ್ದಾನೆ ಆಗ ಇನ್ನೂ ಕತ್ತಲಿತ್ತು ಎಂದು ಆತ ತಿಳಿಸಿದ್ದಾನೆ. ಅಲ್ಲಿನ ಅಂಗಡಿಗಳ ಮುಂದೆ ಫುಟ್‌ಪಾತ್‌ನಲ್ಲಿ ಮಲಗಿದ್ದ ನಾಲ್ಕೈದು ಮಂದಿ ಪೈಕಿ ಓರ್ವ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಆಕೆ ಎಚ್ಚೆತ್ತುಗೊಂಡು ಕಿರುಚಾಡತೊಡಗಿದ್ದಾಳೆ. ಆಗ ಅಕ್ಕ–ಪಕ್ಕದಲ್ಲಿ ▶ 6ನೇ ಪುಟಕ್ಕೆ

ಮೊಮ್ಮಗನ ರಾಜಕಾರಣಕ್ಕೆ ಸಿಎಂ ಸಿದ್ದರಾಮಯ್ಯ ತಯಾರಿ



ಸಂಗ್ರಹ ಚಿತ್ರ

- ಪ್ರಮುಖ ರಾಜಕೀಯ ವೇದಿಕೆಯಲ್ಲಿ ತಾತನೊಂದಿಗೆ ಧವನ್ ರಾಕೇಶ್ ಉಪಸ್ಥಿತಿ
- ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಭೇಟಿಯ ಸಚಿತ್ರ ವಿವರದೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ನೀಡಿದ ಯುವ ಮುಖಂಡ

ಬೆಂಗಳೂರು,ಅ.11(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊಮ್ಮಗ ಧವನ್ ರಾಕೇಶ್ ಅವರನ್ನು ರಾಜಕೀಯಕ್ಕೆ ತರಲು ವೇದಿಕೆ ಸಿದ್ಧಪಡಿಸಿಕೊಂಡಂತಿದೆ.

ಇದಕ್ಕೆ ಪುಷ್ಟಿ ನೀಡುವಂತೆ ಧವನ್ ರಾಕೇಶ್ ಇಂದು ಇನ್‌ಸ್ಟಾಗ್ರಾಂನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜೊತೆಗಿನ ಫೋಟೋ ಹಂಚಿಕೊಂಡು ರಾಜಕೀಯ ಬಗೆಗಿನ ತಮ್ಮ ಒಲವು ವ್ಯಕ್ತಪಡಿಸಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ನಮ್ಮ ತಾತಾ ಸಿದ್ದರಾಮಯ್ಯ ಅವರ ಜೊತೆ ಕಳೆದ ಆಗಸ್ಟ್ 8ರಂದು ಭೇಟಿ ಮಾಡುವ ಅವಕಾಶ ದೊರೆಯಿತು.

ಪ್ರಾಮಾಣಿಕ ನಾಯಕರೊಬ್ಬರು ಎಷ್ಟರಮಟ್ಟಿಗೆ ಸರಳತನ ಹೊಂದಿದ್ದಾರೆ ಎಂಬುದನ್ನು ನಾನು ಅವರನ್ನು ಕಂಡಾಗ ತಿಳಿದುಕೊಂಡೆ. ರಾಜಕೀಯ ವಲಯದಲ್ಲಿ ಪ್ರಾಮಾಣಿಕತೆಯನ್ನು ಬಹುತೇಕ ಕಡೆಗಣಿಸಲಾಗಿದೆ. ಆದರೆ, ಇದೇ ವಲಯದಲ್ಲಿ ಪ್ರಾಮಾಣಿಕವಾಗಿರಲು ಯತ್ನಿಸುವ, ತನ್ನ ನಂಬಿಕೆಗೆ ಬದ್ಧವಾಗಿರುವ ನಾಯಕರನ್ನು ಭೇಟಿಯಾದುದು ನನ್ನ ಸುದೈವ. ಇಂತಹ ಮಹಾನ್ ನಾಯಕನ ಭೇಟಿಗೆ ಅವಕಾಶ ಮಾಡಿಕೊಟ್ಟ ನನ್ನ ತಾತನಿಗೆ ಎಷ್ಟು ಧನ್ಯವಾದ ಅರ್ಪಿಸಿದರೂ ಸಾಲದು ಎಂದು ಬರೆದುಕೊಂಡಿದ್ದಾರೆ. ಅಂತರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯೊಂದರಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ▶ 6ನೇ ಪುಟಕ್ಕೆ

ಕನ್ನಡ ಮಾಧ್ಯಮದ ಅನುದಾನಿತ ಶಾಲೆಗಳಿಗೂ ಸರ್ಕಾರದಿಂದಲೇ ಅತಿಥಿ ಶಿಕ್ಷಕರ ನೇಮಕ


ಮಧು ಬಂಗಾರಪ್ಪ

ಶಿವಮೊಗ್ಗ, ಅ.11– ಕನ್ನಡ ಮಾಧ್ಯಮದ ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರದಿಂದಲೇ ಅತಿಥಿ ಶಿಕ್ಷಕರ ನೇಮಕ ಮಾಡಲು ನಿರ್ಧರಿಸಲಾಗಿದೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಎಸ್.ಬಂಗಾರಪ್ಪ ಹೇಳಿದರು. ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅನುದಾನಿತ ಶಾಲೆಗಳ 6 ಸಾವಿರ ಹಾಗೂ ಸರ್ಕಾರಿ ಶಾಲೆಗಳ 12 ಸಾವಿರ ಸೇರಿದಂತೆ 18 ಸಾವಿರ ಶಿಕ್ಷಕರ ನೇಮಕಕ್ಕೆ ಶೀಘ್ರ ಅಧಿಸೂಚನೆ ಹೊರಡಿಸಲಾಗುತ್ತಿದೆ. ಅದರ ಹೊರತಾಗಿ ಅನುದಾನಿತ ಶಾಲೆಗಳಲ್ಲಿ ಖಾಲಿ ಉಳಿಯುವ ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕ ಮಾಡಿಕೊಳ್ಳಲು ಆಯಾ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲಾಗುವುದು. ಬಹುಶಃ ಅನುದಾನಿತ ಶಾಲೆಗಳಿಗೆ 4ರಿಂದ 5 ಸಾವಿರ ▶ 6ನೇ ಪುಟಕ್ಕೆ





ಮೈಸೂರು ಮಿತ್ರ

ಭಾನುವಾರ 12 ಅಕ್ಟೋಬರ್ 2025

ಮೈಸೂರು ಸೇರಿ 4 ಜಿಲ್ಲಾ ಕೇಂದ್ರಗಳಲ್ಲಿ ಇನ್ನೋವೇಷನ್ ಕ್ಲಸ್ಟರ್ ಸ್ಥಾಪನೆ

ಬೆಂಗಳೂರು, ಅ.11– ರಾಜ್ಯದಾದ್ಯಂತ ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಬೆಂಗಳೂರು ಹೊರತು ಪಡಿಸಿ, ಮೈಸೂರು ಸೇರಿದಂತೆ 4 ನಗರಗಳಲ್ಲಿ ಭಾರೀ ಹೂಡಿಕೆಗೆ ಮುಂದಾಗಿದೆ. ಇದರಿಂದ ಉದ್ಯೋಗ ಸೃಷ್ಟಿ ಜತೆಗೆ, ಆ ನಗರಗಳ ಮೂಲ ಸೌಕರ್ಯ ಬದಲಾವಣೆಯಾಗಲಿದೆ.ಎಂದು ಐಟಿ/ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಇಂಡಿಯಾ ಇನ್ನೋವೇಶನ್ ಸಮ್ಮೇಳನದಲ್ಲಿ ಮಾತನಾಡಿದ ಅವರು, ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ನಗರಗಳಲ್ಲಿ 1,000 ಕೋಟಿ ರೂಪಾಯಿ ಹೂಡಿಕೆ ಮಾಡಿ ನಾವೀನ್ಯತಾ ಕೇಂದ್ರಗಳನ್ನು (ಇನ್ನೋವೇಷನ್ ಕ್ಲಸ್ಟರ್) ಸ್ಥಾಪಿಸಲಾಗುವುದು. ಕರ್ನಾಟಕವು ಕೇವಲ ಹೂಡಿಕೆ ತಾಣವಲ್ಲ, ಬದಲಿಗೆ ಜಾಗತಿಕ ಜ್ಞಾನ ಮತ್ತು ಕೌಶಲ್ಯದ ರಾಜಧಾನಿಯಾಗಿ ಬೆಳೆದಿದೆ ಎಂದು ಹೇಳಿದರು.

ಸಾವಿರ ಕೋಟಿ ಹೂಡಿಕೆ



ಪ್ರಿಯಾಂಕ್ ಖರ್ಗೆ


ಮುಂಬರುವ ಬೆಂಗಳೂರು ಟೆಕ್ ಸಮ್ಮೇಳನದಲ್ಲಿ 20,000 ಸ್ಟಾರ್ಟ್‌ಅಪ್‌ಗಳನ್ನು ಪ್ರದರ್ಶಿಸಲು 'ಫ್ಯೂಚರ್ ಮೇಕರ್ಸ್' ಟ್ರ್ಯಾಕ್ ಅನ್ನು ಪ್ರಾರಂಭಿಸಲಾಗುವುದು ಮತ್ತು ಭಾರತದ ಅಗ್ರ 50 ಎಐ ಕಂಪನಿಗಳನ್ನು ಗುರುತಿಸಲು 100 ಕೋಟಿ ರೂಪಾಯಿ ನಿಧಿಯನ್ನು ಘೋಷಿಸಲಾಗುವುದು ಎಂದೂ ಮಾಹಿತಿ ನೀಡಿದರು.

ಕರ್ನಾಟಕ ದೇಶದ ಡಿಜಿಟಲ್ ಆರ್ಥಿಕತೆಯನ್ನು ಮುನ್ನಡೆಸುತ್ತಿದೆ: ಕರ್ನಾಟಕ ಇಂದು ಇತರ ರಾಜ್ಯಗಳೊಂದಿಗೆ ಸ್ಪರ್ಧಿಸುತ್ತಿಲ್ಲ. ನಾವು ನಾವೀನ್ಯತೆ, ಕೌಶಲ ಮತ್ತು ರಾಜಕೀಯ ಇಚ್ಛಾಶಕ್ತಿ ಮೂಲಕ ಜಾಗತಿಕ ಪರಿಹಾರಗಳನ್ನು ರಚಿಸಲು ನಮ್ಮೊಂದಿಗೆ ನಾವೇ ಸ್ಪರ್ಧಿಸುತ್ತಿದ್ದೇವೆ. ಕರ್ನಾಟಕವು ಭಾರತದ ಶೇ.40ರಷ್ಟು ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಭೆ, ಶೇ.30ರಷ್ಟು ಗ್ಲೋಬಲ್ ಕೆಪಬಿಲಿಟಿ ಸೆಂಟರ್‌ಗಳು ಮತ್ತು ದೇಶದ 110 ಯುನಿಕಾರ್ನ್‌ಗಳಲ್ಲಿ 48 ಅನ್ನು ಹೊಂದಿದೆ. ಇದು ದೇಶದ ಡಿಜಿಟಲ್ ಆರ್ಥಿಕತೆಯನ್ನು ಮುನ್ನಡೆಸುತ್ತಿದೆ ಎಂದು ಹೇಳಿದರು.

ರಾಜ್ಯದ ನಾವೀನ್ಯತಾ ಪರಿಸರ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ ಕೌಶಲ್ಯ ಮತ್ತು ಸಂಶೋಧನೆ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ. ವಿಶ್ವದ ಅಗ್ರ ಐದು ಎಐ ನಗರಗಳಲ್ಲಿ ಕರ್ನಾಟಕದ ಬೆಂಗಳೂರು ಒಂದು. ಇಲ್ಲಿನ ಯಶಸ್ಸಿಗೆ 'ಜನ, ನೀತಿ ಮತ್ತು ಭಾಗವಹಿಸುವಿಕೆ' ಮಾದರಿಯೇ ಕಾರಣ. ಇದು ಶಿಕ್ಷಣ ಸಂಸ್ಥೆಗಳಿಂದ ಉದ್ಯಮಿಗಳವರೆಗೆ ಎಲ್ಲರನ್ನೂ ಒಳಗೊಂಡು ಬೆಳವಣಿಗೆಯನ್ನು ರೂಪಿಸುತ್ತದೆ ಎಂದು ವಿವರಿಸಿದರು.

ವಕೀಲರು ಸದಾ ಸಮಾಜಕ್ಕೆ ಮಾದರಿಯಾಗಿರಬೇಕು

ಸೈಕಲ್ ಅಗರ್‌ಬತ್ತೀಸ್‌ನ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್‌ರಂಗಾ ಅಭಿಮತ



ವಿದ್ಯಾವರ್ಧಕ ಕಾನೂನು ಕಾಲೇಜಲ್ಲಿ ಆಯೋಜಿಸಿದ್ದ 2025–26ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಕಾರ್ಯಕ್ರಮದಲ್ಲಿ ವಾರ್ಷಿಕ ವಿಶೇಷಾಂಕ ವಿಕಾಸ–2025ವನ್ನು ಅರ್ಜುನ್‌ರಂಗಾ ಬಿಡುಗಡೆ ಮಾಡಿದರು.

ಮೈಸೂರು,ಅ.11–ವ್ಯಾಪಾರ–ವ್ಯವಹಾರಗಳಲ್ಲಿ ತೊಡಗಿಸಿಕೊಂಡವರಿಗೆ ಒಂದಲ್ಲ ಒಂದು ಸಂದರ್ಭದಲ್ಲಿ ವಕೀಲರ ಸಹಾಯ ಅತ್ಯಗತ್ಯ ಎಂದು ಪ್ರಖ್ಯಾತ ಸೈಕಲ್ ಅಗರ್ ಬತ್ತೀಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಅರ್ಜುನ್‌ರಂಗ ತಿಳಿಸಿದರು.

ನಗರದ ವಿದ್ಯಾವರ್ಧಕ ಕಾನೂನು ಕಾಲೇಜು ಆಯೋಜಿಸಿದ್ದ 2025–26ರ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಕೀಲರು ಸಮಾಜಕ್ಕೆ ಮಾದರಿಯಾಗಿರಬೇಕು. ತಮ್ಮ ವೃತ್ತಿಯಲ್ಲಿ ಯಶಸ್ಸುಗಳಿಸಬೇಕಾದರೆ ಧೈರ್ಯವಿರಬೇಕೆಂದು ತಿಳಿಸಿದರು.

ತಮ್ಮ ವ್ಯಾಪಾರ–ಉದ್ಯಮದಲ್ಲಿ ಉಂಟಾಗುವ ಕಾನೂನಿನ ತೊಡಕುಗಳನ್ನು ವಕೀಲರ ಮುಖಾಂತರ ಹೇಗೆ ಬಗೆಹರಿಸಿಕೊಂಡೆವು ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ವಕೀಲರಿಲ್ಲದೆ ವ್ಯವಸ್ಥಿತ ಸಮಾಜವನ್ನು ನೋಡಲು ಸಾಧ್ಯವಿಲ್ಲ. ವಕೀಲರು ತಮ್ಮ ವೃತ್ತಿಯಲ್ಲಿ ಯಶಸ್ಸುಗಳಿಸಬೇಕೆಂದರೆ ಕಠಿಣ ಪರಿಶ್ರಮ ಹಾಗೂ ಪ್ರಾಮಾಣಿಕತೆ ಇರಬೇಕು ಎಂದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ವಿದ್ಯಾವರ್ಧಕ ಕಾನೂನು ಕಾಲೇಜಿನ ಮೇಲ್ವಿಚಾರಣಾ ಸಮಿತಿ ಮುಖ್ಯಸ್ಥ ಎಸ್.ಶಿವಲಿಂಗಯ್ಯ, ಪ್ರಾಂಶುಪಾಲ ಡಾ.ಪಿ.ದೀಪು, ಕಾರ್ಯಕ್ರಮದ ಆಯೋಜಕರಾದ ಡಾ.ಪ್ರಶಾಂತ್ ಟಿ.ಎಂ. ಹಾಗೂ ಡಾ.ಬೋರೇಗೌಡ ಎಸ್.ಬಿ. ಇತರರು ಉಪಸ್ಥಿತರಿದ್ದರು. ಇದೇ ವೇಳೆ ಕಾಲೇಜಿನ ವಾರ್ಷಿಕ ವಿಶೇಷಾಂಕ ವಿಕಾಸ–2025ವನ್ನು ಬಿಡುಗಡೆ ಮಾಡಲಾಯಿತು.

ಎಂಎಲ್‌ಸಿ ಡಾ.ಯತೀಂದ್ರ ಮೇಲಿನ ಆರೋಪ ನಿರಾಧಾರ

ಮೈಸೂರು,ಅ.11(ಜಿಎ)–ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ವಿರುದ್ಧ ಮಾಜಿ ಸಂಸದ ಪ್ರತಾಪ್‌ಸಿಂಹ ಮಾಡಿರುವ ಆರೋಪ ನಿರಾಧಾರ ಎಂದು ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂಎಲ್‌ಸಿ ಡಾ.ಯತೀಂದ್ರ ಕಲೆಕ್ಷನ್ ಮಾಸ್ಟರ್ ಎಂದು ಮಾಜಿ ಸಂಸದ ಪ್ರತಾಪ್‌ಸಿಂಹ ಸುಳ್ಳು ಆರೋಪ ಮಾಡಿದ್ದಾರೆ. ವಾಸ್ತವವಾಗಿ ಯಡಿಯೂರಪ್ಪನವರ ಅವಧಿಯಲ್ಲಿ ಅವರ ಪುತ್ರ ವಿಜಯೇಂದ್ರ ಅವರೇ ವರ್ಗಾವಣೆ ದಂಧೆ ನಡೆಸುತ್ತಿದ್ದುದು ಎಲ್ಲರಿಗೂ ತಿಳಿದಿದೆ. ಈ ಆರೋಪ ಸ್ವತಃ ಬಸವನಗೌಡ ಪಾಟೀಲ್ ಯತ್ನಾಳ್ ಅವರೇ ಮಾಡಿದ್ದರೆಂಬುದನ್ನು ನೆನಪಿಸಿಕೊಳ್ಳಬಹುದಾಗಿದೆ ಎಂದರು.

ಮೈಸೂರು ಪೊಲೀಸರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದು, ಬಾಲಕಿ ಕೊಲೆ ಆದ 24 ಗಂಟೆಗಳಲ್ಲಿಯೇ ಆರೋಪಿಯನ್ನು ಬಂಧಿಸಿದ್ದಾರೆ. ಒರಿಸ್ಸಾದಲ್ಲಿ ಮಹಿಳೆಯ ಬೆತ್ತಲೆ ಮೆರವಣಿಗೆ, ಲೈಂಗಿಕ ದೌರ್ಜನ್ಯ, ಮೊದಲಾದ ಬಗ್ಗೆ ಪ್ರತಾಪ್‌ಸಿಂಹ ಏಕೆ ಧ್ವನಿಯೆತ್ತುತ್ತಿಲ್ಲ ಎಂದು ಪ್ರಶ್ನಿಸಿದರು. ಗೋಷ್ಠಿಯಲ್ಲಿ ಕೇಶವ, ಸೈಹದ್ ಫಾರುಕ್, ರಹೀಂ, ನಂಜುಂಡಸ್ವಾಮಿ, ರವಿ, ಮದನ್ ಉಪಸ್ಥಿತರಿದ್ದರು.



ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರನ್ನು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಭೇಟಿ ಮಾಡಿ ಅವರ ಆರೋಗ್ಯ ವಿಚಾರಿಸಿದರು. ಇದೇ ಸಂದರ್ಭದಲ್ಲಿ ಶೀಘ್ರ ಗುಣಮುಖರಾಗಿ ಹಾಸನಾಂಬೆಯ ದರ್ಶನಕ್ಕೆ ಆಗಮಿಸುವಂತೆ ದೇವೇಗೌಡರನ್ನು ಕೋರಿದರು.

ಸರ್ಕಾರದಿಂದಲೇ ಆಂಬುಲೆನ್ಸ್ ಸೇವೆ

3,691 ಸಿಬ್ಬಂದಿ ನೇಮಕಕ್ಕೆ ನಿರ್ಧಾರ

ಬೆಂಗಳೂರು,ಅ.11–ರಾಜ್ಯದಲ್ಲಿ ಮೊದಲ ಬಾರಿಗೆ '108–ಆರೋಗ್ಯ ಕವಚ' ಹಾಗೂ '104–ಆರೋಗ್ಯ ಸಹಾಯವಾಣಿ' ಯೋಜನೆಯನ್ನು ಆರೋಗ್ಯ ಇಲಾಖೆ ವತಿಯಿಂದಲೇ ಜಾರಿ ಗೊಳಿಸುತ್ತಿದ್ದು, ಇದಕ್ಕೆ ಅಗತ್ಯವಿರುವ 3,691 ಸಿಬ್ಬಂದಿಯನ್ನು ಗುತ್ತಿಗೆ ಹಾಗೂ ಹೊರಗುತ್ತಿಗೆ ನೇಮಕಕ್ಕೆ ಮಂಜೂರಾತಿ ನೀಡಲಾಗಿದೆ. ಬೆಳಗ್ಗೆ ಹಾಗೂ ಮಧ್ಯಾಹ್ನದ ಅವಧಿ ಶಿಫ್ಟ್, ರಾತ್ರಿ ಪಾಳಿ ಶಿಫ್ಟ್ ಸೇರಿ 1,700 ಪೈಲಟ್ (ಚಾಲಕರು) 1,700 ಇಎಂಟಿ (ತುರ್ತು ಚಿಕಿತ್ಸಾ ತಂತ್ರಜ್ಞ), ಜಿಲ್ಲಾ ವ್ಯವಸ್ಥಾಪಕರು ಹಾಗೂ ಫ್ಲೀಟ್ ವ್ಯವಸ್ಥಾಪಕರು 62, ಎಸ್‌ಪಿಎಂ ಸಿಬ್ಬಂದಿ 5 ಮಂದಿ ನೇಮಕ ಮಾಡಲಾಗುವುದು. ಸಹಾಯವಾಣಿ ಸ್ಥಾಪನೆ ಮಾಡಿ ನಿರ್ವಹಣೆ ಮಾಡಲು ಕೇಂದ್ರೀಕೃತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್, ಜಿಲ್ಲಾ ಕಂಟ್ರೋಲ್ ರೂಂ ಸ್ಥಾಪಿಸಿ ಆಡಳಿತ ಸಿಬ್ಬಂದಿ, ನಿರ್ವಹಣಾ ಸಿಬ್ಬಂದಿ, ಕಾಲ್ ಸೆಂಟರ್ ಸಿಬ್ಬಂದಿ, ತಂತ್ರಜ್ಞರು ಸೇರಿ ವಿವಿಧ ಸಿಬ್ಬಂದಿ ನೇಮಿಸಬೇಕಿದೆ. ಹೀಗಾಗಿ 224 ಮಂದಿ ಸಿಬ್ಬಂದಿ ನೇಮಿಸಲು ಆರೋಗ್ಯ ಇಲಾಖೆ ಒಪ್ಪಿಗೆ ನೀಡಿದೆ.



ಪ್ರಾಥಮಿಕ ಹಂತದಲ್ಲಿ ಅನುಷ್ಠಾನಗೊಳಿಸಲು ಅಂದಾಜಿಸಲಾದ ಮಾನವ ಸಂಪನ್ಮೂಲಕ್ಕೆ ಒಪ್ಪಿಗೆ ನೀಡಿದ್ದು, ತುರ್ತು ವೈದ್ಯಕೀಯ ಸೇವೆಗಳ ನಿರ್ದೇಶನಾಲಯದ ಸೂಚನೆಗೆ ತಕ್ಕಂತೆ ಬದಲಾವಣೆ ಮಾಡಲು ಅವಕಾಶ ನೀಡಿ ಅನುಮೋದನೆ ನೀಡಲಾಗಿದೆ

ನೂತನ ನಿರ್ದೇಶಕರಿಗೆ ಸನ್ಮಾನ



ದಿ ಮೈಸೂರು ಕೊ ಆಪರೇಟಿವ್ ಬ್ಯಾಂಕ್ ವತಿಯಿಂದ ನೂತನ ನಿರ್ದೇಶಕರಾದ ಶ್ರೀಮತಿ ವಸಂತ ಮುನೀಷ್, ಎ.ಮಂಚಪ್ಪ, ವೈ.ವಿಕಾಸ್ ಅವರನ್ನು ಸನ್ಮಾನಿಸಲಾಯಿತು. ಅದ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎಸ್‌ಬಿಎಂ ಮಂಜು, ಎನ್.ಯೋಗಾನಂದ್, ರಾಜಕೀಯ ರವಿಕುಮಾರ್, ಆರ್ ಸೋಮಣ್ಣ, ಹೆಚ್.ಹರೀಶ್‌ಕುಮಾರ್, ಪಡುವಾರಹಳ್ಳಿಯ ಎಂ ರಾಮಕೃಷ್ಣ, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ, ಸಿ.ಎಸ್ ರಾಮಕೃಷ್ಣಯ್ಯ, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಉತಸ್ಥತರಿದ್ದರು.

ಇಂದು ದಸರಾ ದೀಪಾಲಂಕಾರಕ್ಕೆ ತೆರೆ

ಮೈಸೂರು, ಅ.11(ವಿವಿಹೆಚ್)– ದಸರಾ ವಿದ್ಯುತ್ ದೀಪಾಲಂಕಾರಕ್ಕೆ ನಾಳೆ ತೆರೆ ಬೀಳಲಿದ್ದು, ಪ್ರವಾಸಿಗರು ಸೇರಿದಂತೆ ಸ್ಥಳೀಯರು ಅಂತಿಮವಾಗಿ ದೀಪಾಲಂಕಾರ ನೋಡಲು ರಸ್ತೆಗಿಳಿದಿದ್ದ ಹಿನ್ನೆಲೆಯಲ್ಲಿ ಶನಿವಾರ ಸಂಜೆ ನಗರದ ಹೃದಯ ಭಾಗದ ರಸ್ತೆ, ವೃತ್ತಗಳಲ್ಲಿ ಬಾರೀ ಜನ ಹಾಗೂ ವಾಹನ ದಟ್ಟಣೆ ಉಂಟಾಗಿತ್ತು

ಶನಿವಾರ ವೀಕೆಂಡ್, ಹಾಗಾಗಿ ಸಂಜೆಯಿಂದ ತಡರಾತ್ರಿವರೆಗೆ ನಗರದ ಪ್ರಮುಖ ರಸ್ತೆ ವೃತ್ತ ಹಾಗೂ ಅರಮನೆ ಸುತ್ತಮುತ್ತ ಟ್ರಾಫಿಕ್ ಜಾವ್ ಉಂಟಾಗಿತ್ತು. ಸಿಗ್ನಲ್ ದಾಟಲು ತಾಸುಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಅರಮನೆ ಸುತ್ತಮುತ್ತಲಿನ ರಸ್ತೆ, ಅರಸು ರಸ್ತೆ, ಹಾರ್ಡಿಂಜ್ ವೃತ್ತ, ಕೆ.ಆರ್.ವೃತ್ತ, ಚಾಮರಾಜ ಒಡೆಯರ್ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ನಾಡಹಬ್ಬದ ಆಕರ್ಷಕ ದೀಪಾಲಂಕಾರ ವೀಕ್ಷಣೆಗೆ ನಾಳೆಯೂ ಜನ ಮುಗಿಬೀಳಲಿದ್ದು ವಾಹನ ದಟ್ಟಣೆ ಪ್ರವಾಸಿಗರಿಗೆ ಬಾಧಿಸುವ ಸಾಧ್ಯತೆಯಿದೆ.



ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಕ್ಕೆ ಖಂಡನೆ

ಮೈಸೂರು: ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆದು ಹಲ್ಲೆಗೆ ಮುಂದಾಗಿರುವ ಮನುವಾದಿ ಪ್ರವೃತ್ತಿಯನ್ನು ಆದಿ ಕರ್ನಾಟಕ ಮಹಾ ಸಭಾ ಅಧ್ಯಕ್ಷ ಪಿ.ಸಿದ್ದರಾಜು (ಸುನಿಲ್)ಖಂಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆದು ಹಲ್ಲೆಗೆ ಮುಂದಾಗಿರುವ ಘಟನೆಯನ್ನು ಖಂಡಿಸುತ್ತಾ, ಸರ್ವೋಚ್ಛ ನ್ಯಾಯಾಲಯದಲ್ಲಿಯೇ ಈ ರೀತಿಯ ಘಟನೆ ನಡೆದಿರುವುದು ಸಂವಿಧಾನಕ್ಕೆ ಮಾಡಿದ ಅಪಮಾನ. ಮುಂದೆ ಈ ತರಹದ ಘಟನೆ ನಡೆಯದಂತೆ ಮುನ್ನೆಚ್ಚರಿಕೆಯ ಕಾನೂನು ಕ್ರಮ ಕೈಗೊಳ್ಳಬೇಕು. ವಕೀಲ ರಾಕೇಶ್ ಕಿಶೋರ್‌ರನ್ನು ಕೂಡಲೇ ಬಂಧಿಸಬೇಕು. ಇಲ್ಲವಾದಲ್ಲಿ ದೇಶದಾದ್ಯಂತ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಜಿ.ಡಿ.ಹರೀಶ್‌ಗೌಡರಿಗೆ ಅಭಿನಂದನೆ



ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಹುಣಸೂರಿನ ಶಾಸಕರಾದ ಜಿ.ಡಿ.ಹರೀಶ್‌ಗೌಡ ಅವರನ್ನು ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಕಚೇರಿಯಲ್ಲಿ ಅಭಿನಂದಿಸಲಾಯಿತು. ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿರ್ದೇಶಕ ವಿಕ್ರಂ ಅಯ್ಯಂಗಾರ್, ಗುತ್ತಿಗೆದಾರರಾದ ದೇವು, ಬೈರತಿ ಲಿಂಗರಾಜು, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ಅಮಿತ್ ಹಾಗೂ ವಿವಿಧ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

ನಾಯಕರ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು



ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ದ್ಯಾವಪ್ಪನಾಯಕ (ಗೌರವ ಅಧ್ಯಕ್ಷ), ಪ್ರಭಾಕರ ಹುಣಸೂರು (ಕಾರ್ಯಾಧ್ಯಕ್ಷ), ಎಸ್.ಶ್ರೀಧರನಾಯಕ ಚಾಮುಂಡಿಬೆಟ್ಟ (ರಾಜ್ಯಾಧ್ಯಕ್ಷ), ಜಿ.ಡಿ.ಸ್ವಾಮಿ (ರಾಜ್ಯ ಉಪಾಧ್ಯಕ್ಷ), ಎನ್. ಮಾದೇಶ್ ಕೆರೆಹಳ್ಳಿ (ಪ್ರಧಾನ ಕಾರ್ಯದರ್ಶಿ), ಕುಪ್ಪರವಳ್ಳಿ ಮೂರ್ತಿ (ಖಜಾಂಚಿ), ಎಂ.ಸುರೇಶ್‌ಕುಮಾರ ಬೀಡು (ಜಿಲ್ಲಾಧ್ಯಕ್ಷ), ಎಸ್.ಜಿ.ಶಿವಸ್ವಾಮಿ (ಜಿಲ್ಲಾ ಉಪಾಧ್ಯಕ್ಷ), ಎಂ.ಮಣಿಕಂಠ ನಾಯಕ (ಜಿಲ್ಲಾ ಪ್ರಧಾನ ಕಾರ್ಯದರ್ಶಿ), ಎಸ್.ರವಿನಾಯಕ (ಜಿಲ್ಲಾ ಸಂಘಟನಾ ಕಾರ್ಯದರ್ಶಿ), ರಾಜು ಮಾರ್ಕೆಟ್ (ನಗರ ಉಪಾಧ್ಯಕ್ಷ), ರಮೇಶ್ ಮಾರ್ಕೆಟ್ (ನಗರ ಉಪಾಧ್ಯಕ್ಷ), ಎಲ್.ಮಂಜುನಾಥ್ (ನಗರ ಕಾರ್ಯದರ್ಶಿ), ರವಿಕುಮಾರ್ (ಮೈಸೂರು ತಾಲೂಕು ಅಧ್ಯಕ್ಷ), ಎಸ್.ಸುಬ್ರಹ್ಮಣ್ಯ (ತಾಲೂಕು ಉಪಾಧ್ಯಕ್ಷ).

ನಿಧನ

ಕೆ.ಸುಂದರರಾಜು



ಮೈಸೂರು, ಅ. 11– ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ ಕೆ. ಸುಂದರರಾಜು (89) ಶನಿವಾರ ಬೆಳಗ್ಗೆ ನಿಧನರಾದರು. ಮೂಲತಃ ಚಾಮರಾಜನಗರ ತಾಲೂಕು ರಾಮಸಮುದ್ರದವರಾದ ಇವರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದರಾಜು



ಮೈಸೂರು: ಮೂಲತಃ ಕೊಳ್ಳೇಗಾಲ ತಾಲೂಕು ಮಾಲಂಗಿ ಗ್ರಾಮದವರಾಗಿದ್ದು ಹಾಲಿ ಮೈಸೂರಿನ ಬಸವೇಶ್ವರ ನಗರದಲ್ಲಿ ವಾಸವಾಗಿರುವ ಮಾಲಂಗಿ ಸಿದ್ದರಾಜು(60) ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ ರತ್ನಮ್ಮ, ಪುತ್ರ ಅವಿನಾಶ್, ಪುತ್ರಿ ಸೌಮ್ಯ, ಅಳಿಯ ಕುಮಾರ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ(ಅ.12) ಸಂಜೆ 4 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಸಿ. ವಿಶ್ವನಾಥ್ ಹಾಗೂ ಜಯಂತಿ ವಿ. ಭಟ್, ವ್ಯಾಖ್ಯಾನ– ಡಾ.ಎನ್.ಎಸ್.ತಾರಾನಾಥ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮಧುಲಿಕ ಶ್ರೀನಿವಾಸ್, 9.40 ನಮ್ಮ ಆರೋಗ್ಯ–ನವಜಾತ ಶಿಶು ಹಾಗೂ ಮಕ್ಕಳಲ್ಲಿ ಹರ್ನಿಯಾ ಮತ್ತು ಅದರ ಸಂಬಂಧದ ತೊಂದರೆ ಕುರಿತು ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಪ್ರಶಾಂತ್ ಕುಮಾರ್.ಎಂ ಅವರೊಂದಿಗೆ ಸಂದರ್ಶನ. ಸಂದರ್ಶಕರು : ದಿಗ್ವಿಜಯ್ ಬಿ., 10.00 ಕೇಳಿ ಗಿಳಿಗಳೇ, ಕಥೆ ಕೇಳು ಪುಟ್ಟ, ಪ್ರಸ್ತುತಿ– ಬಿ.ಜಿ.ಕವಿತಾ, 10.30 KRISH-TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಅಂತಾರಾಷ್ಟ್ರೀಯ ವುಶು ಚಾಂಪಿಯನ್ ಶಿಪ್‌ನ ಚಿನ್ನದ ಪದಕದ ವಿಜೇತೆ ಪ್ರಣತಿ.ಜಿ ಹಾಗೂ ಅವರ ತಂದೆ ಗಿರಿಧರ್ ಎಸ್.ಡಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ದಿಗ್ವಿಜಯ್ ಬಿ, 11.05 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, ಮಹಿಳಾ ಪರ ಕಾನೂನು – ಉಪಯೋಗ ದುರುಪಯೋಗ ವಿಷಯದ ಅಡಿಯಲ್ಲಿ ಕೌಟುಂಬಿಕ ದೌರ್ಜನ್ಯ ಕಾಯಿದೆ ಕುರಿತು ವಕೀಲರಾದ ಪ್ರಭಾ ಆರ್. ಗಿರಿಮಾಜಿ ಅವರಿಂದ ಮಾಹಿತಿ, ಪ್ರಸ್ತುತಿ– ಕೆ.ಎಲ್.ರಾಜೇಶ್ವರಿ, 12.35 ದೇವರನಾಮ, 12.45 ಜನಪದ ಸಂಗೀತ : ಮಂಡ್ಯ ಜಿಲ್ಲೆ ಕೊತ್ತತ್ತಿ ಹೋಬಳಿ ಬೇವಿನ ಹಳ್ಳಿಯ ನಂಜಮ್ಮ ಹಾಗೂ ಸಂಗಡಿಗರಿಂದ ದೂರಿ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು – ಎ.ಜೆ.ದಿವ್ಯಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವೆ ವಿಶಾಖಪಟ್ನಂನ ವಿಡಿಸಿಎ ಕ್ರೀಡಾಂಗಣದಲ್ಲಿ ನಡೆಯುವ ಐಸಿಸಿ ವಿಶ್ವಕಪ್ ಮಹಿಳಾ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ



ಇಂದಿನ ಪಂಚಾಂಗ

12.10.2025 ಭಾನುವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಮೃಗಶಿರ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾ ಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ, ಪ್ಯಾರಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹ ಮತ್ತು ಮೂಲವ್ಯಾಧಿ/ಪೈಲ್ಸ್ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ ಶಾಖೆ, ಬ್ರಹ್ಮಶ್ರೀ ನಾರಾಯಣ ಗುರು ಮಿಷನ್ ಮತ್ತು ಚಾರಿಟಬಲ್ ಟ್ರಸ್ಟ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ :** ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮ, ಉದ್ಘಾಟನೆ : ಆರ್ಯ ಈಡಿಗ ಮಹಾಸಂಸ್ಥಾನದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಸಚಿವ ಮಧು ಬಂಗಾರಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಕೆ.ಸುಕುಮಾರನ್, ವಿ.ಕೆ.ಲೋಕೇಶ್, ಎಂ.ಕೆ. ಪೋತರಾಜ್, ಜಿ.ವಿ.ವೆಂಕಪ್ಪ, ಅಧ್ಯಕ್ಷತೆ : ಎಸ್‌ಎನ್‌ಡಿಪಿ, ಮೈಸೂರು ಶಾಖೆ ಅಧ್ಯಕ್ಷ ಜಿ. ರಾಜೇಂದ್ರನ್, ಸ್ಥಳ: ಮೈಸೂರು ವೈದ್ಯಕೀಯ ಕಾಲೇಜು ಸಭಾಂಗಣ, ಜೆ.ಕೆ. ಮೈದಾನ, ಬೆಳಗ್ಗೆ 8ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪು ಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳೆಯರ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10 ರಿಂದ.

■ **ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಹಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್ :** ಶ್ರೀ ಬನ್ನಿ ಮಹಾಕಾಳೇಶ್ವರಿ ಶ್ರೀ ಆಯರಹಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮನವರ ಜಾತ್ರಾ ಮಹೋತ್ಸವ, ಬೆಳಗ್ಗೆ 9ಕ್ಕೆ ವಾಹನೋತ್ಸವ ಪೂಜೆ, ಸ್ಥಳ: ದೇವಸ್ಥಾನ, ಕುರುಬಾರಹಳ್ಳಿ, ಸಿದ್ಧಾರ್ಥನಗರ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಯೋಗ ಫೆಡರೇಷನ್ ಆಫ್ ಇಂಡಿಯಾ :** 50ನೇ ಗೋಲ್ಡನ್ ಜ್ಯೂಬಿಲಿ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಡಾ. ಭಾಷ್ಯಂ ಸ್ವಾಮೀಜಿ, ಪ್ರಜಾಪಿತ ಬ್ರಹ್ಮಕುಮಾರೀ ಈಶ್ವರೀಯ ವಿಶ್ವವಿದ್ಯಾಲಯದ ಲಕ್ಷ್ಮೀದೀದಿ, ಸುಚರಿತ ಮಾತಾ ಧ್ಯಾನ ಮಂದಿರದ ಸುಚರಿತ ಮಾತಾ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಯೋಗ ಫೆಡರೇಷನ್ ಆಫ್ ಇಂಡಿಯಾ ಅಧ್ಯಕ್ಷ ಅಶೋಕ್ ಕುಮಾರ್ ಅಗರವಾಲ್, ಶಾಸಕರಾದ ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಯತೀಂದ್ರ ಸಿದ್ದರಾಮಯ್ಯ, ವಿವೇಕಾನಂದ, ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಶ್ರೀಮತಿ ಇಂದು ಅಗರವಾಲ್, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 10ಕ್ಕೆ.

■ **ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ :** ಹಿರಿಯ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಮಹಾಸಭೆ, ಮುಖ್ಯ ಅತಿಥಿಗಳು : ಹಿರಿಯ ಪೊಲೀಸ್ ಅಧೀಕ್ಷಕ ಹೆಚ್.ಡಿ. ಆನಂದ್‌ಕುಮಾರ್, ಅಧೀಕ್ಷಕ ಅಭಿಯಂತರ ಬಿ. ಸೋಮಶೇಖರ್, ಹೆಚ್.ಆರ್. ಕೇಶವ, ಅಧ್ಯಕ್ಷತೆ : ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಡಾ. ಎಸ್.ವಿ. ದೊಡ್ಡಯ್ಯ, ಸ್ಥಳ: ಹಿರಿಯ ವಿದ್ಯಾರ್ಥಿಗಳ ಸಂಘದ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–104, ತಿಂಗಳ ಸಾಧಕರು ಹಿರಿಯ ಸಾಹಿತಿ ಡಾ. ಸಿ.ಜೆ.ಉಷಾದೇವಿ, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಯ್ಯ, ವಿಶೇಷ ಆಹ್ವಾನಿತರು : ಎನ್. ಧನಂಜಯ, ನಗರ್ಲೆ ಶಿವಕುಮಾರ್, ಶ್ರೀಮತಿ ಬಿ.ಆರ್. ನಾಗರತ್ನ, ಜವರಾಜು, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ :** ವಿವಿಧ ಕ್ಷೇತ್ರದ ಸಾಧಕರಿಗೆ ಕರ್ನಾಟಕ ಮಾಣಿಕ್ಯ ಶ್ರೇಷ್ಠ ರಾಜ್ಯ ಪ್ರಶಸ್ತಿ ಪ್ರದಾನ, ಸಾಲಾ ಮಕ್ಕಳಿಗೆ ಉಚಿತ ಬ್ಯಾಗ್ ವಿತರಣೆ, ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕ ವಿತರಣೆ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಅಧ್ಯಕ್ಷತೆ : ಹೈಕೋರ್ಟ್ ವಕೀಲ ಹೆಚ್.ಆರ್. ನಾರಾಯಣ್, ಸ್ಥಳ: ಪುರಭವನ (ಟೌನ್‌ಹಾಲ್), ಬೆಳಗ್ಗೆ 11ಕ್ಕೆ.

■ **ಮೈಸೂರು ಕರಾಟೆ ಅಸೋಸಿಯೇಷನ್ :** ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಹನ್ನಿ ಅರುಣ್ ಮಾಚಯ್ಯ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಮುಖ್ಯ ಅತಿಥಿಗಳು : ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ವೆಂಕಟೇಶ್, ಸ್ಥಳ: ಯೋಗ ಹಾಲ್, ಮೈಸೂರು ವಿವಿ, ಸಂಜೆ 4ಕ್ಕೆ.

■ **ಸಾಧನಾ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಚಿದಂಬರನಟೇಶ ನಾಟ್ಯ ಶಾಲೆ ಟ್ರಸ್ಟ್ :** ನೃತ್ಯ ಆರಾಧನಾ, ಉದ್ಘಾಟನೆ : ಮಾಜಿ ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಮಂಡ್ಯ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಡಾ. ಈ.ಸಿ. ನಿಂಗರಾಜು, ಉಪಸ್ಥಿತರು : ಬಿಜೆಪಿ ಮಾಧ್ಯಮ ವಕ್ತಾರ ಎಂ.ಜಿ. ಮಹೇಶ್, ಪಿಟೀಲು ವಾದಕ ಆರ್. ಶ್ರೀಕಾಂತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ವಕೀಲ ವಿನಯ್‌ಬಾಬು, ಡಾ. ಅನಿಲ್ ಥಾಮಸ್, ಶ್ರೀ ಪ್ರಸನ್ನ ಕಲ್ಯಾಣೇಶ್ವರ ಸಂಘದ ಅಧ್ಯಕ್ಷ ಬಿ. ಆನಂದ್, ಸ್ಥಳ: ಕಿರು ರಂಗಮಂದಿರ, ಸಂಜೆ 5.30ಕ್ಕೆ.

■ **ಕುಮಾರವ್ಯಾಸ ಗುರುಕುಲ :** ಕರ್ನಾಟಕ ಸಂಗೀತ, ವಿದುಷಿ ರೇಖಾ ರವಿಶಂಕರ್ ಅವರ ಶಿಷ್ಯೆ ಕು. ತನುಶ್ರೀ ರಾಘವೇಂದ್ರ ಅವರಿಂದ ಗಾಯನ, ವಿದ್ವಾನ್ ತಾಂಡವಮೂರ್ತಿ–ಪಿಟೀಲು, ವಿದ್ವಾನ್ ಹೆಚ್.ಟಿ. ಸ್ವಾಮಿ–ಮೃದಂಗ, ಮುಖ್ಯ ಅತಿಥಿಗಳು : ವಿದುಷಿ ರೇಖಾ ರವಿಶಂಕರ್, ಸ್ಥಳ: 1315/2, ಹರಿಪ್ರಿಯ 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ 'ಒಮ್ಮೆ ಹೆಣ್ಣಾಗು' ನಾಟಕ ಪ್ರದರ್ಶನ, ನಿರ್ದೇಶನ : ಸವಿತಾ ರಾಣಿ, ಕಥೆ : ಬಾನು ಮುಷ್ತಾಕ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಸಂಚಲನ :** ಸಂಚಲನ ಕಲಾ ತಂಡದಿಂದ ಹರಕೆಯ ಕುರಿ ನಾಟಕ ಪ್ರದರ್ಶನ, ಸಂಗೀತ – ದಿಗ್ವಿಜಯ ಹೆಗ್ಗೋಡು, ನಿರ್ದೇಶನ : ದೀಪಕ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)

ಸಂಜೆ 6, 7, 8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ, ದಿನ 4 ಟ್ರಿಪ್)

ಬೆ. 10ರಿಂದ ರಾ. 10ರವರೆಗೆ : ದಸರಾ ವಸ್ತುಪ್ರದರ್ಶನ.

ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಶಾಸಕ ಜಿ.ಡಿ.ಹರೀಶ್‌ಗೌಡ ಅವಿರೋಧ ಆಯ್ಕೆ

ಬಿ.ಎನ್.ಸದಾನಂದ ಉಪಾಧ್ಯಕ್ಷ



ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಆಯ್ಕೆಯಾದ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಉಪಾಧ್ಯಕ್ಷ ಬಿ.ಎನ್.ಸದಾನಂದ ಅವರನ್ನು ಯೂನಿಯನ್‌ನ ನಿರ್ದೇಶಕರು ಅಭಿನಂದಿಸಿದರು.

ಮೈಸೂರು, ಅ.11– ಸಹಕಾರ ಕ್ಷೇತ್ರದಲ್ಲಿ ತಮ್ಮ ಪ್ರಾಬಲ್ಯ ಮುಂದುವರಿಸಿರುವ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಪ್ರತಿಷ್ಠಿತ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆ ಮೂಲಕ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ಆಯ್ಕೆಯಾದ ಮೊದಲ ಅವಧಿಯಲ್ಲೇ ಅವಿರೋಧವಾಗಿ ಅಧ್ಯಕ್ಷರಾಗಿ ದಾಖಲೆ ಬರೆದಿದ್ದಾರೆ.

ಮೈಸೂರು ಜಿಲ್ಲಾ ಸಹಕಾರ ಯೂನಿಯನ್‌ನ ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶಾಸಕ ಜಿ.ಡಿ.ಹರೀಶ್ ಗೌಡ, ಉಪಾಧ್ಯಕ್ಷರಾಗಿ ಜಿಪಂ ಮಾಜಿ ಸದಸ್ಯ ಬಿ.ಎನ್.ಸದಾನಂದ ಅವಿರೋಧವಾಗಿ ಆಯ್ಕೆಯಾದರು.

15 ಮಂದಿ ನಿರ್ದೇಶಕರು: ಮೈಸೂರು ಜಿಲ್ಲಾ ಸಹಕಾರ ಯೂನಿಯನ್‌ನಲ್ಲಿ ಶಾಸಕ ಜಿ.ಟಿ.ದೇವೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರೊಂದಿಗೆ ಕೆ.ಎಸ್.ಕುಮಾರ್, ಶಿವಗಾಮಿ, ಪ್ರಶಾಂತ್ ತಾತಾಚಾರ್, ಸೋಮಶೇಖರ್, ಕೆ.ಉಮಾಶಂಕರ್, ಎ.ಟಿ.ಸೋಮಶೇಖರ್, ಕುರಹಟ್ಟಿ ಮಹೇಶ್, ಹನಮನಾಳು ಸಿದ್ದೇಗೌಡ, ಕೆ.ಕುಮಾರ್, ಮಲ್ಲಣ್ಣ, ಬಿ.ಎನ್. ಸದಾನಂದ, ಮರ್ಚೆಂಟ್ಸ್ ಬ್ಯಾಂಕ್ ಆನಂದ್, ಜಿ.ವಿ.ಗುರುರಾಜ್ ಸೇರಿದಂತೆ ಒಟ್ಟು 15 ಸದಸ್ಯರಿದ್ದಾರೆ.

ಒಟ್ಟು 15 ನಿರ್ದೇಶಕರ ಪೈಕಿ ಎರಡು ಕ್ಷೇತ್ರ ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರದಲ್ಲಿ ಅವಿರೋಧ ಆಯ್ಕೆ ನಡೆದಿತ್ತು. ಈ ಪೈಕಿ ಇತರೆ ಕ್ಷೇತ್ರದಲ್ಲಿ ರಾಜಕುಮಾರ್ 5 ಮತ, ಪ್ರಸನ್ನ 7 ಮತ ಪಡೆದು ಸೋಲುಂಡರೆ 15 ಮತ ಪಡೆದು ಹನುಮಾನಾಳ್ ಸಿದ್ದೇಗೌಡ ಗೆದ್ದಿದ್ದರು. ಪತ್ತಿನ ಸಹಕಾರ ಸಂಘದ ಕ್ಷೇತ್ರದಲ್ಲಿ 27 ಮತ ಪಡೆದ ಪ್ರಶಾಂತ್ ತಾತಾಚಾರ್ 1 ಮತ ಗಳಿಸಿದ ಲಕ್ಷೀಶ್ ಎದುರು ಭರ್ಜರಿ ಗೆಲುವು ಸಾಧಿಸಿ ನಿರ್ದೇಶಕರಾಗಿದ್ದರು.

ಸಹಕಾರಿ ಕ್ಷೇತ್ರದಲ್ಲಿ ತಪ್ಪದ ಸರ್ಕಾರದ ಹಸ್ತಕ್ಷೇಪ

ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಿ.ಡಿ.ಹರೀಶ್‌ಗೌಡ, ಇತ್ತೀಚೆಗೆ ಸಹಕಾರ ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗಿದೆ. ಎಂಸಿಡಿಸಿಸಿ ಬ್ಯಾಂಕಿನ ಚುನಾವಣೆಯಲ್ಲೂ ಸರ್ಕಾರ ಹಸ್ತಕ್ಷೇಪ ಮಾಡಿತ್ತು. ಆ ಚುನಾವಣೆಯಲ್ಲಿ ಏನಾಯ್ತು ಎಂಬುದು ಇನ್ನೂ ಕೆಲವರಿಗೆ ಗೊತ್ತಿಲ್ಲ. ಅಲ್ಲದೇ ಆ ಚುನಾವಣೆ ಪ್ರಕ್ರಿಯೆ ಇನ್ನೂ ಮುಗಿದಿಲ್ಲ, ಮುಗಿಯಲು ಸರ್ಕಾರ ಬಿಡುತ್ತಿಲ್ಲ. ಹೀಗಾಗಿ ಸಹಕಾರ ಕ್ಷೇತ್ರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡದೆ, ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ಬಿಡಬೇಕು ಎಂದರು.

ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದ್ದು, ಜನರ ಸಮಸ್ಯೆಗಳ ಬಗ್ಗೆ ಸರ್ಕಾರದ ಯಾರೊಬ್ಬರು ಗಮನ ಹರಿಸುತ್ತಿಲ್ಲ. ದಿನ ಬೆಳಗಾದರೆ ಆಡಳಿತ ಪಕ್ಷದ ಶಾಸಕರ ಕಚ್ಚಾಟವನ್ನು ನೋಡುತ್ತಿದ್ದೇವೆ. ಕಾಂಗ್ರೆಸ್ ಶಾಸಕರು ತಮ್ಮ ಕಷ್ಟ–ನಷ್ಟ, ಸುಖಗಳಲ್ಲಿ ಬ್ಯುಸಿಯಾಗಿದ್ದು, ಜನರ ಸಮಸ್ಯೆಗಳತ್ತ ಯಾರೂ ಗಮನವಹಿಸುತ್ತಿಲ್ಲ ಎಂದು ದೂರಿದರು.

ಮೈಸೂರಿನಲ್ಲೂ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದ್ದು, ರಾಜ್ಯ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಅಪ್ರಾಪ್ತ ಬಾಲಕಿಯ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ರಾಜ್ಯ ಸರ್ಕಾರದ ನಡೆ ಬೇಸರ ಉಂಟು ಮಾಡಿದೆ. ಮೃತ ಬಾಲಕಿಯ ಕುಟುಂಬಕ್ಕೆ ರಾಜ್ಯ ಸರ್ಕಾರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಶೀಘ್ರವೇ ಸರ್ವೇ ನಡೆಸಲಿ: ಮಳೆಯಿಂದ ಉಂಟಾಗಿರುವ ಅನಾಹುತದ ಬಗ್ಗೆ ರಾಜ್ಯ ಸರ್ಕಾರ ತ್ವರಿತವಾಗಿ ಸರ್ವೇ ಮಾಡಬೇಕು. ಕಲಬುರ್ಗಿ ಹಾಗೂ ಇನ್ನಿತರ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರು ಖುದ್ದು ಪರಿಶೀಲನೆ ನಡೆಸಿದ್ದಾರೆ. ಆದರೆ ಈ ಭಾಗದಲ್ಲಿ ಉಂಟಾಗಿರುವ ಬೆಳೆ ನಷ್ಟದ ಕುರಿತು ಸರ್ವೇ ಮಾಡಿಸಿಲ್ಲ. ಸರ್ವೇ ಮಾಡದೇ ಪರಿಹಾರ ನಿಗದಿ ಮಾಡಲಾಗುವುದಿಲ್ಲ. ಆದ್ದರಿಂದ ಸರ್ಕಾರ ಬೆಳೆ ಹಾನಿ ಕುರಿತು ತ್ವರಿತವಾಗಿ ಸರ್ವೇ ಕಾರ್ಯ ನಡೆಸಬೇಕೆಂದು ಒತ್ತಾಯಿಸಿದರು.

ಅಯೋಧ್ಯೆ ರಾಮಮಂದಿರದ ಗರ್ಭಗುಡಿ ಮೇಲೆ 22 ಅಡಿ ಉದ್ದದ ಕೇಸರಿ ಧ್ವಜ

ನ.25 ಕ್ಕೆ ಪ್ರಧಾನಿ ಮೋದಿ ಧ್ವಜಾರೋಹಣ



ನವದೆಹಲಿ, ಅ.11– ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣವಾಗಿರುವ ಭವ್ಯ ರಾಮಮಂದಿರದ ಗರ್ಭಗುಡಿಯ ಮೇಲೆ 22 ಅಡಿ ಉದ್ದದ ಕೇಸರಿ ಧ್ವಜವನ್ನು ಹಾರಿಸಲು ತೀರ್ಮಾನಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ರಾಮಮಂದಿರದ ಮೇಲ್ಭಾಗದಲ್ಲಿ ಧ್ವಜಾರೋಹಣ ನಡೆಸಲಿದ್ದಾರೆ.

ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಧಾರ್ಮಿಕ ಸಮಿತಿಯ ಸದಸ್ಯರ ಮಹತ್ವದ ಸಭೆ ಜಾನಕಿ ಘಾಟ್‌ನ ವೈದೇಹಿ ಭವನದಲ್ಲಿ ನಡೆಯಿತು. ನ.25 ರಂದು ನಡೆಯಲಿರುವ ಧ್ವಜಾರೋಹಣ ಕಾರ್ಯಕ್ರಮದ ರೂಪುರೇಷೆಯನ್ನು ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಧಾರ್ಮಿಕ ಸಮಿತಿಯ ಸದಸ್ಯ ಗೋಪಾಲ್ ರಾವ್ ಹೇಳಿದ್ದು

191 ಅಡಿ ಎತ್ತರದ ರಾಮಮಂದಿರದ ಮೇಲ್ಭಾಗದಲ್ಲಿ 11 ಅಡಿ ಅಗಲ ಮತ್ತು 22 ಅಡಿ ಉದ್ದದ ತ್ರಿಕೋನಾಕಾರದ ಕೇಸರಿ ಧ್ವಜವನ್ನು ಹಾರಿಸಲು ನಿರ್ಧರಿಸಿದೆ. ಧ್ವಜದ ಮೇಲೆ ಸೂರ್ಯವಂಶಿ ಮತ್ತು ತ್ರೇತಾಯುಗದ ಚಿಹ್ನೆಗಳನ್ನು ಇರಿಸಲು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಸಮಿತಿಯು ಒಮ್ಮತಕ್ಕೆ ಬಂದಿದೆ. ದೀಪಾವಳಿ ಬಳಿಕ ಎಲ್ಲಾ ಅತಿಥಿಗಳಿಗೆ ಆಹ್ವಾನ ಪತ್ರಗಳನ್ನು ಕಳುಹಿಸಲಾಗುವುದು. ಎಂಟರಿಂದ ಹತ್ತು ಸಾವಿರ ಅತಿಥಿಗಳು ಧ್ವಜಾರೋಹಣ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಅವರ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಸಭೆಯಲ್ಲಿ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರೈ, ಖಜಾಂಚಿ ಗೋವಿಂದ್ ದೇವಗಿರಿ, ಸದಸ್ಯರಾದ ಡಾ. ಅನಿಲ್ ಮಿಶ್ರಾ, ಗೋಪಾಲ್ ರಾವ್ ಮತ್ತು ಇತರ ಸದಸ್ಯರು ಉಪಸ್ಥಿತರಿದ್ದರು.

ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ

ಎಲೆಕ್ಟ್ರಾನಿಕ್ಸ್–ಗೃಹೋಪಯೋಗಿ ಉಪಕರಣಗಳ ಶೋ ರೂಂ ಉದ್ಘಾಟನೆ

ಉದ್ಘಾಟಿಸಿ ಶುಭ ಹಾರೈಸಿದ ರಿಯಲ್ ಸ್ಟಾರ್ ಉಪೇಂದ್ರ



ಮೈಸೂರಿನ ಕುವೆಂಪುನಗರದ ನೃಪತುಂಗ ರಸ್ತೆಯಲ್ಲಿ ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಶೋ ರೂಂ ಅನ್ನು ಖ್ಯಾತ ನಟ, ನಿರ್ದೇಶಕ ರಿಯಲ್ ಸ್ಟಾರ್ ಉಪೇಂದ್ರ ಉದ್ಘಾಟಿಸಿದರು.

ಮೈಸೂರು,ಅ.11(ಪಿಎಂ)– ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ತನ್ನ 220ನೇ ಶೋ ರೂಮ್ ಅನ್ನು ಮೈಸೂರಿನಲ್ಲಿ ಆರಂಭಿಸಿದೆ. ಇಲ್ಲಿನ ಕುವೆಂಪುನಗರದ ನೃಪತುಂಗ ರಸ್ತೆಯಲ್ಲಿ ಶೋ ರೂಮ್ (ಮೈಸೂರಿನ 2ನೇ ಶೋ ರೂಂ) ಶನಿವಾರ ಅದ್ಧೂರಿಯಾಗಿ ಉದ್ಘಾಟನೆಗೊಂಡಿತು.

ಮೈಸೂರಿನ ಕುವೆಂಪುನಗರದ ನೃಪತುಂಗ ರಸ್ತೆಯಲ್ಲಿ ಆರಂಭಿಸಿರುವ ಶೋ ರೂಂನ ಉದ್ಘಾಟನೆ ನೆರವೇರಿಸಿದ ಖ್ಯಾತ ನಟ, ನಿರ್ದೇಶಕ ರಿಯಲ್ ಸ್ಟಾರ್ ಉಪೇಂದ್ರ ಮಾತನಾಡಿ, ಈ ಅತ್ಯಾಧುನಿಕ ಶೋ ರೂಂ ಅನ್ನು ಉದ್ಘಾಟಿಸಲು ಅತ್ಯಂತ ಸಂತೋಷವಾಗಿದೆ. ಭರವಸೆಗೆ ಹೆಸರಾದ ಕಂಪನಿಯ ಶೋ ರೂಂ ಇದಾಗಿದೆ ಎಂದರು. ಕರ್ನಾಟಕದ ಸೇವೆಯಲ್ಲಿ 25 ವರ್ಷಗಳನ್ನು ಪೂರೈಸಿದ್ದಕ್ಕಾಗಿ ಪೈ ಇಂಟರ್‌ನ್ಯಾಷನಲ್ ಅನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮುಂಬರುವ ವರ್ಷಗಳಲ್ಲಿ ಕಂಪನಿಯು ಇನ್ನಷ್ಟು ಯಶಸ್ಸನ್ನು ಗಳಿಸಲಿ ಎಂದು ಹಾರೈಸಿದರು.

ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ಉಪಕರಣಗಳ ವಲಯದಲ್ಲಿ ಪೈ ಇಂಟರ್‌ನ್ಯಾಷನಲ್ ಪ್ರಮುಖ ಬ್ರ್ಯಾಂಡ್ ಆಗಿದೆ. ಲ್ಯಾಪ್‌ಟಾಪ್, ಮೊಬೈಲ್‌ಗಳು ಸೇರಿದಂತೆ ಮೊದಲಾದವು ಹೊಚ್ಚ ಹೊಸ ಮಾಡೆಲ್‌ಗಳಲ್ಲಿ ದೊರೆಯಲಿವೆ. ಪೈ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ರಾಜ್‌ಕುಮಾರ್ ಎಸ್. ಪೈ, ಹಣಕಾಸು ನಿರ್ದೇಶಕಿ ಮೀನಾ ರಾಜ್‌ಕುಮಾರ್ ಪೈ, ನಿರ್ದೇಶಕ ರಾಹುಲ್ ಆರ್. ಪೈ, ರೋಹಿತ್ ಆರ್. ಪೈ ಹಾಜರಿದ್ದರು.

ಅಯೋಧ್ಯೆಯಲ್ಲಿ ಮತ್ತೊಂದು 'ನಿಗೂಢ' ಸ್ಫೋಟ: ಸಾವಿನ ಸಂಖ್ಯೆ 6ಕ್ಕೆ ಏರಿಕೆ

ಅಯೋಧ್ಯೆ, ಅ.11– ಇತ್ತೀಚೆಗೆ ಸ್ಫೋಟದಿಂದಾಗಿ ಸುದ್ದಿಗೆ ಗ್ರಾಸವಾಗಿದ್ದ ಅಯೋಧ್ಯೆಯಲ್ಲಿ ಮತ್ತೊಂದು ನಿಗೂಢ ಸ್ಫೋಟ ಸಂಭವಿಸಿದ್ದು, ಸಾವಿನ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಅಯೋಧ್ಯೆಯ ಹಳ್ಳಿಯೊಂದರಲ್ಲಿ ಗುರುವಾರ ರಾತ್ರಿ ಸಂಭವಿಸಿದ್ದ ಪ್ರಬಲ ಸ್ಫೋಟ ಸಂಭವಿಸಿತ್ತು. ನಿನ್ನೆ ರಾತ್ರಿ ನಡೆದ ಅವಶೇಷ ತೆರವು ಕಾರ್ಯಾಚರಣೆ ವೇಳೆ ಮತ್ತೊರ್ವ ಮಹಿಳೆ ಶವ ಪತ್ತೆಯಾಗಿದೆ. ಈ ಹಿಂದೆ ಇದೇ ಜಾಗದಲ್ಲಿ 5 ಮೃತದೇಹಗಳು ಪತ್ತೆಯಾಗಿದ್ದವು. ಆ ಮೂಲಕ ಇದೀಗ ಸಾವಿನ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಮತ್ತೊಂದು 'ನಿಗೂಢ' ಸ್ಫೋಟ: ಇನ್ನು ಅವಶೇಷ ತೆರವು ಕಾರ್ಯಾಚರಣೆ ವೇಳೆ ಮತ್ತೊಂದು ಸ್ಫೋಟ ಸಂಭವಿಸಿದೆ. ಸ್ಫೋಟದಿಂದಾಗಿ ಕುಸಿತವಾಗಿದ್ದ ಗೋಡೆಗಳ ತೆರವು ಮಾಡುತ್ತಿದ್ದ ಜೆಸಿಬಿ ಕಾರ್ಯಾಚರಣೆ ವೇಳೆ ಮತ್ತೆ ಸ್ಫೋಟ ಸಂಭವಿಸಿದೆ.

ಮೈಸೂರನ್ನು ಬೆಚ್ಚಿಬೀಳಿಸಿದ ಅತ್ಯಾಚಾರ-ಕಗ್ಗೊಲೆಗಳು

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ; ಕಟ್ಟೆಚ್ಚರ ವಹಿಸಲು ಸೂಚನೆ

ಖಾಸಗಿ ಕಾರ್ಯಕ್ರಮಕ್ಕೆ ಹಾಜರಾದ ನಂತರ ಅಧಿಕಾರಿಗಳ ಸಭೆ ನಡೆಸಿ ಬೆಂಗಳೂರಿಗೆ ವಾಪಸ್

ಮೈಸೂರು, ಅ.11– ಮೈಸೂರಿನಲ್ಲಿ ಮೂರೇ ದಿನದ ಅಂತರದಲ್ಲಿ ಹಾಡಹಗಲೇ ವ್ಯಕ್ತಿಯ ಹತ್ಯೆ ಹಾಗೂ ಬಾಲಕಿ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿದ ಘಟನೆಗಳ ಹಿನ್ನೆಲೆಯಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ವಿಪಕ್ಷಗಳ ನಾಯಕರು ಪೊಲೀಸ್ ಇಲಾಖೆ ವೈಫಲ್ಯವನ್ನು ಖಂಡಿಸಿದ್ದರು. ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶನಿವಾರ ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ನಿವಾಸದಲ್ಲಿ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಿದರು.

ವಿಶೇಷ ವಿಮಾನದ ಮೂಲಕ ರಾತ್ರಿ 7.30ರ ಸುಮಾರಿಗೆ ಮೈಸೂರಿಗೆ ಆಗಮಿಸಿದ ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡರೊಬ್ಬರ ಮನೆಯ ವಿವಾಹ ಆರತಕ್ಷತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಶಾರದಾದೇವಿನಗರದ ನಿವಾಸದಲ್ಲಿ ಅಧಿಕಾರಿಗಳ ಸಭೆ ನಡೆಸಿ, ಬೆಂಗಳೂರಿಗೆ ವಾಪಸ್ಸಾದರು.

ಸುದೀರ್ಘ ಸಭೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಸುಂದರ್ ರಾಜ್, ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ಅವರೊಂದಿಗೆ ಮುಖ್ಯಮಂತ್ರಿಗಳು ಸುದೀರ್ಘ ಸಭೆ ನಡೆಸಿದರು. ಈ ವೇಳೆ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಒಂದರ ಹಿಂದೊಂದು ನಡೆದ ವ್ಯಕ್ತಿ ಹತ್ಯೆ ಹಾಗೂ ಬಾಲಕಿ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಬಗ್ಗೆ ವಿವರಣೆ ನೀಡಿದರು.

ಇದೇ ವೇಳೆ ಈ ಪ್ರಕರಣಗಳ ತನಿಖಾ ಪ್ರಗತಿ ಬಗ್ಗೆ ಮಾಹಿತಿ ಪಡೆದ ಸಿಎಂ, ಅಪರಾಧ ಪ್ರಕರಣಗಳ ತಡೆಯುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಿ. ಕಾನೂನು ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಿ. ಇಂತಹ ದುಷ್ಕೃತ್ಯಗಳು ಮತ್ತೆ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ವಹಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರೆಂದು ತಿಳಿದುಬಂದಿದೆ.

ದಸರಾಗೆ ತೆರೆ ಬಿದ್ದ ಬೆನ್ನಲ್ಲೇ ವಸ್ತು ಪ್ರದರ್ಶನದ ಬಳಿ ಎರಡು ಪೈಶಾಚಿಕ ಕೃತ್ಯಗಳು ನಡೆದಿದ್ದು, ನಾಗರಿಕರು ಹಾಗೂ ಪ್ರವಾಸಿಗರನ್ನು ಬೆಚ್ಚಿಬೀಳಿಸಿದ್ದವು. ಅ.7ರಂದು ಹಾಡಹಗಲೇ ದುಷ್ಕರ್ಮಿಗಳ ಗುಂಪು ಕಾರು ಅಡ್ಡಗಟ್ಟಿ ಕ್ಯಾತಮಾರನಹಳ್ಳಿ ವೆಂಕಟೇಶ್‌ನನ್ನು ಕೊಚ್ಚಿ ಕೊಲೆ ಮಾಡಿದ್ದರು. ಜನನಿಬಿಡ ರಸ್ತೆಯಲ್ಲಿ ನಿರ್ಭಯವಾಗಿ ಬರ್ಬರವಾಗಿ ಹತ್ಯೆ ಮಾಡಿದ್ದರ ಬಗ್ಗೆ ಜನ ಆತಂಕದಿಂದ ಮಾತನಾಡುವಾಗಲೇ ಮರುದಿನ ಮಧ್ಯರಾತ್ರಿ ಕಾಮುಕನೊಬ್ಬ ಗುಲ್ಬರ್ಗಾದಿಂದ ಬಲೂನ್ ಮಾರಲು ಬಂದಿದ್ದ ಬಡ ಕುಟುಂಬದ ಬಾಲಕಿಯನ್ನು ಹೊತ್ತೊಯ್ದು, ಅತ್ಯಾಚಾರವೆಸಗಿ ಮನಸೋಇಚ್ಛೆ ಚುಚ್ಚಿ ಕೊಂದ ಸುದ್ದಿ ಕಿವಿಗೆ ಬಡಿಯಿತು. ಈ ಎರಡೂ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆಯಾದರೂ ಜನರಲ್ಲಿರುವ ಭೀತಿ ಕಡಿಮೆಯಾಗಿಲ್ಲ. ಈ ಸರಣಿ ದುಷ್ಕೃತ್ಯಗಳಿಗೆ ಪೊಲೀಸ್ ಇಲಾಖೆ ವೈಫಲ್ಯವೇ ಕಾರಣ, ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದೆ. ಮೈಸೂರಿನ ಘಟನೆಗಳ ಬಗ್ಗೆ ಮುಖ್ಯಮಂತ್ರಿಗಳು ತುಟಿಬಿಚ್ಚಿಲ್ಲ ಎಂದು ಬಿಜೆಪಿ ನಾಯಕರು ಹಾಗೂ ವಿವಿಧ ಸಂಘಟನೆಯವರು ಕಿಡಿಕಾರಿದ್ದರು.



ಮೈಸೂರಿನ ತಮ್ಮ ನಿವಾಸದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು.

ಮಾರ್ವಾರಿ ಹಾರ್ಸ್ ಶೋನಲ್ಲಿ ರೋಲೆಕ್ಸ್‌ಗೆ ಪ್ರಥಮ ಸ್ಥಾನ





ಏಷ್ಯಾದ ಅತೀ ದೊಡ್ಡ ದಿ ರಾಯಲ್ಟಿ ಹಾರ್ಸ್ ಶೋ ಬೆಂಗಳೂರು ವತಿಯಿಂದ ಯಲಹಂಕದಲ್ಲಿ ಆಯೋಜಿಸಿರುವ 'ಮಾರ್ವಾರಿ ಹಾರ್ಸ್ ಶೋ' ಸ್ಪರ್ಧೆಯಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್ ಅವರ ಪುತ್ರ ಎಸ್.ಎಂ.ಜಯಂತ್ ಒಡೆತನದ ರೋಲೆಕ್ಸ್ ಅಶ್ವ ಪ್ರಥಮ ಸ್ಥಾನ ಪಡೆದಿದೆ. ಪ್ರಮಾಣ ಪತ್ರ, ಟ್ರೋಫಿ ಹಾಗೂ 1 ಲಕ್ಷ ನಗದು ಬಹುಮಾನವನ್ನು ಅದರ ಮಾಲೀಕ ಜಯಂತ್ ಸ್ವೀಕರಿಸಿದರು. 2 ವರ್ಷ 4 ತಿಂಗಳ ಈ ಕುದುರೆಯನ್ನು ಮೈಸೂರಿನ ಸಾರಾ ಫಾರಂನಲ್ಲಿ ಸಲಹಲಾಗುತ್ತಿದೆ.

ದಸರಾ ವಸ್ತುಪ್ರದರ್ಶನದಲ್ಲಿ ಮಹಿಳಾ ಆಯೋಗದ ಮಳಿಗೆ ಉದ್ಘಾಟನೆ

ಮಹಿಳೆಯರ ಮೇಲಿನ ದೌರ್ಜನ್ಯ; ಅದರಿಂದ ರಕ್ಷಣೆಯ ಸಂದೇಶ ಅನಾವರಣ



ದಸರಾ ವಸ್ತು ಪ್ರದರ್ಶನದಲ್ಲಿ 'ರಾಜ್ಯ ಮಹಿಳಾ ಆಯೋಗ'ದ ಮಳಿಗೆಯನ್ನು ಡಾ. ನಾಗಲಕ್ಷ್ಮೀ ಚೌಧರಿ ಶನಿವಾರ ಉದ್ಘಾಟಿಸಿದರು

ಮೈಸೂರು, ಅ.11(ವಿವಿಹೆಚ್)– ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನದ ಪ್ರಾಧಿಕಾರ ಆವರಣದಲ್ಲಿ 'ರಾಜ್ಯ ಮಹಿಳಾ ಆಯೋಗ'ದ ಮಳಿಗೆಯನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧುರಿ ಶನಿವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಆಯೋಗದ ಮಳಿಗೆ ಉದ್ಘಾಟನೆ ಮಾಡುತ್ತಿರುವುದು ಸಂತೋಷದ ಸಂಗತಿ. ಕಳೆದ ಬಾರಿ ಆಯೋಗದ ಮಾಹಿತಿ ನೀಡಲು ಚಿತ್ರಗಳನ್ನು ಬಳಸಲಾಗಿತ್ತು. ಈ ಬಾರಿ ಬೊಂಬೆಗಳನ್ನು ಬಳಸಿ, ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವ ರೀತಿಯನ್ನು ಪ್ರತಿಯೊಬ್ಬರಿಗೂ ಅರ್ಥಮಾಡಿಸುವ ಪ್ರಯತ್ನ ಮಾಡಲಾಗಿದೆ ಎಂದರು.

ಮಳಿಗೆ ಉದ್ಘಾಟನೆಗೆ ಆಗಮಿಸಿದ್ದ ಸಾರ್ವಜನಿಕರು ನನ್ನೊಂದಿಗೆ ತಮ್ಮ ಮೇಲಿನ ದೌರ್ಜನ್ಯ, ಕಿರುಕುಳ ಹಾಗೂ ಸಮಸ್ಯೆಗಳನ್ನು ಬಿಚ್ಚಿಟ್ಟರು. ಇದಕ್ಕೆ ಆಯೋಗ ತ್ವರಿತವಾಗಿ ಸ್ಪಂದಿಸಿ, ಸ್ಥಳದಲ್ಲೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕೆಲಸ ಮಾಡಿದೆ ಎಂದರು.

ಮೈಸೂರಿನಲ್ಲಿ ಬಾಲಕಿಯ ಅತ್ಯಾಚಾರ, ಹತ್ಯೆ ಪ್ರಕರಣ ಸಂಬಂಧ ಮಾತನಾಡಿ, ಈ ಘಟನೆ ವೈಯಕ್ತಿಕವಾಗಿ ನನಗೆ ಬಹಳ ನೋವುಂಟು ಮಾಡಿದೆ. ಪ್ರಕರಣದ ಬಗ್ಗೆ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಬಳಿ ಮಾತನಾಡಿದ್ದೇನೆ, ಹೆಚ್ಚು ಪ್ರವಾಸಿಗರನ್ನು ಸೆಳೆಯುವ ಮೈಸೂರಿನಲ್ಲಿ ಮಹಿಳಾ ಸುರಕ್ಷತೆ ದೃಷ್ಟಿಯಿಂದ ಸಿಸಿ ಕ್ಯಾಮರಾಗಳ ಸಂಖ್ಯೆ ಹೆಚ್ಚಾಗಬೇಕು. ಜೊತೆಗೆ ಪೊಲೀಸರು ಹೆಚ್ಚು ಗಸ್ತು ತಿರುಗಬೇಕು ಎಂದು ಸೂಚನೆ ನೀಡಿದ್ದಾಗಿ ಹೇಳಿದರು.

ಅಲೆಮಾರಿ ಜನಾಂಗದ ಮೇಲಾದ ದಾಳಿಯಿಂದ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಪುಂಡ–ಪೋಕರಿಗಳ ಹಾವಳಿಗೆ ಕಡಿವಾಣ ಹಾಕಬೇಕು. ಪ್ರತಿ ದಸರಾದಲ್ಲಿ ಡಿಸೆಂಬರ್ ಅಂತ್ಯದವರೆಗೆ ನಾನಾ ವ್ಯಾಪಾರಕ್ಕಾಗಿ ಬರುವ ಅಲೆಮಾರಿ ಜನಾಂಗದವರಿಗೆ ರಕ್ಷಣೆ ನೀಡುವುದು ಜಿಲ್ಲಾಡಳಿತದ ಜವಾಬ್ದಾರಿಯಾಗಿದೆ. ಈ ಬಗ್ಗೆ ಸರ್ಕಾರದ ಜೊತೆ ಚರ್ಚಿಸುವುದಾಗಿ ಹೇಳಿದರು.

ಕಾನೂನು ನಮ್ಮ ನೆಲದಲ್ಲಿ ಗಟ್ಟಿಯಾಗಿದೆ. ಮನೆಕೆಲಸದವರಿಗೂ ನ್ಯಾಯ ಸಿಗುತ್ತದೆ ಎಂಬುದನ್ನು ನ್ಯಾಯಾಲಯ ತೋರಿಸಿದೆ. ಇಂತಹ ಕಠಿಣ ಕಾನೂನುಗಳಿದ್ದರೂ ನೀಚ ಮನಸ್ಥಿತಿ ಉಲ್ಬಣಗೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ. ಮದ್ಯ ವ್ಯಸನ, ಡ್ರಗ್ಸ್, ನಶಾ ಬರುವ ವಸ್ತುಗಳು ಕಡಿಮೆ ಬೆಲೆಗಳಲ್ಲಿ ಚಿಲ್ಲರೆ ಅಂಗಡಿಗಳಲ್ಲಿ ಲಭ್ಯವಾಗುತ್ತಿರುವುದು ಸಮಾಜಕ್ಕೆ ಮಾರಕ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮೈಸೂರು ವಿವಿ ಎಎಂಆರ್‌ಸಿ ನಿರ್ದೇಶಕರಾದ ಪ್ರೊ. ಎಂ.ಸಪ್ನಾ, ಕಾಂಗ್ರೆಸ್ ಯುವ ಮುಖಂಡ ಎಂ.ರಾಜೇಶ್, ಮೈಸೂರು ವಿವಿ ಶೈಕ್ಷಣಿಕ ಮಂಡಳಿ ಸದಸ್ಯ ಡಾ. ರಾಕೇಶ್, ರಾಣಿ ಪ್ರಭಾ, ಶೋಭ ರಾಜೇಶ್, ಮಹಿಳಾ ಮುಖಂಡರು, ಡಾ. ನಾಗಲಕ್ಷ್ಮೀ ಅಕ್ಕ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

ಮಹಿಳಾ ಸಬಲೀಕರಣ ಮತ್ತು ಮಹಿಳೆಯರ ಹಕ್ಕುಗಳ ರಕ್ಷಣೆಯಲ್ಲಿ ನಿಯೋಗದ ಪಾತ್ರದ ಕುರಿತು ಸಂಪೂರ್ಣ ಮಾಹಿತಿಯನ್ನೊಳಗೊಂಡ ಮಳಿಗೆ ಇದಾಗಿದೆ. ವಿಶೇಷವಾಗಿ ಮಹಿಳಾ ಆಯೋಗದಲ್ಲಿ ಸರ್ಕಾರದಿಂದ ಮಹಿಳೆಯರಿಗೆ ಸಿಗುವ ಸೌಲಭ್ಯಗಳು, ಮಹಿಳೆಯರ ರಕ್ಷಣೆಗಾಗಿ ವಿಶೇಷ ತನಿಖಾ ತಂಡ, ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ, ಕರ್ನಾಟಕ ಮಹಿಳಾ ಪೊಲೀಸ್ ಸೇವಾ ಕೇಂದ್ರ, ಮಹಿಳಾ ಹೆಲ್ಪ್ ಲೈನ್ ಸೆಂಟರ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಮಹಿಳೆಯರಿಗೆ ದೊರೆಯುವ ಸವಲತ್ತು ಹಾಗೂ ಪರಿಹಾರಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಜೊತೆಗೆ ವರದಕ್ಷಿಣೆ ಕಿರುಕುಳ, ಮಹಿಳೆಯರೊಂದಿಗೆ ಅಸಭ್ಯ ವರ್ತನೆ, ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಕೌಟುಂಬಿಕ ಹಿಂಸೆ, ವಿನಾಕಾರಣ ಕ್ರಿಮಿನಲ್ ಮೊಕದ್ದಮೆಗಳು, ಇವೆಲ್ಲದರ ವಿರುದ್ಧ ಕಾನೂನಿನಡಿ ಇರುವ ರಕ್ಷಣೆಗಳ ಬಗ್ಗೆ ಮಾಹಿತಿ ಪ್ರದರ್ಶಿಸಲಾಗಿದೆ.

ಎರಡು ಗಂಟೆ ತಡವಾಗಿ ಬಂದ ಅಧ್ಯಕ್ಷರು

ಮಹಿಳಾ ಆಯೋಗದ ಮಳಿಗೆ ಉದ್ಘಾಟನೆ ಸಂಜೆ 6 ಗಂಟೆಗೆ ನಿಗದಿಯಾಗಿತ್ತು. ನಿಗದಿತ ಸಮಯಕ್ಕಿಂತ 2 ಗಂಟೆ ತಡವಾಗಿ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಆಗಮಿಸಿದರು. ಹೀಗಾಗಿ ಅಧಿಕಾರಿಗಳು ಸೇರಿದಂತೆ ಮಾಧ್ಯಮದವರು, ದೂರು ನೀಡಲು ಬಂದ ಸಾರ್ವಜನಿಕರು ಕಾದು ಕಾದು ಬಸವಳಿದರು. ಕೆಲವರು ಆಕ್ರೋಶ ವ್ಯಕ್ತಪಡಿಸಿ ವಾಪಸ್ಸಾದರೆ, ಮತ್ತೆ ಕೆಲವರು ನಮ್ಮ ಕೆಲಸ ಆಗಬೇಕು, ಕಾಯುವುದು ಸಾಮಾನ್ಯ ಅಲ್ಲವೇ ಎಂದು ಗೊಣಗುತ್ತಾ ನಿಂತಿದ್ದು ಕಂಡುಬಂದಿತು.

ಬಿಎಂಟಿಸಿ ಬಸ್ ಚಾಲಕನಿಗೆ ಫಿಡ್ಸ್: ಚಿನ್ನಸ್ವಾಮಿ ಕ್ರೀಡಾಂಗಣ ರಸ್ತೆಯಲ್ಲಿ ಸರಣಿ ಅಪಘಾತ



ಬೆಂಗಳೂರು, ಅ.11– ಬೆಂಗಳೂರಿನಲ್ಲಿ ಮತ್ತೊಂದು ಬಿಎಂಟಿಸಿ ಅವಘಡ ಸಂಭವಿಸಿದ್ದು, ಸಾರಿಗೆ ಸಂಸ್ಥೆ ಚಾಲಕ ದಿಢೀರ್ ಅನಾರೋಗ್ಯಕ್ಕೀಡಾದ ಕಾರಣ ಸರಣಿ ಅಪಘಾತ ಸಂಭವಿಸಿದೆ.

ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣ ರಸ್ತೆಯಲ್ಲಿ ಶನಿವಾರ ಈ ಘಟನೆ ಸಂಭವಿಸಿದ್ದು, ಬಿಎಂಟಿಸಿ ಚಾಲಕ ಕರ್ತವ್ಯದಲ್ಲಿದ್ದಾಗಲೇ ಫಿಡ್ಸ್ (seizure) ಕಾಣಿಸಿಕೊಂಡಿದೆ. ಪರಿಣಾಮ ಬಸ್, 2 ಕಾರು, ಆಟೋ ಸೇರಿದಂತೆ ಹಲವು ವಾಹನಗಳು ಜಖಂ ಆಗಿವೆ.

ನಕ್ಕರೆ ಅದೇ ಸ್ವರ್ಗ

ಹುಡುಗನ ತಂದೆ : ಏನ್ ಕೆಲ್ಸ ಮಾಡ್ತಾಳೆ ನಿಮ್ಮ ಹುಡುಗಿ?
ಹುಡುಗಿ ತಂದೆ : ಆಕ್ಟರ್ ಆಗಿದ್ದಾಳೆ 'ಟಿಕ್ ಟಾಕ್'ನಲ್ಲಿ! ಮತ್ತೆ ನಿಮ್ಮ ಹುಡುಗ?
ಹುಡುಗನ ತಂದೆ : ಆರ್ಮಿಯಲ್ಲಿ ಇದ್ದಾನೆ 'ಪಬ್‌ಜಿ'ಯಲ್ಲಿ!

ಮೈಸೂರು ಮಿತ್ರ

ಭಾನುವಾರ, 12 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಭಯಾನಕ ಹೋರಾಟದ ಫಲವೇ ಹೊರತು ಸುಲಭವಾಗಿ ಸಿಕ್ಕುವಂತಹದ್ದಲ್ಲ. –ಡಾ. ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಲ್ಲಿರುವ ತನಕ ಊಟ
ಕಣ್ಣಿರುವ ತನಕ ನೋಟ.

ನಿಮ್ಮ ಪತ್ರಗಳು

■ ಸ್ವಾಗತ ಕಮಾನು ಜನರ ತಲೆಯ ಮೇಲೆ ಬೀಳುವ ಮುನ್ನ ತೆರವುಗೊಳಿಸಿ



ಮಾನ್ಯರೆ,

ವಿಶ್ವ ವಿಖ್ಯಾತ ಮೈಸೂರು ದಸರಾ 2025 ಮಹೋತ್ಸವ ಯಶಸ್ವಿಯಾಗಿ ನಡೆಯಿತು. ಈ ಯಶಸ್ವಿಗೆ ಕಾರಣಕರ್ತರಾದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಾ, ಈ ಸಂದರ್ಭದಲ್ಲಿ ಮೈಸೂರಿನ ರಾಜಬೀದಿಯಿಂದ ಹಿಡಿದು ಎಲ್ಲಾ ರಸ್ತೆಯ ಮುಖ್ಯ ದ್ವಾರಗಳಿಗೆ ತಾತ್ಕಾಲಿಕ ಬೃಹತ್ ಸ್ವಾಗತ ಕಮಾನುಗಳನ್ನು ಅಳವಡಿಸಲಾಗಿತ್ತು. ಈಗ ದಸರಾ ಮುಗಿದಿದೆ. ಆದರೆ ಈ ತಾತ್ಕಾಲಿಕ ಕಮಾನುಗಳು ಹಾಗೆಯೇ ಇವೆ. ಈ ರೀತಿಯ ಕಮಾನುಗಳನ್ನು ಹಾಕಿರುವಂತಹ ಜಾಗಗಳನ್ನು ಗುರುತಿಸಬೇಕು. ಈ ರಸ್ತೆಗಳಲ್ಲಿ ಭಾರೀ ವಾಹನ ಸಂಚರಿಸುವ ಕಾರಣ ಯಾವುದೇ ಅವಘಡ ಆಗಬಾರದು ಎಂಬ ಕಾರಣಕ್ಕಾಗಿ ಆ ಕಮಾನುಗಳನ್ನು ಶೀಘ್ರವಾಗಿ ತೆರವುಗೊಳಿಸಿ ಯಾವುದೇ ರೀತಿಯ ಅಪಾಯವಾಗದಂತೆ ಮುನ್ನೆಚ್ಚರಿಕೆ ಕ್ರಮವನ್ನು ವಹಿಸಬೇಕಾಗಿ ವಿನಂತಿ.

–ಗೋವಿತ್ ಕಿರಣ್, ರಾಜೇಂದ್ರ ನಗರ, ಕೆಸರೆ ಮೈಸೂರು.

■ ಗಿನ್ನಿಸ್ ವಿಶ್ವ ದಾಖಲೆಯತ್ತ 'ಥಟ್ ಅಂತ ಹೇಳಿ' ಕಾರ್ಯಕ್ರಮ

ಮಾನ್ಯರೆ,

ಸರ್ಕಾರಿ ಸ್ವಾಮ್ಯದ ಬೆಂಗಳೂರು ದೂರದರ್ಶನ ಕೇಂದ್ರ ಚಂದನ ವಾಹಿನಿಯಲ್ಲಿ ರಾತ್ರಿ 9.30ಕ್ಕೆ ಕಳೆದ 23 ವರ್ಷಗಳಿಂದ ಪ್ರಸಾರವಾಗುತ್ತಿರುವ ಡಾ.ನಾ.ಸೋಮೇಶ್ವರ ಅವರು ನಡೆಸಿಕೊಡುತ್ತಿರುವ 'ಥಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ಇದೇ ತಿಂಗಳ 13ನೇ ತಾರೀಖಿಗೆ 5 ಸಾವಿರ ಸಂಚಿಕೆಯನ್ನು ಪೂರ್ಣಗೊಳಿಸಿ, ಇದೀಗ ಗಿನ್ನಿಸ್ ವಿಶ್ವ ದಾಖಲೆ ಮಾಡುತ್ತಿರುವುದು ಈ ಕಾರ್ಯಕ್ರಮದ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇಂದು ಮನೆ ಮಂದಿಯಲ್ಲಾ ದೂರದರ್ಶನದ ಮುಂದೆ ಒಟ್ಟಾರೆ ಕುಳಿತು ನೋಡಬಹುದಾದ ಕಾರ್ಯಕ್ರಮ ಎಂದರೆ ಇದೊಂದೇ ಇರಬಹುದು. ಈ ಕಾರ್ಯಕ್ರಮ ಅದೆಷ್ಟು ಜನಪ್ರಿಯತೆ ಗಳಿಸಿದೆ ಎಂದರೆ ಈ ಕಾರ್ಯಕ್ರಮದ 100ನೇ ಸಂಚಿಕೆಯಲ್ಲಿ ಸಾಹಿತಿ ಹಾಗೂ ರಾಜ್ಯಸಭಾ ಸದಸ್ಯರಾದ ಖ್ಯಾತ ಮಹಿಳಾ ಉದ್ಯಮಿಗಳು ಆದ ಡಾ.ಸುಧಾಮೂರ್ತಿ ಭಾಗವಹಿಸಿದ್ದರು.

ಈಗಾಗಲೇ ಈ ಕಾರ್ಯಕ್ರಮವು 2012 ರಲ್ಲಿ ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲೂ ದಾಖಲಾಗಿದೆ. ಇದುವರೆಗೂ ಈ ಕಾರ್ಯಕ್ರಮದಲ್ಲಿ 25 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ನೇರ ಪ್ರಸಾರದಲ್ಲಿ ಭಾಗವಹಿಸಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಇದೊಂದು ಉತ್ತಮ ಕಾರ್ಯಕ್ರಮ. ಈ ಕಾರ್ಯಕ್ರಮದ ರೂವಾರಿಯಾದ ಡಾ. ನಾ. ಸೋಮೇಶ್ವರ ಅವರ ಬದ್ಧತೆ ಮತ್ತು ಸಿದ್ಧತೆಯನ್ನು ಮೆಚ್ಚಲೇ ಬೇಕು. ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಪ್ರಸಾರವಾಗಲಿ ಸಾರ್ವಜನಿಕರಿಗೆ ದೂರದರ್ಶನ ಹತ್ತಿರವಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಬೆಂಕಿಯ ತೋಟ !

ಮಾನ್ಯರೆ,

ಈಗ ಎಲ್ಲೆಲ್ಲೂ ಎಫ್‌ಐಆರ್ (FIR). ಅದಕ್ಕೆ ಒಂದು 'E' ಸೇರಿಸಿದರೆ FIRE ಆಗುತ್ತದೆ ಎಂದರೆ ಏನರ್ಥ? ಭಾರತಾಂಬೆ 'ಜ್ವಾಲಾಮಾಲಿನಿ'ಯಾಗಿದ್ದಾಳೆ, 'ವನಮಾಲಿ(ನಿ)ಯಾಗುವುದರ ಬದಲು. ('ಶಾಂತಿಯ ತೋಟ' ಹೋಗಿ ಬೆಂಕಿಯ ತೋಟವಾಗಿ ಪರಿಣಮಿಸಿದೆ!) ಹರಹರಾ!

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

■ ಪ್ರಾಥಮಿಕ ಹಂತದಲ್ಲೇ ಲೈಂಗಿಕ ಶಿಕ್ಷಣ ಅಗತ್ಯ!

ಮಾನ್ಯರೆ,

ಇತ್ತೀಚೆಗೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಅಲೋಕ ಆರಾಧೆ ಅವರು ಲೈಂಗಿಕ ಶಿಕ್ಷಣವನ್ನು ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ನೀಡಬೇಕು. 9ನೇ ತರಗತಿಯಿಂದ ಅಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು ಶ್ಲಾಘನೀಯ. ಸಮಾಜದಲ್ಲಿ ಈ ವಿಷಯದ ಕುರಿತು ಎರಡು ದೃಷ್ಟಿಕೋನಗಳಿವೆ. ಕೆಲವರು ಶಾಲೆಯ ಪಠ್ಯಕ್ರಮದಲ್ಲೇ ಲೈಂಗಿಕ ಶಿಕ್ಷಣ ಇರಬೇಕು ಎಂದು ನಂಬಿದರೆ, ಇನ್ನು ಕೆಲವರು ಇದನ್ನು ಸೂಕ್ತ ಸಮಯದಲ್ಲಿ ನೀಡಬೇಕೆಂದು ಅಭಿಪ್ರಾಯಪಡುತ್ತಾರೆ. ಆದರೆ ವಾಸ್ತವದಲ್ಲಿ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲೇ ಲೈಂಗಿಕ ಶಿಕ್ಷಣ ಅಗತ್ಯ. ಮಕ್ಕಳು ತಮ್ಮ ದೇಹದ ಬದಲಾವಣೆಗಳು, ಹಾರ್ಮೋನ್‌ಗಳ ಕಾರ್ಯ ಮತ್ತು ಆ ಬದಲಾವಣೆಗಳನ್ನು ಜವಾಬ್ದಾರಿಯುತವಾಗಿ ಸ್ವೀಕರಿಸುವ ಬಗ್ಗೆ ತಿಳಿದಿರಬೇಕು. ಈ ಅರಿವು ಅವರಲ್ಲಿ ಆತ್ಮವಿಶ್ವಾಸ, ಗೌರವ ಹಾಗೂ ನೈತಿಕ ಬಲವನ್ನು ಬೆಳಸುತ್ತದೆ. ವಿಶೇಷವಾಗಿ ಹದಿಹರೆಯದ ಹುಡುಗರಿಗೂ ಹುಡುಗಿಯರಿಗೂ ಸಮರ್ಪಕ ಮಾರ್ಗದರ್ಶನ ನೀಡುವುದು ಅತ್ಯಂತ ಮುಖ್ಯ.

ಪ್ರಾಥಮಿಕ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣವನ್ನು ಪಠ್ಯಕ್ರಮದ ಭಾಗವನ್ನಾಗಿ ಮಾಡಿದರೆ, ಮಕ್ಕಳು ತಮ್ಮ ಶಾರೀರಿಕ–ಮಾನಸಿಕ ಬದಲಾವಣೆಗಳನ್ನು ಸುಲಭವಾಗಿ ನಿಭಾಯಿಸಿ, ಜಾಣ್ಮೆಯಿಂದ ತಮ್ಮ ಮುಂದಿನ ದಾರಿ ಆಯ್ಕೆ ಮಾಡಿಕೊಳ್ಳಲು ನೆರವಾಗುತ್ತದೆ. ಹುಡುಗಿಯರು ಕಿರುಕುಳದ ಸಂದರ್ಭಗಳಲ್ಲಿ ತಾವೇ ರಕ್ಷಿಸಿಕೊಳ್ಳಲು, ಲೈಂಗಿಕ ಶಿಕ್ಷಣವು ಜ್ಞಾನ, ಗೌರವ ಮತ್ತು ಆತ್ಮರಕ್ಷಣೆ ಕಲಿಸುತ್ತದೆ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಅತ್ಯಾಚಾರ ಮತ್ತು ಮಕ್ಕಳ ಮೇಲಿನ ದೌರ್ಜನ್ಯಗಳ ಘಟನೆಗಳು ಈ ಶಿಕ್ಷಣದ ಅವಶ್ಯಕತೆಯನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ. ಪ್ರಾಥಮಿಕ ಹಂತದಲ್ಲೇ ಈ ಶಿಕ್ಷಣ ಪ್ರಾರಂಭವಾದರೆ, ಅದು ಮಕ್ಕಳಲ್ಲಿ ಸೈದ್ಧಾಂತಿಕ ದೃಷ್ಟಿಕೋನ, ಜವಾಬ್ದಾರಿತನ ಮತ್ತು ನೈತಿಕ ಅರಿವನ್ನು ಬೆಳೆಸುತ್ತದೆ.ಹೀಗಾಗಿ ಶಾಲೆಗಳ ಪಠ್ಯಕ್ರಮದಲ್ಲಿ ಲೈಂಗಿಕ ಶಿಕ್ಷಣವನ್ನು ಸೇರಿಸುವುದು ಮಕ್ಕಳ ಸುರಕ್ಷತೆ, ಹಿತಾಸಕ್ತಿ ಮತ್ತು ಮಾನಸಿಕ ಆರೋಗ್ಯಕ್ಕೆ ಬಹುಮುಖ್ಯ.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಕನ್ನಡ ಎನೆ ಕುಣಿದಾಡುವುದೆನ್ನೆದೆ...

ಇನ್ನೇನು ಜಗದ್ವಿಖ್ಯಾತ ದಸರಾ ಮುಗಿಯುತ್ತಿದ್ದಂತೆಯೇ ದೀಪಾವಳಿ–ದೀಪದ ಸಾಲುಗಳ ಹಬ್ಬದ ಆಗಮನ. ಮತ್ತೆ ಮನೆ–ಮನದ ಶುದ್ಧೀಕರಣ. ನರಕಾಸುರನ ವಧೆ, ಬಲೀಂದ್ರನ ಆಗಮನ ಇತ್ಯಾದಿ ಕತೆಗಳನ್ನು ನೆನಪಿಸಿಕೊಳ್ಳುವ ಸಮಯ. ಮನೆಯ ಮಕ್ಕಳಿಗೆ, ನೆಂಟರಿಷ್ಟರೊಂದಿಗೆ ಸವಿಯುವ ದೀಪಾವಳಿಯ ಸಿಹಿ ತಿನಿಸುಗಳ, ಹೊಸ ಬಟ್ಟೆಗಳನ್ನು ಧರಿಸುವ, ಪಟಾಕಿಗಳನ್ನು ಸಿಡಿಸುವ ಆಕರ್ಷಣೆಯಾದರೆ, ಹಿರಿಯರಿಗೆ ಮನೆಯ ಮೂಲೆ ಮೂಲೆಯಿಂದ ಅಲಕ್ಷ್ಮಿಯನ್ನು ಓಡಿಸಿ, ಅಮಾವಾಸ್ಯೆಯ ದಿನ ಭಾಗ್ಯದ ದೇವತೆಯಾದ ಸಿರಿಲಕ್ಷ್ಮಿಯನ್ನು ಬರಮಾಡಿಕೊಳ್ಳುವ ತಯಾರಿಯ ಗಡಿಬಿಡಿ. ಅಕ್ಕನ ತದಿಗೆ, ಭಾವಬಿದಿಗೆಗಳು ಸ್ವಲ್ಪ ಸ್ವಲ್ಪವೇ ಹಿಂದಕ್ಕೆ ಸರಿಯುತ್ತಿರುವ ಹಬ್ಬಗಳು ಎಂಬುದು ವಾಸ್ತವ. ಇಂದಿನ ನ್ಯೂಕ್ಲಿಯರ್ ಕುಟುಂಬಗಳ ಕೊಡುಗೆ ಅದು ಎನ್ನೋಣವೇ ಶಾಸ್ತ್ರಕ್ಕೆ ಉತ್ಥಾನ ದ್ವಾದಶಿ ಅಥವಾ ತುಳಸಿ ಹಬ್ಬದ ಆಚರಣೆ ಮುಗಿಸಿದರೆ, ಹಬ್ಬಗಳ ಸಾಲಿನಿಂದ ಸ್ವಲ್ಪ ಬಿಡುವು ಎಂದು ಅಂದುಕೊಳ್ಳೋಣವೇ?

ಅದು ಹೇಗೆ ಅಕ್ಟೋಬರ್ ಮುಗಿಯುತ್ತಿದ್ದಂತೆ ನಮ್ಮ ಕಟ್ಟಾ ಕನ್ನಡಿಗರ ಮನದಲ್ಲಿ ಕನ್ನಡಾಂಬೆಯ ಮೇಲಿನ ಭಕ್ತಿ ದಿಢೀರನೆ ಉಕ್ಕೇರುವ ಸಮಯ. ಅದನ್ನು ಬೇಕಾದರೆ ನವಂಬರ್ ಕನ್ನಡ ಪ್ರೀತಿ ಎಂದಾದರೂ ಕರೆಯಿರಿ, ಅಂತೂ ಇಡೀ ನವಂಬರ್ ತಿಂಗಳಿನಲ್ಲಿ ಎಲ್ಲೆಲ್ಲೂ ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆಯದೇ ಉಘೇ ಉಘೇ. ಮೂಲೆಮೂಲೆಗಳಲ್ಲಿ ಅಡಗಿರುವ ಸಾಹಿತಿಗಳ ಹೆಸರುಗಳೆಲ್ಲಾ ಮೈ ಕೊಡವಿಕೊಂಡು ಹೊರ ಬಂದರೆ, ಆಹ್ವಾನಿತರಾದ ವಿಶೇಷ ಅತಿಥಿಗಳು ಭಾಷಣ ತಯಾರಿ ಮಾಡಿಕೊಳ್ಳಬೇಕಾದ ಸಮಯ. ಎಲ್ಲೆಲ್ಲೂ ಕನ್ನಡಂ ಗೆಲ್ಗೆ, ಕನ್ನಡಂ ಬಾಳ್ಗೆ, ಜೈ ಕರ್ನಾಟಕ ಮಾತೆ, ಬಾರಿಸು ಕನ್ನಡ ಡಿಂಡಿಮವಾ, ನಡೆ ಕನ್ನಡ–ನುಡಿ ಕನ್ನಡ, ತನು ಕನ್ನಡ–ಮನ ಕನ್ನಡ ಇತ್ಯಾದಿ ಘೋಷಣೆಗಳು ಮರುಜೀವ ಪಡೆಯುತ್ತವೆ. ರಸ್ತೆ ರಸ್ತೆಯಲ್ಲೂ ಕೆಂಪು ಹಳದಿ ಬಾವುಟಗಳು ಹಾರಾಡುತ್ತಾ ಎಲ್ಲರನ್ನೂ ಸ್ವಾಗತಿಸುತ್ತವೆ. ಸರಕಾರೀ ಕಾರ್ಯಕ್ರಮಗಳು ಒಂದನೆಯ ತಾರೀಖು



ನಡೆದರೆ, ಕನ್ನಡ ಪ್ರೇಮಿಗಳು ನವಂಬರ್ ತಿಂಗಳ ಉದ್ದಕ್ಕೂ ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಹುಮ್ಮಸ್ಸನ್ನು ತೋರುತ್ತಾರೆ. ಓಹೋ ಸ್ವಲ್ಪ ತಾಳಿ. ನಮ್ಮ ಕನ್ನಡದ ಪ್ರಖ್ಯಾತ ಕವಿ ಪುಂಗವರನ್ನೆಲ್ಲಾ ನೆನಪು ಮಾಡಿಕೊಳ್ಳುವ ಸಮಯ ಅಂದಿರಾ? ಛೆ ಛೆ, ಪಂಪ, ರನ್ನ, ಪೊನ್ನ ಜನ್ನ, ಕುಮಾರ ವ್ಯಾಸ, ಹರಿಹರ ರಾಘವಾಂಕರು ಇನ್ನೂ ಸ್ವಲ್ಪ ಉಸಿರಾಡುತ್ತಿದ್ದಾರೆ ಎಂದರೆ, ಅದು ನಮ್ಮ ಗಮಕ ವಾಚಕರ ಬಾಯಲ್ಲಿ ಮಾತ್ರ. ಕನ್ನಡ ರಾಜ್ಯೋತ್ಸವಕ್ಕೆ ಅವರನ್ನೇಕೆ ಎಳೆದು ತರೋಣ ಸದ್ಯ ಈಗಿನ ತುರ್ತು–ಜರೂರು ಎಂದರೆ, ಶುದ್ಧ ಕನ್ನಡವನ್ನು ಉಳಿಸಿಕೊಳ್ಳುವುದೂ ಅಲ್ಲ, ಸ್ವಲ್ಪವಾದರೂ ಕನ್ನಡವನ್ನು, ಕನ್ನಡತನವನ್ನು ಉಳಿಸಿಕೊಳ್ಳುವುದು.

ನಮ್ಮ ಇಂದಿನ ತಂದೆ ತಾಯಿಯರಿಗೆ ಹಿಡಿದಿರುವ ಇಂಗ್ಲೀಷ್ ಭೂತದಿಂದ ಸ್ವಲ್ಪವಾದರೂ ಬಿಡುಗಡೆ ಸಿಕ್ಕಿ, ಮಕ್ಕಳಲ್ಲಿ ತಮ್ಮ ಮಾತೃಭಾಷೆಯ ಬಗ್ಗೆ ಕೊಂಚ ಆದರ, ಅಭಿಮಾನ, ಆಸಕ್ತಿ ಹುಟ್ಟುವಂತೆ ಮಾಡಬೇಕಾದುದು ಅತ್ಯಂತ ಅವಶ್ಯಕ ಸಂಗತಿ ಆಗಿದೆ. ಇಲ್ಲವಾದಲ್ಲಿ ಇನ್ನು ಕೆಲವೇ ವರುಷಗಳಲ್ಲಿ ನಮ್ಮ ನಲುಮೆಯ, ಒಲುಮೆಯ ಸಿರಿಗನ್ನಡ, ಸಕ್ಕರೆಯ ಅಕ್ಕರೆಯ ಕನ್ನಡ ಕಣ್ಮರೆ ಆಗುವುದರಲ್ಲಿ ಸಂಶಯವೇ ಇಲ್ಲ ಎಂದು ನನಗಂತೂ ಅನ್ನಿಸುತ್ತದೆ. ಈಗಾಗಲೇ ದೂರದರ್ಶನ, ದಿನಪತ್ರಿಕೆ, ಸಾರ್ವಜನಿಕ ಸ್ಥಳಗಳಲ್ಲಿ ಕಂಡು ಬರುವ ಫಲಕಗಳ ಮೇಲೆ, ಮುದ್ರಣದಲ್ಲಿ ಕನ್ನಡದ ಅಪಭ್ರಂಶಗಳು ರಾರಾಜಿಸುತ್ತಿವೆ, ಅದನ್ನು ಸರಿ ಪಡಿಸಬೇಕೆಂದು ಯಾರಿಗಾದರೂ ಅನಿಸಿದುದು ಉಂಟೇ? ಮೊದಲಿಗೆ ಅದರಲ್ಲಿರುವ ಲೋಪ ದೋಷಗಳನ್ನು ಗುರುತಿಸುವ ಮಂದಿ ಎಷ್ಟು ಇದ್ದಾರೆ ಎಂಬುದು ಹೆಚ್ಚು ಉಚಿತವಾದ ಮಾತು ಎಂದನಿ

> **ಈಗಾಗಲೇ ದೂರದರ್ಶನ, ದಿನ ಪತ್ರಿಕೆ, ಸಾರ್ವಜನಿಕ ಸ್ಥಳಗಳಲ್ಲಿ ಕಂಡುಬರುವ ಫಲಕಗಳ ಮೇಲೆ, ಮುದ್ರಣದಲ್ಲಿ ಕನ್ನಡದ ಅಪಭ್ರಂಶಗಳು ರಾರಾಜಿಸುತ್ತಿವೆ, ಅದನ್ನು ಸರಿಪಡಿಸಬೇಕೆಂದು ಯಾರಿಗಾದರೂ ಅನಿಸಿದುದು ಉಂಟೇ? ಮೊದಲಿಗೆ ಅದರಲ್ಲಿರುವ ಲೋಪ ದೋಷಗಳನ್ನು ಗುರುತಿಸುವ ಮಂದಿ ಎಷ್ಟು ಇದ್ದಾರೆ ಎಂಬುದು ಹೆಚ್ಚು ಉಚಿತವಾದ ಮಾತು ಎಂದನಿಸುತ್ತದೆ. ಸಾವಿರ ಬಾರಿ ಮಾಡಿದ ತಪ್ಪೇ ಒಂದೊಮ್ಮೆ ಸರಿ ಆಗಿಬಿಡುವಂತೆ ಈ ಅಪಭ್ರಂಶಗಳೇ ಸರಿ ಎನ್ನುವ ಸಮಯವೂ ಬಂದಲ್ಲಿ ಅಚ್ಚರಿ ಪಡಬೇಕಿಲ್ಲ.**


ಸುತ್ತದೆ. ಸಾವಿರ ಬಾರಿ ಮಾಡಿದ ತಪ್ಪೇ ಒಂದೊಮ್ಮೆ ಸರಿ ಆಗಿಬಿಡುವಂತೆ ಈ ಅಪಭ್ರಂಶಗಳೇ ಸರಿ ಎನ್ನುವ ಸಮಯವೂ ಬಂದಲ್ಲಿ ಅಚ್ಚರಿ ಪಡಬೇಕಿಲ್ಲ.

ನಮ್ಮ ಮಹಿಳೆಯರಿಗೆ ಓದುವ ಹವ್ಯಾಸಕ್ಕಿಂತಲೂ ನೋಡುವ–ಕೇಳುವ ಹವ್ಯಾಸ ಹೆಚ್ಚು ಪ್ರಿಯವಾದುದು. ದೂರದರ್ಶನದಲ್ಲಿ ಬರುವ (ಎಂದೂ ಕೊನೆಗೊಳ್ಳದ) ಧಾರಾವಾಹಿಗಳು ಅದಕ್ಕೆ ಉತ್ತಮ ಉದಾಹರಣೆ. ಅದರ ವೀಕ್ಷಣೆಗಾಗಿ ಯಾವ ತ್ಯಾಗ–ಬಲಿದಾನಕ್ಕೂ ಅವರು ತಯಾರಾಗುತ್ತಾರೆ ಎಂಬುದು ಉತ್ಪ್ರೇಕ್ಷೆ ಖಂಡಿತಾ ಅಲ್ಲ. ಅದು ಬಿಟ್ಟರೆ ಅವರಿಗೆ ಅತ್ಯಂತ ಪ್ರಿಯವಾದುದು ಎಂದರೆ ಅಡುಗೆ ಚಾನಲ್ಲುಗಳು. ಅವುಗಳನ್ನು ನೋಡುವುದು, ಅದರಲ್ಲಿ ಭಾಗವಹಿಸುವುದು ಎಂದರೆ ಬಹುತೇಕ ಮಹಿಳೆಯರಿಗೆ ಆನಂದವೋ ಆನಂದ. ಅದರಲ್ಲಿ ನೀವು ನೋಡುವ ಅಥವಾ ಕೇಳುವ ಕನ್ನಡವನ್ನು ಗಮನಿಸಿದ್ದೀರಾ ಅವರಿಗೆ ಸ್ವಚ್ಛ ಮಾಡುವುದು ಗೊತ್ತೇ ಇಲ್ಲ. ಕ್ಲೀನ್ ಮಾಡುವುದು ಮಾತ್ರ ಗೊತ್ತು. ರೋಸ್ಟ್ ಮಾಡುವುದು ಮತ್ತು ಫ್ರೈ ಮಾಡುವುದರ ನಡುವಿನ ವ್ಯತ್ಯಾಸ ಅನೇಕರಿಗೆ ಗೊತ್ತೇ ಇರುವುದಿಲ್ಲ. ಎರಡೂ ಒಂದೇ ಎಂಬಂತೆ ಬಳಸುತ್ತಿರುತ್ತಾರೆ. ಲಕ್ಷಣವಾಗಿ ಕನ್ನಡದಲ್ಲೇ ಹುರಿಯುವುದು ಅಥವಾ ಕರಿಯುವುದು ಎಂದು ಬಳಸಬಾರದೇ ತರಕಾರಿಗಳನ್ನು ವಾಷ್ ಮಾಡುವ ಬದಲು ತೊಳೆದರೆ ಇವರಿಗೆ ಆಗುವ ನಷ್ಟವೇನೋ ಗೊತ್ತಿಲ್ಲ. ಒಲೆ ಹಚ್ಚದೆ, ಇವರು ಸ್ಟೌ ಅನ್ನು ಆನ್ ಮಾಡುತ್ತಾರೆ. ಒಟ್ಟಾರೆ ಇವರ ಅದ್ಭುತ ಭಾಷಾ ಸಂಪತ್ತಿನಿಂದಲೋ ಅಥವಾ ನಮ್ಮ ಕನ್ನಡದ ದುರಾದೃಷ್ಟದಿಂದಲೋ ನಮ್ಮ ಅಡುಗೆಯ ಮನೆಗಳಲ್ಲಿ ಇಂದು ರೆಸಿಪಿ, ಈವಿನಿಂಗ್ ಸ್ನ್ಯಾಕ್ಸ್, ಟೇಸ್ಟಿ, ಹೆಲ್ದೀ, ರೆಸ್ಟ್ ಮಾಡುವುದು, ಸ್ಪೂನ್, ಗ್ರೈಂಡ್ ಮಾಡುವುದು, ಪೌಡರ್ ಮಾಡುವುದು, ರೆಡಿ ಮಾಡುವುದು, ಬ್ಲೆಂಡಿಂಗ್, ಚಿಲಿ ಫ್ಲೇಕ್ಸ್, ಸೈಜ್, ಓವಲ್ ಶೇಪ್, ಯೂಸ್ ಮಾಡುವುದು ಇತ್ಯಾದಿ ಶಬ್ದಗಳ ಆಕ್ರಮಣಕ್ಕೆ ಸಿಕ್ಕಿ ಅಡುಗೆಯಲ್ಲಿ ಬಳಸುವ ಅಪ್ಪಟ ಕನ್ನಡ ಪದಗಳು ಕಣ್ಮರೆ ಆಗುತ್ತಿರುವುದಲ್ಲ, ಆಗಿಬಿಟ್ಟಿರುವುದಂತೂ ಖಂಡಿತಾ. ಇದಕ್ಕೆ ಯಾರನ್ನು ದೂಷಿಸೋಣ ಇಂದಿನ ಮಕ್ಕಳಿಗೆ ಶುಂಠಿ ಗೊತ್ತೇ ಇಲ್ಲ. ಜಿಂಜರ್ ಅಂದರೇನೆ ತಿಳಿಯುವುದು. ಹುರುಳಿಕಾಯಿ, ದೊಡ್ಡ ಮೆಣಸಿನಕಾಯಿಗಳು ಕಣ್ಮರೆಯಾಗಿ ಎಷ್ಟೋ ದಿನಗಳಾದುವು. ಹಳ್ಳಿಯ ಮಕ್ಕಳಿಗೂ ಇಂದು ಗೊತ್ತಿರುವುದು ಬೀನ್ಸ್ ಮತ್ತು ಕ್ಯಾಪ್ಸಿಕಂಗಳು ಮಾತ್ರ. ನಮ್ಮ ಪುಣ್ಯ ಕ್ರಿಯಾ ಪದಗಳು ಮಾತ್ರ ಇನ್ನೂ ಗಟ್ಟಿಯಾಗಿ ಉಳಿದುಕೊಂಡಿವೆ.

ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳೂ ಸಹ ಯೂಟ್ಯೂಬರ್ ಗಳಾಗಿರುವುದು ಸಂತೋಷವೇ. ಆದರೆ ಅವರು ಸ್ವಚ್ಛವಾಗಿ ಕನ್ನಡದಲ್ಲಿ ಮಾತನಾಡದೆ, ತಪ್ಪು ತಪ್ಪಾಗಿ ಇಂಗ್ಲೀಷ್ ಪದಗಳನ್ನು ಬಳಸುವುದನ್ನು ನೋಡಿದಾಗ ಕನಿಕರ ಉಂಟಾಗುತ್ತದೆ. ಕನ್ನಡದಲ್ಲಿ ಮಾತನಾಡಿದರೆ ಅದು ಕೀಳು ಎಂಬ ಭಾವನೆಯೇ ಮಧ್ಯ ಮಧ್ಯೆ ಸಾಧ್ಯ ವಾದಷ್ಟೂ (ತಪ್ಪು ತಪ್ಪಾಗಿಯಾದರೂ ಸರಿ) ಇಂಗ್ಲೀಷ್ ಪದಗಳನ್ನು ಬಳಸುವುದು ಬುದ್ಧಿವಂತರ ಲಕ್ಷಣ ಎಂದು ಅಂದುಕೊಂಡಿದ್ದಾರೋ ಗೊತ್ತಿಲ್ಲ. ನಾವು ಎಷ್ಟು ಭಾಷೆಗಳನ್ನು ಕಲಿತರೂ ಅದು ಒಳ್ಳೆಯದೇ. ಆದರೆ ನಮ್ಮ ತಾಯಿನುಡಿಗೆ ಅದು ಕಂಟಕ ಆಗಬಾರದಷ್ಟೆ ಇನ್ನೇನು ಬರಲಿರುವ ನವಂಬರ್ ತಿಂಗಳಿನಿಂದ ಪ್ರಜ್ಞಾಪೂರ್ವಕವಾಗಿ ನಾವೆಲ್ಲರೂ ಸಾಧ್ಯ ವಾದಷ್ಟೂ ಕನ್ನಡ ಪದಗಳನ್ನೇ ಬಳಸೋಣ, ನಮ್ಮ ಮಕ್ಕಳೂ ಹಾಗೆ ಮಾಡಲು ಪ್ರೇರೇಪಿಸೋಣ. ಏನಂತೀರಿ.

ಕೆಆರ್‌ಎಸ್ ಅಣೆಕಟ್ಟೆಯ ಹಿನ್ನೀರಲ್ಲಿ ರೋಮಾಂಚನಕಾರಿ ನೌಕಾಯಾನ ಸ್ಪರ್ಧೆ

ಮೊತ್ತ ಮೊದಲ ಈ ನೌಕಾಯಾನ ಸ್ಪರ್ಧೆಯಲ್ಲಿ ಭಾರತವೂ ಸೇರಿ 11 ದೇಶಗಳ 75 ಸ್ಪರ್ಧಿಗಳು ಭಾಗಿ



ಮೈಸೂರು, ಅ.12(ಬಿಎಲ್‌ಯು)– ಮಂಡ್ಯ ಜಿಲ್ಲೆಯ ಪ್ರಸಿದ್ಧ ಕೃಷ್ಣರಾಜ ಸಾಗರ ಅಣೆಕಟ್ಟೆಯ (ಕೆಆರ್‌ಎಸ್) ಹಿನ್ನೀರಿನ ಪ್ರಶಾಂತ ವಾತಾವರಣದಲ್ಲಿ ಏಷ್ಯನ್ ಇನ್‌ಕ್ಲೂಸೀವ್ ಸೈಲಿಂಗ್ (ನೌಕಾಯಾನ) ಸರಣಿ ಆರಂಭವಾಗಿದೆ. ಇದು ಭಾರತೀಯ ನೌಕಾಯಾನಕ್ಕೆ ರೋಮಾಂಚನಕಾರಿ ಕ್ಷಣವಾಗಿದೆ.

ರಾಯಲ್ ಮೈಸೂರು ಸೈಲಿಂಗ್ ಕ್ಲಬ್ (ಆರ್‌ಎಂ ಎಸ್‌ಸಿ), ಕರ್ನಾಟಕ ರಾಜ್ಯ ಸೈಲಿಂಗ್ ಅಸೋಸಿಯೇಷನ್ (ಕೆಎಸ್ ಎಸ್‌ಎ) ಹಾಗೂ ಭಾರತದ ಯಾಚ್ಟಿಂಗ್ ಅಸೋಸಿಯೇಷನ್ (ವೈಎಐ) ಸಂಯುಕ್ತಾಶ್ರಯದಲ್ಲಿ ಏಷ್ಯನ್ ಇನ್‌ಕ್ಲೂಸೀವ್ ಸೈಲಿಂಗ್ ಸರಣಿ ನಡೆಯುತ್ತಿದೆ. ಭಾರತದ ಮೊತ್ತ ಮೊದಲ ಅಂತರ್ಗತ ಸೈಲಿಂಗ್ ಈವೆಂಟ್ ಇದಾಗಿದ್ದು, ನೀರಿನಲ್ಲಿ ನೌಕಾ ಸಾಹಸ ಕ್ರೀಡೆ ಇದರ ಹೆಗ್ಗುರುತಾಗಿದೆ. ಈ ಕ್ರೀಡೆಯನ್ನು ಅಂತರ ರಾಷ್ಟ್ರೀಯ ಆಡಳಿತ ಸಂಸ್ಥೆ ವರ್ಲ್ಡ್ ಸೈಲಿಂಗ್ ಅನುಮೋದಿಸಿದೆ.

ಅಕ್ಟೋಬರ್ 8ರಿಂದ ಆರಂಭವಾಗಿರುವ ಈ ಕ್ರೀಡೆ ಸೋಮವಾರ (ಅಕ್ಟೋಬರ್ 13) ಅಂತ್ಯಗೊಳ್ಳಲಿದೆ. ಚೀನಾ, ಹಾಂಗ್‌ಕಾಂಗ್, ಜಪಾನ್, ಮಲೇಷಿಯಾ, ಥೈಲ್ಯಾಂಡ್, ಇಂಡೋನೇಷ್ಯಾ, ಫಿಲಿಫೈನ್ಸ್, ಭಾರತ ಮತ್ತು ಫ್ರಾನ್ಸ್ ಸೇರಿದಂತೆ 11 ದೇಶಗಳ 75 ಆಟಗಾರರು ಇದರಲ್ಲಿ ಭಾಗವಹಿಸಿದ್ದು, ಈ ಕ್ರೀಡೆ ಮೈನವಿರೇಳಿಸುತ್ತದೆ.

> **ಅಕ್ಟೋಬರ್ ತಿಂಗಳ ಆಹ್ಲಾದಕರ ಹವಾಮಾನ ಈ ಕ್ರೀಡೆಗೆ ಪೂರಕವಾಗಿದೆ. ಪ್ರಸ್ತುತ ತಾಪಮಾನ 21 ಡಿಗ್ರಿ ಸೆಲ್ಸಿಯಸ್ ನಿಂದ 30 ಡಿಗ್ರಿ ಸೆಲ್ಸಿವರೆಗೆ ದಾಖಲಾಗಿದೆ. ಪ್ರತಿ ಗಂಟೆಗೆ 9ರಿಂದ 14 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಈ ಕ್ರೀಡೆಗೆ ಪೂರಕ ಪರಿಸ್ಥಿತಿಯಾಗಿದೆ.**

ಅಂತರರಾಷ್ಟ್ರೀಯ ಮಟ್ಟದ ಕೌಶಲ್ಯವನ್ನು ಅನಾವರಣಗೊಳಿಸುವ ಈ ಕ್ರೀಡೆ ಕೆಆರ್‌ಎಸ್‌ನಲ್ಲಿ ನಡೆಯುತ್ತಿರುವುದು ಹೆಮ್ಮೆಯ ವಿಚಾರ. ಏಷ್ಯನ್ ಇನ್‌ಕ್ಲೂಸೀವ್ ಸೈಲಿಂಗ್ ಸರಣಿ ಮೂಲಕ ಈ ಕ್ರೀಡೆಯಲ್ಲಿ ಭಾರತ ತನ್ನ ಬದ್ಧತೆಯನ್ನು ಪ್ರಚುರಪಡಿಸಿದೆ.

ವಿವಿಧ ವಿಭಾಗಗಳಲ್ಲಿ ಈ ಕ್ರೀಡೆ ನಡೆಯುತ್ತಿದ್ದು, ಪುರುಷ ಹಾಗೂ ಮಹಿಳೆಯರು ಸ್ಪರ್ಧಿಸುತ್ತಿದ್ದಾರೆ. ಹನ್ಸಾ 2.3 ಏಕ ವ್ಯಕ್ತಿ, ಹನ್ಸಾ 303 ಏಕ ವ್ಯಕ್ತಿ ಹಾಗೂ ಹನ್ಸಾ 303 ಇಬ್ಬರು ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

ನಾನು ಹೇಳದ್ದನ್ನು ಪ್ರಕಟಿಸಿದರೆ ನಿಮ್ಮ ಮೇಲೆ ಮಾನನಷ್ಟ ಕೇಸ್ ಹಾಕ್ತೇನೆ!

● ಮಾಧ್ಯಮಗಳಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ ● ನಾನು ಮುಖ್ಯಮಂತ್ರಿ ಆಗುವ ಕಾಲ ಸಮೀಪಿಸುತ್ತಿದೆ ಎಂಬುದು ಮಾಧ್ಯಮಗಳ ವರದಿ ಅಷ್ಟೆ.

ಬೆಂಗಳೂರು, ಅ.11(ಕೆಎಂಶಿ)– ಮುಖ್ಯಮಂತ್ರಿ ಆಗುವ ಕಾಲ ಹತ್ತಿರ ಬಂದಿದೆ ಎಂಬುದಾಗಿ ನಾನು ಹೇಳಿಲ್ಲ. ಸಂಪುಟ ವಿಸ್ತರಣೆಯೂ ಇಲ್ಲ, ಪುನರ್ ರಚನೆಯೂ ಇಲ್ಲ ಎಂದಿರುವ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಮಾಧ್ಯಮಗಳು ಸುದ್ದಿ ತಿರುಚಿ ಬರೆಯುವುದನ್ನು ನಿಲ್ಲಿಸಲಿ ಎಂದಿದ್ದಾರೆ.

ನಾವು ಹೇಳದ್ದನ್ನು ನಿಮ್ಮ ಬಾಯಲ್ಲಿ ಹಾಕಿಕೊಂಡು, ನಮ್ಮನ್ನು ಏಕೆ ಇಕ್ಕಟ್ಟಿಗೆ ಸಿಲುಕಿಸುತ್ತೀರಿ. ಇದೇ ರೀತಿ ಮುಂದುವರೆದರೆ ನಿಮ್ಮಗಳ ಮೇಲೆ ಮಾನನಷ್ಟ ಮೊಕದ್ದಮೆ ಹೂಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಲಾಲ್‌ಬಾಗ್ ಉದ್ಯಾನವನದಲ್ಲಿ ಬೆಳಗಿನ ನಡಿಗೆ ಅಂಗವಾಗಿ ಸಾರ್ವಜನಿಕರೊಂದಿಗೆ ಸಂವಾದ ಬಳಿಕ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ನಾನು ಸಾರ್ವಜನಿಕರ ಭೇಟಿಗೆ ಬಂದಾಗ ಕೆಲವರು ನೀವು ಮುಖ್ಯಮಂತ್ರಿ ಆಗಬೇಕು. ಆ ಸಮಯ ಹತ್ತಿರ ಬರುತ್ತಿದೆಯೇ ಎಂದು ಕೇಳಿದರು. ಆದರೆ, ಮುಖ್ಯಮಂತ್ರಿ ಆಗುವ ಕಾಲ ಹತ್ತಿರ ಬರುತ್ತಿದೆ ಎಂಬುದಾಗಿ ನಾನೇ ಹೇಳಿದ್ದೇನೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದ್ದನ್ನು ಅಲ್ಲಗಳೆದರು.

ನಾನು ಮುಖ್ಯಮಂತ್ರಿ ಹುದ್ದೆ ಅಲಂಕರಿಸುವ ಆತುರದಲ್ಲಿ ಇಲ್ಲ. ನಾನು ಇಲ್ಲಿಗೆ ಬಂದಿರುವುದು ಸಾರ್ವಜನಿಕರ ಸೇವೆ ಮಾಡಲು, ರಾಜಕಾರಣ ಮಾಡಲು ಅಲ್ಲ. ಜನರ ಸೇವೆ ಮಾಡಲು ಹಗಲು–ರಾತ್ರಿ ತಿರುಗುತ್ತಿದ್ದೇನೆ. ನೀವು ಇದೇ ರೀತಿ ಸುದ್ದಿ ತಿರುಚುವುದಾದರೆ, ನಾನು ನಿಮಗೆ ಸಹಕಾರ ನೀಡುವುದಿಲ್ಲ. ಕಾರ್ಯಕ್ರಮಗಳಿಗೆ ಕರೆಯುವುದೂ ಇಲ್ಲ. ಮಾಧ್ಯಮ ಗೋಷ್ಠಿ ಕರೆಯುವುದೂ ಇಲ್ಲ. ಮಾಧ್ಯಮಗಳು ರಾಜಕಾರಣ ಮಾಡುವುದು ಬೇಡ. ನಾನು ಆ ರೀತಿ ಹೇಳಿಲ್ಲ. ಅದರ ಅಗತ್ಯವೂ ನನಗೆ ಇಲ್ಲ. ನನಗೆ ನನ್ನ ಗುರಿ ಗೊತ್ತಿದೆ. ಭಗವಂತ ನನಗೆ ಯಾವಾಗ ಅವಕಾಶ ಕೊಡುತ್ತಾನೋ ಕೊಡಲಿ.



ರಾಜ್ಯದ ಜನರ ಸೇವೆ ಹಾಗೂ ಬೆಂಗಳೂರಿನ ನಾಗರಿಕರಿಗೆ ಉತ್ತಮ ಆಡಳಿತ ನೀಡಲು ಶ್ರಮಿಸುತ್ತಿದ್ದೇನೆ. ಆದರೆ, ಒಳ್ಳೆಯ ಕೆಲಸ ಬಿಟ್ಟು ವಿವಾದ ಸೃಷ್ಟಿಸಲು ಕೆಲವು ಮಾಧ್ಯಮಗಳು ಪ್ರಯತ್ನಿಸುತ್ತಿವೆ.

ಯಾವ ಸಂಪುಟ ವಿಸ್ತರಣೆಯೂ ಇಲ್ಲ, ಅಧಿಕಾರವೂ ಇಲ್ಲ, ಮಾಧ್ಯಮಗಳು ಗಾಳಿ ಸುದ್ದಿ ಪ್ರಕಟಿಸುತ್ತಿವೆ. ಈ ಬಗ್ಗೆ ಮುಖ್ಯಮಂತ್ರಿಗಳು ಅಥವಾ ನಾನು ಪ್ರಸ್ತಾವನೆ ಮಾಡಬೇಕು. ನಾವಿಬ್ಬರೂ ಪ್ರಸ್ತಾಪ ಮಾಡಲಿಲ್ಲ ಎಂದಾದರೆ ಅದು ಗಾಳಿ ಸುದ್ದಿ. ಆತುರದಲ್ಲಿರುವವರು, ಮಾಧ್ಯಮಗಳ ಮುಂದೆ ಮಾತನಾಡುತ್ತಾರೆ. ಏನೇ ಇದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ಲಾಲ್‌ಬಾಗ್ ಅಭಿವೃದ್ಧಿ: ಸಾರ್ವಜನಿಕರು ಬಯಸಿದಂತೆ ಲಾಲ್‌ಬಾಗ್ ಅಭಿವೃದ್ಧಿಗೆ ಜಿಬಿಎ ವತಿಯಿಂದ 10 ಕೋಟಿ ರೂ. ಅನುದಾನ ನೀಡಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಸಾರ್ವಜನಿಕರ ಜೊತೆ ಚರ್ಚೆ ಮಾಡಿ ಸಲಹೆ, ದೂರು ಆಲಿಸಿದ್ದೇನೆ. ಸಮಸ್ಯೆ ಬಗೆಹರಿಸಲಾಗುವುದು. ಹಿರಿಯರು ಹಾಗೂ ಮಹಿಳೆಯರಿಗೆ ಅನುಕೂಲವಾಗುವಂತೆ ಜಿಮ್ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಬೆಂಗಳೂರಿನಲ್ಲಿ ಅವಕಾಶ ಇರುವೆಡೆ ಲಾಲ್‌ಬಾಗ್ ಮಾದರಿ ಟ್ರೀ ಪಾರ್ಕ್ ಮಾಡಲು ಅರಣ್ಯ ಇಲಾಖೆ ಜೊತೆ ಚರ್ಚಿಸಿ ಆರ್ಥಿಕ ಬೆಂಬಲ ನೀಡಲಾಗುವುದು.

ಲಾಲ್‌ಬಾಗ್‌ನಲ್ಲಿ ಬೆಳಗ್ಗೆಯಿಂದ ಸಂಜೆವರೆಗೂ ವೈದ್ಯರು ಹಾಗೂ ಆಂಬುಲೆನ್ಸ್ ಸೇವೆ ನಿಯೋಜನೆಗೆ ತೀರ್ಮಾನಿಸಿದ್ದು, ಇನ್ನು ಮುಂದೆ ಇಲ್ಲಿನ ಶೌಚಾಲಯಗಳ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗುವುದು. ಲಾಲ್‌ಬಾಗ್ ಸಾರ್ವಜನಿಕರ ಆಸ್ತಿ. ಇದನ್ನು ಉಳಿಸಲು ಎಲ್ಲಾ ರೀತಿ ಕ್ರಮ ಕೈಗೊಳ್ಳುತ್ತೇವೆ. ಟನಲ್ ರಸ್ತೆಗೆ ಉದ್ಯಾನವನದ 6 ಎಕರೆ ಭೂಮಿ ವಶಪಡಿಸಿಕೊಳ್ಳುವ ಅಗತ್ಯವಿಲ್ಲ. ಅರ್ಧ ಎಕರೆಯಲ್ಲಿ ಅಶೋಕ ಪಿಲ್ಲರ್ ಕಡೆ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶ ಕಲ್ಪಿಸಲಾಗುವುದು. ಪಾರ್ಕಿಂಗ್ ಜಾಗದಲ್ಲಿ ಸುಮಾರು ಒಂದು ಎಕರೆ ಜಾಗ ಸ್ಟೋರೇಜ್‌ಗೆ ಬಳಸಿಕೊಳ್ಳುತ್ತೇವೆ. ನಂತರ ಅದನ್ನು ತೆರವುಗೊಳಿಸಿ ಲಾಲ್‌ಬಾಗ್‌ಗೆ ಕೊಡುತ್ತೇವೆ.

ಸಣ್ಣದಾಗಿರುವ ಗಿಡಗಳನ್ನು ತೆರವುಗೊಳಿಸಿ, ಮತ್ತೆ ಗಿಡ ನೆಡುತ್ತೇವೆ. ಉಳಿದಂತೆ ಲಾಲ್‌ಬಾಗ್ ಉದ್ಯಾನವನಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿದರು.

ಬಿಜೆಪಿಯವರಿಗೆ ಬೆಂಗಳೂರು ಅಭಿವೃದ್ಧಿ ಮುಖ್ಯವಲ್ಲ. ರಾಜಕೀಯವೇ ಮುಖ್ಯ. ಅವರು ಜಿಬಿಎ ಸಮಿತಿ ಸಭೆಯಲ್ಲಿ ತಮ್ಮ ಅಭಿಪ್ರಾಯ, ಸಲಹೆ, ದೂರು ಹೇಳಿಕೊಳ್ಳಬಹುದಾಗಿತ್ತು. ಅವರನ್ನು ಜನ ಗೆಲ್ಲಿಸಿ ಅಧಿಕಾರ ನೀಡಿದ್ದು, ಜನರ ಧ್ವನಿಯಾಗಬೇಕಿತ್ತು. ಆದರೆ, ಬದಲಿಗೆ ಜಿಬಿಎ ರದ್ದು ಮಾಡುವುದಾಗಿ ಹೇಳಿದ್ದಾರೆ. ಅದು ಅವರಿಗೆ ಬಿಟ್ಟ ವಿಚಾರ.

ಕಾಂಗ್ರೆಸ್ ಸರ್ಕಾರ ಕೈಗೊಂಡ ಯೋಜನೆ, ತೀರ್ಮಾನಗಳನ್ನು ಯಾವುದೇ ಸರ್ಕಾರ ಬದಲಿಸಲು ಸಾಧ್ಯವಾಗಿಲ್ಲ. ನಮ್ಮ ಸರ್ಕಾರ ಸಂವಿಧಾನದ ಚೌಕಟ್ಟಿನಲ್ಲಿ ಜನಪರ ತೀರ್ಮಾನ ಮಾಡುತ್ತದೆ. ಮುಂದೆಯೂ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ. ಅವರು ಈ ಆಲೋಚನೆ ಮಾಡುವುದು ಬೇಡ.

ಪಾಲಿಕೆಗಳು, ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆ ಬಗ್ಗೆ ಮುಖ್ಯಮಂತ್ರಿ ಮುಂದಿನ ದಿನಗಳಲ್ಲಿ ಚರ್ಚಿಸುತ್ತಾರೆ. ನಾನು ಸಹ ಜಿಬಿಎ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಕಾರ್ಯಕರ್ತರ ಸಭೆ ಮಾಡಲಿದ್ದೇನೆ.

ಪಾಲಿಕೆಗಳಲ್ಲಿ ಸಿಬ್ಬಂದಿ ಹಾಗೂ ಕಟ್ಟಡ ಸಮಸ್ಯೆ ಪರಿಹರಿಸಲಾಗುವುದು. ಕಟ್ಟಡ ನಿರ್ಮಾಣಕ್ಕೆ ಜಾಗಗಳನ್ನು ಗುರುತಿಸಲಾಗಿದೆ. ಎರಡು ವರ್ಷದಲ್ಲಿ ನಿರ್ಮಾಣ ಮಾಡುತ್ತೇವೆ. ಅಲ್ಲಿಯವರೆಗೂ ಬಾಡಿಗೆ ಕಟ್ಟಡದಲ್ಲಿ ವ್ಯವಸ್ಥೆ ಮಾಡುತ್ತೇವೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಳೆದ ವರ್ಷದ ದಸರಾ ಗೌರವಧನಕ್ಕೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದ ಅರ್ಚಕರು



2024ನೇ ಸಾಲಿನ ದಸರಾ ಮಹೋತ್ಸವದ ಜಂಬೂಸವಾರಿ ದಿನದಂದು ಚಾಮುಂಡಿಬೆಟ್ಟದಿಂದ ಅರಮನೆಗೆ ಉತ್ಸವಮೂರ್ತಿ ಮೆರವಣಿಗೆ ವೇಳೆ ಪಾಲ್ಗೊಂಡಿರುವ ವೇದಘೋಷ ತಂಡ.

ಮೈಸೂರು, ಅ.11(ಎಂಟಿವೈ)– ಕಳೆದ ವರ್ಷದ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಜಂಬೂಸವಾರಿ ದಿನ ಚಾಮುಂಡಿ ಬೆಟ್ಟದಿಂದ ಅರಮನೆಗೆ ಚಾಮುಂಡೇಶ್ವರಿ ಉತ್ಸವ ಮೂರ್ತಿ ತರುವ ವೇಳೆ ಪಾಲ್ಗೊಂಡಿದ್ದ ಅರ್ಚಕರಿಗೆ ನೀಡಬೇಕಾಗಿದ್ದ 50 ಸಾವಿರ ರೂ. ಗೌರವ ಧನ ಬಿಡುಗಡೆ ಮಾಡುವಂತೆ ಅರ್ಚಕರು ಸರ್ಕಾರದ ಮುಖ್ಯಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

2024ನೇ ಸಾಲಿನ ದಸರಾ ಮಹೋತ್ಸವದ ಜಂಬೂಸವಾರಿ ದಿನ ಚಾಮುಂಡಿಬೆಟ್ಟದಿಂದ ಉತ್ಸವ ಮೂರ್ತಿಯನ್ನು ಅರಮನೆಗೆ ಮೆರವಣಿಗೆಯಲ್ಲಿ ತರಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆರು ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಒಂದು ಪುರೋಹಿತರ ತಂಡವೊಂದನ್ನು ನಿಯೋಜಿಸಿ, ಎಲ್ಲಾ ತಂಡಕ್ಕೂ ಗೌರವ ಧನ ನಿಗದಿ ಮಾಡಿತ್ತು. ಅಲ್ಲದೆ, ಈ ಗೌರವ ಧನವನ್ನು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನೀಡುವಂತೆ ಸಲಹೆ ನೀಡಿತ್ತು. ಆದರೆ, ದಸರಾ ಮುಗಿದು ಒಂದು ವರ್ಷವಾದರೂ ಪುರೋಹಿತರ ತಂಡಕ್ಕೆ ನೀಡಬೇಕಾಗಿದ್ದ 50 ಸಾವಿರ ರೂ. ಗೌರವ ಧನ ಬಿಡುಗಡೆ ಮಾಡದೇ ಇರುವುದರಿಂದ ಪುರೋಹಿತರ ತಂಡ ರಾಜ್ಯ ಸರ್ಕಾರದ ಕಾರ್ಯದರ್ಶಿ(ಮುಜರಾಯಿ), ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ಜಿಲ್ಲಾಧಿಕಾರಿ ಹಾಗೂ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗೆ ಪತ್ರ ಬರೆದು ಗೌರವ ಧನ ನೀಡುವಂತೆ ಕೋರಿದ್ದಾರೆ.

ಕಳೆದ ಸಾಲಿನ ದಸರಾ ಮಹೋತ್ಸವದಲ್ಲಿ ಚಾಮುಂಡಿ ಬೆಟ್ಟದಿಂದ ಉತ್ಸವ ಮೂರ್ತಿಯನ್ನು ಅರಮನೆಗೆ ಮೆರವಣಿಗೆಯಲ್ಲಿ ತರಲು 2 ಲಕ್ಷ ರೂ. ವೆಚ್ಚ ಮಾಡಲು ನಿರ್ಧರಿಸಲಾಗಿತ್ತು. ಅದರಲ್ಲಿ 10 ಮಂದಿಯುಳ್ಳ ಎರಡು ವೀರಭದ್ರ ಕುಣಿತದ ತಂಡಕ್ಕೆ ತಲಾ 25 ಸಾವಿರ ರೂ., 10 ಕಲಾವಿದರುಳ್ಳ ಚಂಡೆ ವಾದನ ತಂಡಕ್ಕೆ 25 ಸಾವಿರ ರೂ., ನಾದಸ್ವರ ತಂಡಕ್ಕೆ 25 ಸಾವಿರ ರೂ., ಸ್ಯಾಕ್ಸೋಫೋನ್ ತಂಡಕ್ಕೆ 25 ಸಾವಿರ ರೂ., ಪೂಜಾ ಕುಣಿತ ತಂಡಕ್ಕೆ 25 ಸಾವಿರ ರೂ. ಹಾಗೂ 12 ಮಂದಿ ಪುರೋಹಿತರು ಇದ್ದ ವೇದಘೋಷ ತಂಡಕ್ಕೆ 50 ಸಾವಿರ ರೂ. ಗೌರವ ಧನ ನಿಗದಿ ಮಾಡಲಾಗಿತ್ತು. ಆದರೆ, ಈ ಸಾಲಿನ ದಸರಾ ಮುಗಿದರೂ, ಕಳೆದ ಸಾಲಿನಲ್ಲಿ ಪಾಲ್ಗೊಂಡ ಕೆಲವರಿಗೆ ಗೌರವ ಧನ ಸಿಕ್ಕಿಲ್ಲ ಎಂದು ದೂರುದಾರರಾದ ಅರ್ಚಕ ಹೆಚ್.ಎಸ್.ರಾಕೇಶ್ ಆರೋಪಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನ

ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದಿಂದ ಪ್ರತಿಭಟನೆ



ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ,ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.11(ಜಿಎ)–ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ವತಿಯಿಂದ ಟೌನ್ ಹಾಲ್ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಪ್ರತಿಭಟನೆ ನಡೆಸಲಾಯಿತು.

ಕಲಾಪ ನಡೆಯುತ್ತಿದ್ದ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಹಿರಿಯ ವಕೀಲ ರಾಕೇಶ್ ಕಿಶೋರ್ ಶೂ ಎಸೆದಿರುವುದು ಅತ್ಯಂತ ಖಂಡನೀಯ. ವಕೀಲರು ನ್ಯಾಯಾಂಗ ವ್ಯವಸ್ಥೆಯ ಹೃದಯ ಭಾಗ. ಇದು ನ್ಯಾಯಾಂಗ ವ್ಯವಸ್ಥೆಗೆ, ಸಂವಿಧಾನಕ್ಕೆ ಆಗಿರುವ ಗಾಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಭಾರತದ ಸಾರ್ವಭೌಮತ್ವವನ್ನು ನ್ಯಾಯಾಂಗದಲ್ಲಿ ಎತ್ತಿ ಹಿಡಿಯುವ ಅತ್ಯಂತ ಮಹತ್ವದ ಸ್ಥಾನದಲ್ಲಿ ಕುಳಿತಿದ್ದಾರೆ. ಪ್ರತಿಯೊಬ್ಬ ಭಾರತೀಯನ ಆತ್ಮಗೌರವ ಹಾಗೂ ಘನತೆಯನ್ನು ನ್ಯಾಯ ದೃಷ್ಟಿಯಿಂದ ಪರಿಶೀಲಿಸಿ ಸಾಂವಿಧಾನಿಕ ಮೌಲ್ಯಗಳಿಗೆ ಚ್ಯುತಿ ಬಾರದಂತೆ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು. ಸದಾ ಅಸಮಾನತೆ ಮತ್ತು ತಾರತಮ್ಯವನ್ನೇ ಉಸಿರಾಡುವ ಕೋಮುವಾದಿ ಸನಾತನಿ ಮನಸ್ಸುಗಳು ದ್ವೇಷ ಕಾರುವ ಕೆಲಸಕ್ಕೆ ಮುಂದಾಗಿವೆ ಎಂದು ಕಿಡಿಕಾರಿದರು.

ಶೂ ಎಸೆಯಲು ಯತ್ನಿಸಿದ ರಾಕೇಶ್ ಕಿಶೋರ್ ಎಂಬ ಮನುವಾದಿ ಮನಸ್ಸಿನ ವಕೀಲ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಸಮಾಜವನ್ನು ಇಬ್ಭಾಗಿಸಿ ಪರಸ್ಪರ ದ್ವೇಷ ಮತ್ತು ಅಸಹನೆಯನ್ನು ಹುಟ್ಟುಹಾಕುತ್ತಿರುವ ಸಂಘ ಪರಿವಾರ ಮತ್ತು ಮನುವಾದದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕಿಡಿಕಾರಿದರು. ತಕ್ಷಣವೇ ಆರೋಪಿಯನ್ನು ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ಒಳಪಡಿಸಬೇಕು. ನೀತಿ ಸಂಹಿತೆ ವಿರುದ್ಧವಾಗಿ ನಡೆದುಕೊಂಡಿರುವ ವಕೀಲನನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಮಾಜಿ ಮೇಯರ್ ನಾರಾಯಣ್, ಸಂಘದ ರಾಜ್ಯ ಉಪಾಧ್ಯಕ್ಷ ಆರ್.ಶಿವ, ಜಿಲ್ಲಾಧ್ಯಕ್ಷ ಆರ್ಟಿಸ್ಟ್ ಎಸ್.ನಾಗರಾಜು, ರಾಜ್ಯ ಸಂಚಾಲಕ ಆರ್.ವಾಸು, ಕಾರ್ಯದರ್ಶಿ ಯತಿರಾಜ್, ಉಸ್ತುವಾರಿ ಗಂಗಯ್ಯ, ಸಂತೋಷ್‌ಕುಮಾರ್, ಆರ್.ಲಕ್ಷ್ಮಣ, ಕೆ.ನಾಗರತ್ನ, ಸಿ.ಶಂಕರ್, ಸಿ.ಎಂ.ಮಹದೇವ್, ಶ್ರೀನಿವಾಸಲು, ಮಹದೇವ್, ಬಿ.ಜೆ.ರಾಮಚಂದ್ರು, ಆರ್.ಹರೀಶ್, ಮಹದೇವ್, ಎನ್.ಅರುಣ್ ಕುಮಾರ್, ಬಾಬು, ಪರಶುರಾಮ್, ಸುರೇಶ್, ಶೇಷ, ಲೋಕೇಶ್ ಹಾಜರಿದ್ದರು.

ನಟಿ ದೀಪಿಕಾ ಪಡುಕೋಣೆ ಮಾನಸಿಕ ಆರೋಗ್ಯದ ರಾಯಭಾರಿ

ನವದೆಹಲಿ, ಅ.11– ಬಾಲಿವುಡ್ ಖ್ಯಾತ ನಟಿ ದೀಪಿಕಾ



ಪಡುಕೋಣೆ ಅವರನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ದೇಶದ ಮೊದಲ ಮಾನಸಿಕ ಆರೋಗ್ಯ ರಾಯಭಾರಿಯಾಗಿ ನೇಮಿಸಿದೆ.

ದೇಶದಾದ್ಯಂತ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು, ಕಳಂಕವನ್ನು ಕಡಿಮೆ ಮಾಡುವುದು ಇದರ ಮುಖ್ಯ ಗುರಿಯಾಗಿದೆ. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆ ಹೆಚ್ಚಾಗಿದೆ. ಮಾಹಿತಿ, ಶಿಕ್ಷಣ ಹಾಗೂ ಮುಕ್ತ ಸಂಭಾಷಣೆಗಳನ್ನು ನಡೆಸಲು ರಾಯಭಾರಿಯಾಗಿ ದೀಪಿಕಾ ಪಡುಕೋಣೆ ಸಹಕರಿಸಲಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ದೀಪಿಕಾ ಪಡುಕೋಣೆ, ವಿಶ್ವ ಮಾನಸಿಕ ಆರೋಗ್ಯ ದಿನದಂದು, ದೇಶದ ಮೊದಲ ಮಾನಸಿಕ ಆರೋಗ್ಯ ರಾಯಭಾರಿಯಾಗಿ ನೇಮಕಗೊಂಡಿರುವುದು ನನಗೆ ಹೆಮ್ಮೆ ಇದೆ. ದೇಶದ ಜನರ ಮಾನಸಿಕ ಆರೋಗ್ಯವನ್ನು ಸುಧಾರಿಸಲು ಸಚಿವಾಲಯ ಅರ್ಥಪೂರ್ಣ ಕ್ರಮಗಳನ್ನು ಕೈಗೊಂಡಿದೆ ಎಂದಿದ್ದಾರೆ. ಆರೋಗ್ಯಕರ ಭಾರತವನ್ನು ನಿರ್ಮಿಸಲು ಸಹಕರಿಸುತ್ತೇನೆ. ಮಾನಸಿಕ ಆರೋಗ್ಯ ಚೌಕಟ್ಟನ್ನು ಮತ್ತಷ್ಟು ಬಲಪಡಿಸಲು ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ ಕೆಲಸ ಮಾಡಲು ಉತ್ಸುಕಳಾಗಿದ್ದೇನೆ ಎಂದು ತಮ್ಮ ಸಾಮಾಜಿಕ ಮಾಧ್ಯಮದಲ್ಲಿ (ಇನ್‌ಸ್ಟಾಗ್ರಾಮ್) ಬರೆದುಕೊಂಡಿದ್ದಾರೆ.

ಬಾಲಕಿ ಮೇಲಿನ ಅತ್ಯಾಚಾರ–ಹತ್ಯೆ ಖಂಡಿಸಿ ಎಐಎಂಎಸ್‌ಎಸ್‌ನಿಂದ ಪ್ರತಿಭಟನೆ

ಮೈಸೂರು,ಅ.11(ಜಿಎ)–ಮೈಸೂರಿನಲ್ಲಿ ಬಲೂನ್ ಮಾರಲು ಬಂದಿದ್ದ ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಮತ್ತು ಹತ್ಯೆಯನ್ನು ಖಂಡಿಸಿ ಮೈಸೂರಿನ ಹಳೆ ಡಿಸಿ ಕಚೇರಿ ಎದುರು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್), ಎಐಡಿಎಸ್‌ಓ ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಹಳೆ ಡಿಸಿ ಕಚೇರಿ ಎದುರು ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಮತ್ತು ಹತ್ಯೆಯನ್ನು ಖಂಡಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್), ಎಐಡಿಎಸ್‌ಓ ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹತ್ತು ವರ್ಷದ ಅಪ್ರಾಪ್ತ ಬಾಲಕಿಯನ್ನು ಅತ್ಯಾಚಾರ ಮಾಡಿ ಭೀಕರವಾಗಿ ಹತ್ಯೆಗೈಯ್ಯಲಾಗಿರುವ ಹೃದಯ ವಿದ್ರಾವಕ ಘಟನೆಯಿಂದಾಗಿ ಸಾಂಸ್ಕೃತಿಕ ನಗರಿಯ ಜನತೆಗೆ ಆಘಾತವನ್ನುಂಟು ಮಾಡಿದೆ. ದಸರಾದಲ್ಲಿ ತಮ್ಮ ಜೀವನೋಪಾಯಕ್ಕಾಗಿ ದುಡಿಯಲು ಬಂದ ವಲಸೆ ಕಾರ್ಮಿಕರು ತಮ್ಮ ಮಗಳ ದುರಂತ ಅಂತ್ಯವನ್ನು ಕಾಣುವಂತಾಗಿದೆ. ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಸರ್ಕಾರಗಳು ತಕ್ಷಣ ಎಲ್ಲಾ ರೀತಿಯ ಕ್ರಮ ವಹಿಸಬೇಕು. ಇದರ ಕುರಿತು ಸಮಗ್ರ ತನಿಖೆಯನ್ನು ನಡೆಸಿ ಅಪರಾಧಿಗೆ ಉಗ್ರ ಶಿಕ್ಷೆಯನ್ನು ವಿಧಿಸಬೇಕು. ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮೃತ ಬಾಲಕಿಯ ಪೋಷಕರಿಗೆ ಸೂಕ್ತ ಪರಿಹಾರ ಒದಗಿಸಬೇಕು. ಈ ಘಟನೆಯ ನ್ಯಾಯ ನಿರ್ಣಯದಲ್ಲಿ ಯಾವುದೇ ರೀತಿಯ ವಿಳಂಬವಾಗಬಾರದು. ಹಾಗೆಯೇ ಸಮಾಜದಲ್ಲಿ ವಿಷದಂತೆ ಹರಡುತ್ತಿರುವ ಅಶ್ಲೀಲ ಸಿನಿಮಾ ಸಾಹಿತ್ಯಗಳಿಗೆ, ಕುಡಿತ–ಜೂಜು ಮದ್ಯ, ಮಾದಕ ವಸ್ತು ಸೇವನೆ –ಮಾರಾಟಕ್ಕೂ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು. ಶಿಕ್ಷಣ ಪಡೆಯಬೇಕಾದ ಹತ್ತು ವರ್ಷದ ಬಾಲಕಿಯು ಜೀವನೋಪಾಯಕ್ಕಾಗಿ ಕುಟುಂಬದೊಂದಿಗೆ ದಸರಾ ಹಬ್ಬದಲ್ಲಿ ಅಲೆಮಾರಿ ಬಾಲ ಕಾರ್ಮಿಕಳಾಗಿದ್ದ ಹೆಣ್ಣು ಮಗು ಪೈಶಾಚಿಕ ಕೃತ್ಯಕ್ಕೆ ಒಳಗಾಗಿರುವುದು ಅತ್ಯಂತ ನೋವಿನ ಸಂಗತಿ. ಇಂದು ಸಮಾಜದಲ್ಲಿ ಭಗತ್ ಸಿಂಗ್, ನೇತಾಜಿ ಅಂತಹವರ ಆದರ್ಶ ಮೌಲ್ಯಗಳು ಇಲ್ಲದಿರುವುದು ಇಂತಹ ಘಟನೆಗಳು ಹೆಚ್ಚುವುದಕ್ಕೆ ಕಾರಣವಾಗಿದೆ. ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ಮೈಗೂಡಿಸಿಕೊಂಡು ಆರೋಗ್ಯಕರ ಸಮಾಜ ಕಟ್ಟುವಲ್ಲಿ ಜವಾಬ್ದಾರಿ ತೆಗೆದುಕೊಳ್ಳುವ ಹೊಣೆ ವಿದ್ಯಾರ್ಥಿ, ಯುವ ಜನರ ಮೇಲಿದೆ ಎಂದರು.

ಪ್ರತಿಭಟನೆಯಲ್ಲಿ ಎಐಎಂಎಸ್‌ಎಸ್ ರಾಜ್ಯ ಉಪಾಧ್ಯಕ್ಷೆ ಸೀಮಾ, ಜಿಲ್ಲಾ ಕಾರ್ಯದರ್ಶಿ ಆಸಿಯಾ ಬೇಗಂ, ಸಾಮಾಜಿಕ ಹೋರಾಟಗಾರ ಉಗ್ರನರಸಿಂಹೇಗೌಡ, ಹಿರಿಯ ವಕೀಲ ಬಾಬುರಾಜನ್, ರತಿರಾವ್, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ನಿತಿನ್, ರೈತ ಸಂಘಟನೆಯ ಮುಖಂಡ ಪಿ.ಮರಂಕಯ್ಯ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು ದಸರಾದಲ್ಲಿ ವಿಶೇಷ ಆತಿಥ್ಯ; ಜಿಲ್ಲಾಡಳಿತಕ್ಕೆ ಇಟಲಿ ರಾಯಭಾರ ಕಚೇರಿ ಪ್ರಶಂಸೆ


ಮೈಸೂರು,ಅ.11(ಬಿಎಲ್‌ಯು)–ಮೈಸೂರು ದಸರಾ ಮಹೋತ್ಸವದಲ್ಲಿ ಹೃದಯಸ್ಪರ್ಶಿ ಆತಿಥ್ಯ ನೀಡಿದ ಮೈಸೂರು ಜಿಲ್ಲಾಡಳಿತದ ಬಗ್ಗೆ ಇಟಲಿ ರಾಯಭಾರ ಕಚೇರಿ ಪ್ರಶಂಸೆ ವ್ಯಕ್ತಪಡಿಸಿದೆ. ಈ ಸಂಬಂಧ ಇಟಲಿ ರಾಯಭಾರ ಕಚೇರಿ ರಾಜ್ಯದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದು, ಇದನ್ನು ಡಾ.ಶಾಲಿನಿ ರಜನೀಶ್ ಅವರು ಮೈಸೂರು ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಅವರಿಗೆ ಕಳುಹಿಸಿದ್ದಾರೆ.

ದಸರಾ ಆಚರಣೆಗಳಲ್ಲಿ ಉಪಸ್ಥಿತರಿರುವ ನನ್ನ ಸಂತೋಷ ಮತ್ತು ಗೌರವ ನಿಜಕ್ಕೂ ನನಸಾಯಿತು. ದಸರಾ ಮೂಲಕ ನಾಡಿನ ಸಾಂಸ್ಕೃತಿಕ ಉತ್ಸವದ ಭವ್ಯತೆಯನ್ನು ನೇರವಾಗಿ ವೀಕ್ಷಣೆ ಮಾಡುವ ಸೌಭಾಗ್ಯ ದೊರೆಯಿತು. ದಸರಾ ಸುಗಮವಾಗಿ ನಡೆಯಲು ರಾಜ್ಯದ ಆಡಳಿತ ಮತ್ತು ಪೊಲೀಸರು ಮಾಡಿದ ಅವಿರತ ಪ್ರಯತ್ನಗಳಿಗೆ ಕೃತಜ್ಞತೆ ಅರ್ಪಿಸಿದ್ದೇನೆ ಎಂದು ಹೇಳಿದ್ದಾರೆ. ಭವಿಷ್ಯದ ಇಂತಹ ಅವಕಾಶಗಳಿಗೆ ನಾನು ಎದುರು ನೋಡುತ್ತಿದ್ದು, ಅಂತಹ ಅರ್ಥಪೂರ್ಣ ಸಾಂಸ್ಕೃತಿಕ ಸಂದರ್ಭದಲ್ಲಿ ಭಾಗವಹಿಸಲು ಕಾತುರರಾಗಿರುವುದಾಗಿ ಇಟಲಿ ರಾಯಭಾರ ಕಚೇರಿ ತಿಳಿಸಿದೆ. ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಬ್ರಿಟನ್, ಸ್ವಿಟ್ಜರ್‌ಲ್ಯಾಂಡ್, ಮಲೇಷ್ಯಾ, ನೆದರ್‌ಲ್ಯಾಂಡ್ ರಾಯಭಾರ ಕಚೇರಿಯ ಪ್ರತಿನಿಧಿಗಳು ಭಾಗಿಯಾಗಿ ವಿಶಿಷ್ಟ ಅನುಭವ ಪಡೆದಿದ್ದಾರೆ.

ಇಂದು ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ಸಮಾವೇಶ

ಮೈಸೂರು, ಅ.11–ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಮೈಸೂರು–ಮಂಡ್ಯ ಜಿಲ್ಲಾ ಸಮಾವೇಶವನ್ನು ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಡಿಟೋರಿಯಂನಲ್ಲಿ ಅ.12ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ.

ಸಮಾವೇಶವನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾದ ರಾಜ್ಯಾಧ್ಯಕ್ಷ ಆರ್.ಪಿ. ರವಿಶಂಕರ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಆನಂದ ಕೃಷ್ಣ ವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಜಿಲ್ಲಾ ಸಮಾವೇಶದ ಛೇರ್ಮನ್ ಎಂ.ಎಸ್.ರಾಮಚಂದ್ರ, ಮಹಾಸಭಾದ ಕಾರ್ಯದರ್ಶಿ ಕೆ.ಆರ್.ಕೃಷ್ಣ, ಮೈಸೂರು ವಿಭಾಗೀಯ ಉಪಾಧ್ಯಕ್ಷ ಪಾರ್ಥಸಾರಥಿ, ಮಂಡ್ಯ ಜಿಲ್ಲಾ ಸಮಿತಿ ಅಧ್ಯಕ್ಷ ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆ. ಈ ವೇಳೆ ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ವಿ.ರಾಮ್‌ಪ್ರಸಾದ್ ಅವರನ್ನು ಅಭಿನಂದಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.



ಕೇರಳ ನಟ ಜಯಕೃಷ್ಣನ್ ಮಂಗಳೂರಲ್ಲಿ ಬಂಧನ

ಮಂಗಳೂರು, ಅ.11– ಕ್ಯಾಬ್ ಚಾಲಕನಿಗೆ ಟೆರರಿಸ್ಟ್ ಎಂದು ಬೈದಿರುವ ಕಾರಣಕ್ಕೆ ಕೇರಳ ಚಿತ್ರರಂಗದ ನಟ ಜಯಕೃಷ್ಣನ್ ಅವರನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ. ಅವರೊಂದಿಗೆ ಇದ್ದ ಸಂತೋಷ್ ಅಬ್ರಾಹಂನನ್ನೂ ಬಂಧಿಸಿದ್ದು, ಇನ್ನೋರ್ವ ಆರೋಪಿ ವಿಮಲ್ ನಾಪತ್ತೆಯಾಗಿದ್ದಾರೆ. ಕಳೆದ ಅ.9ರಂದು ಈ ಮೂವರು ಆಪ್ ಮೂಲಕ ಮಂಗಳೂರಿನ ಬಿಜೈಗೆ ಕ್ಯಾಬ್ ಬುಕ್ ಮಾಡಿದ್ದರು. ಅಹ್ಮದ್ ಶಫೀಕ್ ಎಂಬವರು ಕರೆ ಮಾಡಿ ವಿಚಾರಿಸಿದ್ದರು. ಈ ವೇಳೆ ಹಿಂದಿ, ಮಲಯಾಳಂ ಭಾಷೆಯಲ್ಲಿ ಮಾತನಾಡಿದ ಆರೋಪಿಗಳು, ನೀನು ಮುಸ್ಲಿಂ ತೀವ್ರವಾದಿ, ಟೆರರಿಸ್ಟ್ ಎಂದು ಅವಾಚ್ಯವಾಗಿ ಬೈದಿದ್ದಾರೆ ಎಂದು ಕ್ಯಾಬ್ ಚಾಲಕ ಅಹ್ಮದ್ ಶಫೀಕ್, ಉರ್ವಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇಬ್ಬರನ್ನು ಬಂಧಿಸಿದ್ದು, ಮತ್ತೋರ್ವನಿಗಾಗಿ ಶೋಧ ಕಾರ್ಯ ನಡೆಸಿದ್ದಾರೆ.

ಇಂದಿನ ಯುವ ರಾಜಕಾರಣಿಗಳಿಗೆ ನನ್ನ ಸುದೀರ್ಘ ರಾಜಕೀಯ ಅನುಭವ ಧಾರೆ ಎರೆಯಲು ಸಿದ್ಧ

ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಭರವಸೆ

ಮೈಸೂರು, ಅ.11(ಬಿಎಲ್‌ಯು)– ರಾಜಕಾರಣದಿಂದ ಅಂತರ ಕಾಯ್ದುಕೊಂಡಿದ್ದರೂ ತಮ್ಮ ಸುದೀರ್ಘ ರಾಜಕೀಯ ಅನುಭವವನ್ನು ಇಂದಿನ ಯುವ ರಾಜಕಾರಣಿಗಳಿಗೆ ಧಾರೆ ಎರೆಯಲು ಸಿದ್ಧನಿದ್ದೇನೆ ಎಂದು ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಭರವಸೆ ನೀಡಿದರು.



ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಅನ್ವೇಷಣಾ ಸೇವಾ ಟ್ರಸ್ಟ್ ಮತ್ತು ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಜಂಟಿಯಾಗಿ ಆಯೋಜಿಸಿದ್ದ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರೊಂದಿಗೆ ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅವರನ್ನು ಸನ್ಮಾನಿಸಲಾಯಿತು.

ನಗರದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ಅನ್ವೇಷಣಾ ಸೇವಾ ಟಸ್ಟ್ ಮತ್ತು ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಸಂಯುಕ್ತವಾಗಿ ಆಯೋಜಿಸಿದ್ದ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ತಮ್ಮ ರಾಜಕೀಯ ಅನುಭವವನ್ನು ಯುವ ರಾಜಕಾರಣಿಗಳಿಗೆ ಧಾರೆ ಎರೆಯುವ ಮೂಲಕ ಅವರಲ್ಲಿ ಒಳ್ಳೆಯ ನಾಯಕತ್ವ ಗುಣ ಬೆಳೆಸುತ್ತೇನೆ ಎಂದು ಹೇಳಿದರು.

ನಾನು ಸಾರಿಗೆ ಸಚಿವನಾಗಿದ್ದ ಸಂದರ್ಭದಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತಂದಿದ್ದೇನೆ. ಈಗಿನ ಕೇಂದ್ರ ಸರ್ಕಾರದ ನೀತಿ ಆಯೋಗ ಇದರ ಬಗ್ಗೆ ಅಧ್ಯಯನ ನಡೆಸುತ್ತಿದೆ. ಈಗಿನ ಚುನಾವಣಾ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆ ತರುವ ಅವಶ್ಯಕತೆ ಇದೆ ಎಂದು ಪಿ.ಜಿ.ಆರ್. ಸಿಂಧ್ಯಾ ಪ್ರತಿಪಾದಿಸಿದರು.

ತಮ್ಮ 77ನೇ ಹುಟ್ಟುಹಬ್ಬಕ್ಕೆ ಶುಭ ಹಾರೈಸಿರುವುದಕ್ಕೆ ಧನ್ಯವಾದ ತಿಳಿಸಿದ ಅವರು, ನಾನು ಶಿಕ್ಷಣ ಪಡೆದು ಈ ಮಟ್ಟಕ್ಕೆ ಬರಲು ನನ್ನ ತಾಯಿ ಕಾರಣ ಎಂದು ಭಾವುಕರಾಗಿ ನುಡಿದರು.

ತರುವಾಯ ಮಾತನಾಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ದೂರದೃಷ್ಟಿ ನಾಯಕರಾಗಿರುವ ಪಿಜಿಆರ್ ಸಿಂಧ್ಯಾ ಅವರು ರಾಜಕೀಯ ಕ್ಷೇತ್ರದಲ್ಲಿ ತಮ್ಮದೆ ಆದ ಛಾಪು ಮೂಡಿಸಿದ್ದಾರೆ. ಸಾಧಿಸುವ ಛಲವಿದ್ದರೆ ಬಡ ಕುಟುಂಬದ ಯುವಕ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿ ವಿವಿಧ ಹುದ್ದೆ ಅಲಂಕರಿಸಬಹುದು ಎಂಬುದಕ್ಕೆ ಸಿಂಧ್ಯಾ ಅವರೇ ಸಾಕ್ಷಿ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಎಂ.ಶಿವಣ್ಣ, ಪಿಜಿಆರ್ ಸಿಂಧ್ಯಾ ಅವರು ಶುದ್ಧ ಹಸ್ತದ ರಾಜಕಾರಣಿಯಾಗಿ ಇತರರಿಗೆ ಮಾದರಿಯಾಗಿದ್ದಾರೆ ಎಂದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಸ್ಕೌಟ್ಸ್ ಅಂಡ್ ಗೈಡ್ಸ್ ಮೂಲಕ ಮಕ್ಕಳಿಗೆ ಪ್ರೇರಣೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಪಿಜಿಆರ್ ಸಿಂಧ್ಯಾ ಅವರ ಅನುಭವ ಸಮಾಜದ ಅಭಿವೃದ್ಧಿಗೆ ನೆರವಾಗಬೇಕು ಎಂದು ಹೇಳಿದರು. ಈ ವೇಳೆ ಪಿಜಿಆರ್ ಸಿಂಧ್ಯಾ ಅವರನ್ನು ಅಭಿನಂದಿಸಲಾಯಿತು. ವೈದ್ಯವಾರ್ತಾ ಪ್ರಕಾಶನದ ನಿರ್ದೇಶಕ ಶ್ರೀನಿವಾಸ ಬಹದ್ದೂರ್, ಕವಯಿತ್ರಿ ಜಾಹ್ನವಿ ಸೀತಾಲಕ್ಷ್ಮಿ, ಪತ್ರಕರ್ತ ರಮೇಶ್ ಉತ್ತಪ್ಪ ಅವರಿಗೆ ಧ್ವನಿ ಕೊಟ್ಟ ದಣಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ದೀಪು, ಮೈಸೂರು ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎಂ.ಎಸ್.ಸತೀಶ್, ಅನ್ವೇಷಣಾ ಸೇವಾ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಅಮರನಾಥರಾಜೇ ಅರಸ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಡಾ.ಎಂ.ಜಿ.ಆರ್. ಅರಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇಶ – ವಿದೇಶ

ಪಾಕಿಸ್ತಾನದ ಪೊಲೀಸ್ ಠಾಣೆ ಮೇಲೆ ದಾಳಿ: 7 ಅಧಿಕಾರಿಗಳು, 6 ಉಗ್ರರ ಸಾವು

ಪೇಶಾವರ: ವಾಯುವ್ಯ ಪಾಕಿಸ್ತಾನದ ಪೊಲೀಸ್ ಠಾಣೆ



ಮೇಲೆ ಬಂದೂಕುಧಾರಿಗಳು ದಾಳಿ ನಡೆಸಿದ ನಂತರ ಗಂಟೆಗಳ ಕಾಲ ನಡೆದ ಭೀಕರ ಗುಂಡಿನ ಚಕಮಕಿಯಲ್ಲಿ ಏಳು ಪೊಲೀಸ್ ಅಧಿಕಾರಿಗಳು ಮತ್ತು ಆರು ಉಗ್ರರು ಹತರಾಗಿದ್ದಾರೆ. ಶುಕ್ರವಾರ ರಾತ್ರಿ ಡೇರಾ ಇಸ್ಮಾಯಿಲ್ ಖಾನ್ ನಗರದ ಹೊರವಲಯದಲ್ಲಿರುವ ರಟ್ಟಾ ಕುಲಾಚಿಯಲ್ಲಿ ಪೊಲೀಸ್ ಠಾಣೆ ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಗೇಟ್‌ನಲ್ಲಿ ಆತ್ಮಹತ್ಯಾ ಬಾಂಬರ್ ಸ್ಫೋಟಕ ತುಂಬಿದ ಟ್ರಕ್ ಅನ್ನು ಸ್ಫೋಟಿಸಿದ ನಂತರ ದಾಳಿಕೋರರು ಭಾರೀ ಶಸ್ತ್ರಾಸ್ತ್ರಗಳನ್ನು ಬಳಸಿದ್ದು, ಕಾಂಪೌಂಡ್‌ಗೆ ಬಲವಂತವಾಗಿ ನುಗ್ಗಲು ಪ್ರಯತ್ನಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರು ಮತ್ತು ಉಗ್ರಗಾಮಿಗಳ ನಡುವೆ 6 ಗಂಟೆ ಕಾಲ ನಡೆದ ಗುಂಡಿನ ಚಕಮಕಿಯಲ್ಲಿ 7 ಪೊಲೀಸರು ಸಾವನ್ನಪ್ಪಿದ್ದಾರೆ ಮತ್ತು 13 ಮಂದಿ ಗಾಯಗೊಂಡಿದ್ದಾರೆ ಎಂದು ಅಹ್ಮದ್ ಹೇಳಿದ್ದಾರೆ.

ಜಾರ್ಖಂಡ್‌ನಲ್ಲಿ ಐಇಡಿ ಸ್ಫೋಟ: ಸಿಆರ್‌ಪಿಎಫ್ ಮುಖ್ಯಪೇದೆ ಹುತಾತ್ಮ

ರಾಂಚಿ: ಜಾರ್ಖಂಡ್‌ನ ಚೈಬಾಸಾದಲ್ಲಿ ಶುಕ್ರವಾರ



ಸಂಜೆ ಮಾವೋವಾದಿಗಳು ನಡೆಸಿದ ಐಇಡಿ ಸ್ಫೋಟದಲ್ಲಿ ಗಾಯಗೊಂಡಿದ್ದ ಸಿಆರ್‌ಪಿಎಫ್ ಹೆಡ್ ಕಾನ್‌ಸ್ಟೆಬಲ್ ಮಹೇಂದ್ರ ಲಸ್ಕರ್ ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದರು. ಗಮನಾರ್ಹವಾಗಿ, ಹೆಡ್ ಕಾನ್‌ಸ್ಟೆಬಲ್ ಸೇರಿದಂತೆ ಮೂವರು ಸಿಆರ್‌ಪಿಎಫ್ ಸಿಬ್ಬಂದಿ ಮಾವೋವಾದಿ ದಾಳಿಯಲ್ಲಿ ಗಾಯಗೊಂಡಿದ್ದಾರೆ. ಸಿಆರ್‌ಪಿಎಫ್ ಬೆಟಾಲಿಯನ್ ಇನ್ಸ್‌ಪೆಕ್ಟರ್ ಕೌಶಲ್ ಕುಮಾರ್ ಮಿಶ್ರಾ ಮತ್ತು ಸಬ್–ಇನ್ಸ್‌ಪೆಕ್ಟರ್ ರಾಮಚಂದ್ರ ಗೋಗಿ ಕೂಡ ಸ್ಫೋಟದಲ್ಲಿ ಗಂಭೀರವಾಗಿ ಗಾಯಗೊಂಡಿದ್ದು, ರೂರ್ಕೆಲಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆಯಲ್ಲಿ ಹುತಾತ್ಮರಾದ ಹೆಡ್ ಕಾನ್‌ಸ್ಟೆಬಲ್ ಮಹೇಂದ್ರ ಲಸ್ಕರ್ ಅಸ್ಸಾಂನ ನಾಗಾಂವ್ ನಿವಾಸಿಯಾಗಿದ್ದಾರೆ. ಮಾವೋವಾದಿಗಳು ನಡೆಸಿದ ಐಇಡಿ ಸ್ಫೋಟದಲ್ಲಿ ಗಾಯಗೊಂಡಿದ್ದ ಸಿಆರ್‌ಪಿಎಫ್ ಹೆಡ್ ಕಾನ್ಸ್‌ಟೇಬಲ್ ಮಹೇಂದ್ರ ಲಸ್ಕರ್ ಚಿಕಿತ್ಸೆಯ ಸಮಯದಲ್ಲಿ ಸಾವನ್ನಪ್ಪಿದ್ದಾರೆ ಎಂದು ಐಜಿ ಕಾರ್ಯಾಚರಣೆ ಮತ್ತು ಜಾರ್ಖಂಡ್ ಪೊಲೀಸ್ ವಕ್ತಾರ ಡಾ. ಮೈಕೆಲ್‌ರಾಜ್ ದೃಢಪಡಿಸಿದ್ದಾರೆ.

ಚೆನ್ನೈಗೆ ಆಗಮಿಸುತ್ತಿದ್ದ ಇಂಡಿಗೋ ವಿಮಾನದ ವಿಂಡ್‌ಶೀಡ್‌ನಲ್ಲಿ ಬಿರುಕು

ಚೆನ್ನೈ: ಮಧುರೈನಿಂದ 76 ಪ್ರಯಾಣಿಕರನ್ನು ಹೊತ್ತು



ಬಂದಿದ್ದ ಇಂಡಿಗೊ ಸಂಸ್ಥೆಯ ವಿಮಾನದ ವಿಂಡ್‌ಶೀಲ್ಡ್‌ನಲ್ಲಿ ಲ್ಯಾಂಡಿಂಗ್ ವೇಳೆ ಬಿರುಕು ಕಾಣಿಸಿಕೊಂಡಿದೆ. ಬಿರುಕು ಬಿಟ್ಟಿರುವುದನ್ನು ಪೈಲಟ್ ಪತ್ತೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಭಾಗದ ಗಾಜಿನಲ್ಲಿ ಬಿರುಕು ಕಾಣಿಸಿಕೊಂಡಿರುವುದನ್ನು ಪೈಲಟ್ ಗಮನಿಸಿ ವಿಮಾನ ನಿಲ್ದಾಣದಲ್ಲಿನ ವಾಯು ಸಂಚಾರ ನಿಯಂತ್ರಕರಿಗೆ ಮಾಹಿತಿ ನೀಡಿದರು. ಮಾಹಿತಿ ಪಡೆದ ನಂತರ, ವಿಮಾನ ನಿಲ್ದಾಣದಲ್ಲಿ ಬೇಕಾದ ವ್ಯವಸ್ಥೆ ಮಾಡಿ ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾಯಿತು ಎಂದು ಹೇಳಿದ್ದಾರೆ. ವಿಮಾನವನ್ನು ಪ್ರತ್ಯೇಕ ಸ್ಥಳಕ್ಕೆ ಕೊಂಡೊಯ್ದು ಪಾರ್ಕಿಂಗ್ ಮಾಡಿ, ನಂತರ ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಲಾಗಿದೆ. ಪ್ರಸ್ತುತ, ವಿಂಡ್‌ಶೀಲ್ಡ್ ಅನ್ನು ಬದಲಾಯಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಘಟನೆಯ ಕಾರಣ ಇನ್ನೂ ತಿಳಿದುಬಂದಿಲ್ಲ, ಘಟನೆಯಿಂದಾಗಿ, ಮಧುರೈಗೆ ವಿಮಾನದ ಮರು ಸಂಚಾರವನ್ನು ರದ್ದುಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪ್ಯಾಲೆಸ್ತೀನ್ ನಾಯಕ ಮರ್ವಾನ್ ಬರ್ಗೌತಿ ಬಿಡುಗಡೆಗೆ ಇಸ್ರೇಲ್ ನಕಾರ


ರಾಮಲ್ಲಾ(ಪ್ಯಾಲೆಸ್ತೀನ್): ಹೊಸ ಗಾಜಾ ಕದನ



ವಿರಾಮ ಒಪ್ಪಂದದಡಿಯಲ್ಲಿ ಹಮಾಸ್ ಬಂಧಿಸಿರುವ ಒತ್ತೆಯಾಳುಗಳಿಗೆ ಬದಲಾಗಿ ಇಸ್ರೇಲ್ ಬಿಡುಗಡೆ ಮಾಡಲು ಉದ್ದೇಶಿಸಿರುವ ಕೈದಿಗಳಲ್ಲಿ ಅತ್ಯಂತ ಜನಪ್ರಿಯ ಪ್ಯಾಲೆಸ್ತೀನ್ ನಾಯಕ ಮಾರ್ವಾನ್ ಬರ್ಗೌತಿ ಇಲ್ಲ ಎಂದು ತಿಳಿದುಬಂದಿದೆ. ಇಸ್ರೇಲ್ ಸರ್ಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ನಿನ್ನೆ ಬಿಡುಗಡೆ ಮಾಡಲಾದ ಸುಮಾರು 250 ಕೈದಿಗಳ ಪಟ್ಟಿ ಅಂತಿಮವಾಗಿದೆಯೇ ಎಂಬುದು ತಕ್ಷಣ ಸ್ಪಷ್ಟವಾಗಿಲ್ಲವಾದರೂ, ಹಮಾಸ್ ದೀರ್ಘಕಾಲದಿಂದ ಬಿಡುಗಡೆ ಮಾಡಲು ಬಯಸುತ್ತಿರುವ ಇತರ ಪ್ರಮುಖ ಕೈದಿಗಳನ್ನು ಬಿಡುಗಡೆ ಮಾಡುವುದನ್ನು ಇಸ್ರೇಲ್ ತಿರಸ್ಕರಿಸಿದೆ. ಬರ್ಗೌತಿ ಮತ್ತು ಇತರ ಪ್ರಮುಖ ಕೈದಿಗಳ ಬಿಡುಗಡೆಗೆ ಗುಂಪು ಒತ್ತಾಯಿಸುತ್ತಿದ್ದು, ಅದು ಮಧ್ಯವರ್ತಿಗಳೊಂದಿಗೆ ಚರ್ಚೆಯಲ್ಲಿದೆ ಎಂದು ಹಿರಿಯ ಹಮಾಸ್ ಅಧಿಕಾರಿ ಮೌಸಾ ಅಬು ಮಾರ್ಜೌಕ್ ಅಲ್ ಜಜೀರಾ ಟಿವಿ ನೆಟ್‌ವರ್ಕ್‌ಗೆ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಒಡಿಶಾ ಮೂಲದ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ಗ್ಯಾಂಗ್‌ರೇಪ್

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಪಶ್ಚಿಮ ಬರ್ಧಮಾನ್ ಜಿಲ್ಲೆಯಲ್ಲಿ ಒಡಿಶಾ ಮೂಲದ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿ ಮೇಲೆ ಅಪರಿಚಿತ ವ್ಯಕ್ತಿಗಳು ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಸ್ನೇಹಿತೆ ಜೊತೆ ಶುಕ್ರವಾರ ರಾತ್ರಿ 8.30ರ ಸುಮಾರಿನಲ್ಲಿ ದುರ್ಗಾಪುರದ ಖಾಸಗಿ ವೈದ್ಯಕೀಯ ಕಾಲೇಜು ಆವರಣದ ಹೊರಗೆ ದ್ವಿತೀಯ ವರ್ಷದ ವಿದ್ಯಾರ್ಥಿನಿ ತನ್ನ ಸ್ನೇಹಿತರೊಬ್ಬರೊಂದಿಗೆ ಊಟಕ್ಕೆ ಹೋಗಿದ್ದಾಗ ಮೂವರು ಪುರುಷರು ಅಲ್ಲಿಗೆ ಬಂದಿದ್ದು, ಸ್ನೇಹಿತೆ ಅವಳನ್ನು ಒಂಟಿಯಾಗಿ ಬಿಟ್ಟು ಹೋದಳು.



ಆ ವ್ಯಕ್ತಿಗಳು ಆಕೆಯ ಫೋನ್ ಕಸಿದುಕೊಂಡು ಕ್ಯಾಂಪಸ್‌ನ ಹೊರಗಿನ ಕಾಡಿಗೆ ಕರೆದೊಯ್ದು, ಅಲ್ಲಿ ಆಕೆಯ ಮೇಲೆ ಅತ್ಯಾಚಾರ ಎಸಗಿದರು. ಘಟನೆಯ ಬಗ್ಗೆ ಯಾರಿಗಾದರೂ ಹೇಳಿದರೆ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದರಂತೆ.

ಮೈಸೂರು ಮಿತ್ರ
ಭಾನುವಾರ 12 ಅಕ್ಟೋಬರ್ 2025

ಮಳೆ ಹಾನಿ ಪ್ರದೇಶಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ಕೆಎಚ್‌ಬಿ ಕಾಲೋನಿ ಪರಿಸ್ಥಿತಿ ಅವಲೋಕನ

ಮಂಡ್ಯ, ಅ.11–ಎರಡು ದಿನಗಳಿಂದ ಸುರಿ ಯುತ್ತಿರುವ ಭಾರಿ ಮಳೆಯಿಂದಾಗಿ ನಗರದ ಕೆಎಚ್‌ಬಿ ಕಾಲೋನಿಯಲ್ಲಿ ನೀರು ನಿಂತು ಉಂಟಾಗಿದ್ದ ಸಮಸ್ಯೆ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯ ಸ್ವಾಮಿ ಶಾಸಕ ರವಿಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಶಾಸಕ ರವಿಕುಮಾರ್‌ರೊಂದಿಗೆ ಶನಿವಾರ ಕೆ.ಎಚ್.ಬಿ ಕಾಲೋನಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಕೆ.ಎಚ್.ಬಿ ಕಾಲೋನಿಯಲ್ಲಿ ಇಪ್ಪತ್ತು ವರ್ಷಗಳಿಂದ ವಾಸಿಸುತ್ತಿರುವವರು ಹೇಳುವಂತೆ ಮೊದಲು ಇಲ್ಲಿ ಮಳೆ ಬಂದರೆ ಸ್ಥಳೀಯರೆಲ್ಲ ವಾರವೆಲ್ಲಾ ಕಾಲೋನಿ ಬಿಟ್ಟು ಬೇರೆಡೆ ಹೋಗಬೇಕಾಗುತ್ತಿತ್ತು, ಆದರೆ ರವಿಕುಮಾರ್ ಶಾಸಕರಾದ ನಂತರ 15 ರಿಂದ 20 ಕೋಟಿ ವೆಚ್ಚದಲ್ಲಿ ತಡೆ ಗೋಡೆ ನಿರ್ಮಿಸಿದ್ದರಿಂದ ಸಮಸ್ಯೆ ಇಲ್ಲದಂತೆ ಆಗಿದೆ ಎಂದು ಸಚಿವರು ತಿಳಿಸಿದರು.

ರವಿಕುಮಾರ್ ಅವರು ಶಾಸಕರಾಗಿ ಅಭಿವೃದ್ಧಿ ಹಾಗೂ ಜನರ ಸಂಕಷ್ಟವನ್ನು ಪರಿಹರಿಸಲು ತಮ್ಮ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ. ಮಳೆಯನ್ನು ತಡೆಯಲು ನಮ್ಮಿಂದ ಸಾಧ್ಯವಿಲ್ಲ, ಇವತ್ತಿನ ಕೆ.ಎಚ್.ಬಿ ಕಾಲೋನಿ ಪರಿಸ್ಥಿತಿಯನ್ನು ಅವಲೋಕಿಸಿ ಮುಂದೆ ಇಂತಹ ಘಟನೆ ನಡೆಯದಂತೆ ಕ್ರಮ ಕೈ ಗೊಳ್ಳಲಾಗುವುದು ಎಂದು ಸಚಿವ ಚಲುವರಾಯಸ್ವಾಮಿ ಭರವಸೆ ನೀಡಿದರು.

ನಗರಸಭೆ ಅಧ್ಯಕ್ಷ ಎಂ.ವಿ ಪ್ರಕಾಶ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಆರ್ ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜಂಟಿ ಸರ್ವೆ ಪ್ರಕ್ರಿಯೆ ಮುಗಿದ ಕೂಡಲೇ ಪರಿಹಾರ

ಶ್ರೀರಂಗಪಟ್ಟಣ, ಅ.11–ತಾಲೂಕಿನ ದರಸಗುಪ್ಪೆಯಲ್ಲಿ ಹರಿಯುವ ಸಿ.ಡಿ.ಎಸ್ ನಾಲೆ ಒಡೆದು ರೈತರ ಬೆಳೆ ಹಾನಿಯಾಗಿರುವ ಸ್ಥಳಕ್ಕೆ ಜಿಲ್ಲಾ ಉಸ್ತು ವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಅವರು ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಳೆ ನಿಂತ ನಂತರ ಜಂಟಿ ಸರ್ವೆ ಕಾರ್ಯಾಚರಣೆ ನಡೆಸಿ ಯಾರ ಬೆಳೆ ಎಷ್ಟು ಹಾನಿಯಾಗಿದೆ ಎಂದು ತಿಳಿದುಕೊಂಡು ಕೂಡಲೇ ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು, ಸರ್ವೆ ನಂತರವೇ ಹಾನಿಯಾಗಿರುವ ಬಗ್ಗೆ ವಿವರ ತಿಳಿಯುತ್ತದೆ ಎಂದು ಸುದ್ದಿಗಾರರಿಗೆ ಹೇಳಿದರು.

ನಾಲೆ ನೀರನ್ನು ಈಗಾಗಲೇ ನಿಲ್ಲಿಸಲಾಗಿದೆ, ಮಳೆ ನಿಂತ ನಂತರ ಒಡೆದ ನಾಲೆಯನ್ನು ಸರಿಪಡಿಸಲಾಗುವುದು, ಎನ್‌ಡಿಆರ್‌ಎಸ್‌ನಲ್ಲಿ ಹೆಕ್ಟೇರ್ ಮಳೆ ಆಶ್ರಿತ ಬೆಳೆಗಳಿಗೆ ಎಂಟೂವರೆ ಸಾವಿರ, ನೀರಾವರಿ ಆಶ್ರಿತ ಬೆಳೆಗಳಿಗೆ ಹದಿನೇಳು ಸಾವಿರ, ತೋಟಗಾರಿಕೆ ಬೆಳೆಗೆ ಇಪ್ಪತ್ತೆರಡು ಸಾವಿರದ ಐನೂರು ಪರಿಹಾರ ನೀಡಲಾಗುತ್ತಿದೆ ಎಂದರು.



ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಶನಿವಾರ ಸಿಡಿಎಸ್ ನಾಲೆ ಒಡೆದು ರೈತರ ಬೆಳೆ ಹಾನಿಯಾಗಿರುವುದನ್ನು ಪರಿಶೀಲಿಸಿದರು

ಜಂಟಿ ಸರ್ವೆ ನಡೆದ ಕೂಡಲೇ ಯಾರೂ ಪರಿಹಾರಕ್ಕಾಗಿ ಕಾಯದೆ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಿದ ಮರು ದಿನವೇ ಪರಿಹಾರವನ್ನು ನೀಡಲಾಗುವುದು, ಮಳೆ ನಿಂತ ವಾರದೊಳಗೆ ಈ ಪ್ರಕ್ರಿಯೆಯನ್ನು ಮಾಡಲಾಗುತ್ತದೆ, ರೈತರು ತಮ್ಮ ಬೆಳೆಗಳಿಗೆ ಇನ್ಶೂರೆನ್ಸ್ ಮಾಡಿಸಿದ್ದರೆ ಆ ಹಣದ ಜೊತೆ ಸರ್ಕಾರದ ಪರಿಹಾರವನ್ನು ನೀಡಲಾಗುವುದು ಎಂದರು.

ಈ ವೇಳೆ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ ಸಿಇಓ ಕೆ.ಆರ್ ನಂದಿನಿ, ತಹಸೀಲ್ದಾರ್ ಚೇತನ ಯಾದವ್, ನೀರಾವರಿ ನಿಗಮದ ಎಸ್‌ಇ ರಘುರಾಮ್, ಕೃಷಿ ಇಲಾಖೆಯ ಇಇ ಜಯಂತ್, ಇದ್ದರು.

ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಸಹಿ ಸಂಗ್ರಹ ಅಭಿಯಾನ

ನಾಗಮಂಗಲ: ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಆಯೋಜಿಸಿದ್ದ ವೋಟ್ ಚೋರಿ ಸಹಿ ಅಭಿಯಾನಕ್ಕೆ ಮುಖಂಡರೊಂದಿಗೆ ಚಾಲನೆ ನೀಡಲಾಯಿತು.

ಮತದಾರರ ಪಟ್ಟಿಯಿಂದ ಅಗೋಚರ ಪರಿಷ್ಕರಣೆಗಳ ಮೂಲಕ ಹಕ್ಕು ಕಸಿದುಕೊಳ್ಳುವ ಪ್ರಯತ್ನಗಳನ್ನು ನಿಲ್ಲಿಸುವ ಉದ್ದೇಶದಿಂದ, ವೋಟ್ ಚೂರಿ ಅಭಿಯಾನದ ಸಹಿ ಸಂಗ್ರಹ ಅಭಿಯಾನ ಆರಂಭಿಸಲಾಗಿದೆ ಎಂದು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ ರಾಜೇಶ್ ತಿಳಿಸಿದರು. ಕೇಂದ್ರ ಸರ್ಕಾರ ಸಾಂವಿಧಾನಿಕ ಮತದಾನದ ಹಕ್ಕನ್ನು ಕಸಿದುಕೊಂಡು ಅಧಿಕಾರಕ್ಕೇರಿರುವುದನ್ನು ರಾಹುಲ್ ಗಾಂಧಿ ರಾಷ್ಟ್ರದಾದ್ಯಂತ ವೋಟ್ ಚೋರಿ ಸಹಿ ಅಭಿಯಾನದ ಮೂಲಕ ಪ್ರಜಾಪ್ರಭುತ್ವ ಉಳಿವಿಗಾಗಿ ಸಂವಿಧಾನದ ಆಶಯಗಳ ಉಳಿವಿಗಾಗಿ ಹೋರಾಡುತ್ತಿದ್ದಾರೆ ಎಂದರು. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ವಸಂತ ಮಣಿ. ತಾಪಂ ಮಾಜಿ ಸದಸ್ಯ ಕೃಷ್ಣೇಗೌಡ, ಚಿಕ್ಕಮ್ಮ, ಪುರಸಭಾ ಸದಸ್ಯ ರಮೇಶ್, ತಿಮ್ಮಪ್ಪ, ನರಸಿಂಹಮೂರ್ತಿ, ಶರತ್ ರಾಮಣ್ಣ, ಹನುಮಂತ ಇದ್ದರು.

ಟಿಎಪಿಸಿಎಂಎಸ್ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ತಾಲೂಕು ಟಿಎಪಿಸಿಎಂಎಸ್‌ನ ನೂತನ ಆಡಳಿತ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ, ಅ.11ತಾಲೂಕಿನ ಟಿಎಪಿಸಿಎಂಎಸ್‌ನ ಆಡಳಿತ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಚಿಕ್ಕಾಡೆ ಗಿರೀಶ್ ಅಧ್ಯಕ್ಷರಾಗಿ ಹಾಗೂ ಕನಗನಮರಡಿ ಪ್ರೇಮಪುಟ್ಟೇಗೌಡ ಉಪಾಧ್ಯಕ್ಷರಾಗಿ ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು.

ಸಂಘದ ನೂತನ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶುಕ್ರ ವಾರ ನಡೆದ ಚುನಾವಣೆಯ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ನಿರ್ದೇಶಕ ಚಿಕ್ಕಾಡೆ ಗಿರೀಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನ ಪ್ರೇಮ ಪುಟ್ಟೇಗೌಡ ನಾಮಪತ್ರ ಸಲ್ಲಿಸಿದರು. ಇವರಿಬ್ಬರನ್ನು ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಇವರನ್ನೇ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಬಸವರೆಡ್ಡಪ್ಪ ರೋಣದ ಪ್ರಕಟಿಸಿದರು. ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆಯೇ ಹೊರಗಡೆ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ನೂತನ ಅಧ್ಯಕ್ಷ ಉಪಾಧ್ಯಕ್ಷೆಯನ್ನು ಅಭಿನಂದಿಸಿ ರೈತರು ಹಾಗೂ ಷೇರುದಾರರ ಆಶೀರ್ವಾದದಿಂದ ಜೆಡಿಎಸ್ ಬೆಂಬಲಿತ ನಿರ್ದೇಶಕರು ಅಧಿಕ ಸಂಖ್ಯೆಯಲ್ಲಿ ಆಯ್ಕೆಯಾಗುವ ಮೂಲಕ ಅಧಿಕಾರ ನಡೆಸಲು ರೈತರು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರು ಜೊತೆಗೂಡಿ ಯಾವುದೇ ಕಳಂಕ ಬಾರದಂತೆ ರೈತರ ಬೆನ್ನೆಲುಬಾದ ಸಹಕಾರ ಸಂಘವನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷ ಚಿಕ್ಕಾಡೆ ಗಿರೀಶ್ ಮಾತನಾಡಿ, ಸಂಘದ ಅಭಿವೃದ್ಧಿಗೆ ಪೂರಕವಾಗಿ ಸ್ಪಂದಿಸಿ ಕೆಲಸ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ನಿರ್ದೇಶಕರಾದ ಸಿ.ಎಸ್.ಗೋಪಾಲಗೌಡ, ವಡ್ಡರಹಳ್ಳಿ ನಿಂಗೇಗೌಡ, ಎ.ಕೃಷ್ಣ, ಪಿ.ಎಲ್.ಆದರ್ಶ, ಸಿ.ಎಂ.ಕಿರಣ್ ಕುಮಾರ್, ನರಸಿಂಹನಾಯ್ಕ, ಎಂ.ಸ್ವಾಮಿ, ಜೆಡಿಎಸ್ ಅಧ್ಯಕ್ಷ ಎಸ್.ಎ. ಮಲ್ಲೇಶ್, ಮುಖಂಡರಾದ ಚಿಕ್ಕಾಡೆ ಪ್ರಸನ್ನ ಕುಮಾರ್, ಗವಿಗೌಡ, ಕೋಡಾಲ ರಾಧಾ ಕೃಷ್ಣ, ಪುರಸಭೆ ಸದಸ್ಯ ಗಿರೀಶ್, ಕೆ.ಪುಟ್ಟೇಗೌಡ, ಚಿಕ್ಕಾಡೆ ವಿಜಿಕುಮಾರ್ ಹಾಜರಿದ್ದರು.

ವೋಟ್ ಚೋರಿ ವಿರುದ್ಧ ಜಿಲ್ಲಾ ಕಾಂಗ್ರೆಸ್ ಸಹಿ ಸಂಗ್ರಹ ಅಭಿಯಾನ

ಮಂಡ್ಯ, ಅ.11–ಪ್ರಜಾಪ್ರಭುತ್ವ ಹಾಗೂ ಚುನಾವಣಾ ವ್ಯವಸ್ಥೆಯನ್ನು ಬುಡಮೇಲು ಮಾಡಲು ಬಿಜೆಪಿ ಯತ್ನಿಸುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಆರೋಪಿಸಿದರು.

ನಗರದ ಹೊಳಲು ಸರ್ಕಲ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ 'ವೋಟ್ ಚೋರಿ' ವಿರುದ್ಧ ಹಮ್ಮಿಕೊಂಡಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಐಸಿಸಿ ಹಾಗೂ ಕೆಪಿಸಿಸಿ ಸೂಚನೆ ಮೇರೆಗೆ ಜಿಲ್ಲೆಯ ಕೆ.ಆರ್.ಪೇಟೆ ನಾಗಮಂಗಲ, ಶ್ರೀರಂಗಪಟ್ಟಣ, ಮಳವಳ್ಳಿ, ಮದ್ದೂರು ಪಾಂಡವಪುರ, ಮಂಡ್ಯ ಸೇರಿದಂತೆ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಕೇಂದ್ರ ಸರ್ಕಾರದ ಮತಗಳ್ಳತನದ ವಿರುದ್ಧ ಸಹಿ ಅಭಿಯಾನ ಹಮ್ಮಿಕೊಂಡಿದ್ದೇವೆ ಎಂದರು.

ರಾಜ್ಯ ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಆತ್ಮಾನಂದ ಮಾತನಾಡಿದರು. ಸಹಿ ಸಂಗ್ರಹ ಅಭಿಯಾನದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶುಭ ದಾಯಿನಿ, ವಿಜಯಲಕ್ಷ್ಮಿ, ರಘು ನಂದನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಅಪ್ಪಾಜಿ, ಸಾತನೂರು ಕೃಷ್ಣ ಪಕ್ಷದ ವಕ್ತಾರ ಸಿ.ಎಂ.ದ್ಯಾವಪ್ಪ, ಅರುಣ್ ಕುಮಾರ್, ಮುಖಂಡ ಚಂದಗಾಲು ವಿಜಯಕುಮಾರ್, ಅಭಿಲಾಷ್, ಚಿಕ್ಕಬಳ್ಳಿ ಕೃಷ್ಣ, ಹಳುವಾಡಿ ವೆಂಕಟೇಶ್, ಸೇರಿದಂತೆ ಇತರರು ಭಾಗವಹಿಸಿದ್ದರು

ಹೊಳಲು ಗ್ರಾಮದಲ್ಲಿ ಭಾರೀ ಮಳೆಗೆ ಮನೆಗಳ ಕುಸಿತ

ಮಂಡ್ಯ, ಅ.11–ತಾಲೂಕಿನ ಹೊಳಲು ಗ್ರಾಮದಲ್ಲಿ ಎರಡು ದಿನದಿಂದ ಬಿದ್ದ ಭಾರಿ ಮಳೆಗೆ ಕುಸಿದು ಬಿದ್ದ ಮನೆಗಳು, ಹಾಗೂ ಮಳೆಯಿಂದ ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿವೆ.

ಗ್ರಾಮದ ಎಚ್.ಡಿ.ರಾಜೇಶ್‌ರ ವಾಸದ ಮನೆಯ ಗೋಡೆ ಕುಸಿದು ಮನೆಯಲ್ಲಿರುವ ವಸ್ತುಗಳೆಲ್ಲ ಹಾನಿಯಾಗಿದ್ದು, ಸುಮಾರು ಒಂದು ಲಕ್ಷ ರೂ.ಗಳಷ್ಟು ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಗ್ರಾಮದ ಎಚ್.ಸಿ.ತಿಮ್ಮೇಗೌಡ ಬಿನ್ ಚಿನ್ನಗಿರಿಗೌಡರ ಹಳೆಮನೆ ಸಂಪೂರ್ಣ ಕುಸಿದು ಬಿದ್ದು ಹಾನಿಯಾಗಿದೆ ಎಂದು ತಿಳಿಸಿದ್ದಾರೆ.



ಮಳೆಗೆ ಮನೆಯ ಗೋಡೆ ಮೇಲ್ಛಾವಣಿ ಕುಸಿದಿರುವುದು.

ಮಂಡ್ಯ ತಹಸಿಲ್ದಾರ್ ಎಚ್.ವಿಶ್ವನಾಥ್, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪರಿಹಾರ ನೀಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ಕಳಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಕರಾದ ಮನೋಹರ್, ಗ್ರಾಮ ಆಡಳಿತಾಧಿಕಾರಿ ಸಿ.ಗುಣಶೇಖರ್, ಸಹಾಯಕ ರಾಜೇಶ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಬಿ. ದೊಡ್ಡೇಗೌಡ, ಹಾಗೂ ಮಾಜಿ ಅಧ್ಯಕ್ಷ ಎಚ್. ಬಿ.ನಾಗರಾಜ್, ಮುದ್ರಣಾಲಯ ನಿರ್ದೇಶಕ ಎಚ್.ಎಸ್ ನಂದೀಶ್, ಮಾಜಿ ಗ್ರಾಪಂ ಅಧ್ಯಕ್ಷ ಎಚ್.ಡಿ.ರವಿ ಹಾಜರಿದ್ದರು.

ಕಿಕ್ಕೇರಿ: ಮನೆಯ ತೊಲೆಗಳ ಕುಸಿತ

ಕಿಕ್ಕೇರಿ, ಅ.11–ಸತತವಾಗಿ ಎರಡು ದಿನಗಳಿಂದ ಬಿಡದೆ ಸುರಿದ ಮಳೆಯಿಂದ ಹೋಬಳಿಯ ಸಾಸಲು ಗ್ರಾಮದಲ್ಲಿ ಮನೆಯೊಂದು ಕುಸಿದಿದೆ.

ಗ್ರಾಮದ ದುಬಾರಪ್ಪನ ಪುತ್ರ ಬಡತನದಲ್ಲಿರುವ ರೈತ ಶಿವಕುಮಾರ್ ಹಳೆಯ ಮಣ್ಣಿನ ಗೋಡೆಯಲ್ಲಿ ವಾಸವಾಗಿದ್ದರು. ಮಳೆಯ ಆರ್ದತೆಗೆ ಮಣ್ಣಿನ ಗೋಡೆ ಶೀತವಾಗಿ ಕುಸಿದಿದೆ. ಪರಿಣಾಮ ಮನೆಯ ಮೇಲ್ಛಾವಣಿ, ತೊಲೆ, ಹೆಂಚುಗಳು ಹಾಳಾಗಿವೆ. ಮನೆಯಲ್ಲಿದ್ದ ಬಟ್ಟೆ, ಧವಸ ಧಾನ್ಯ, ಪೀಠೋಪಕರಣ ಗಳೆಲ್ಲಾ ನಾಶವಾಗಿವೆ. ಗ್ರಾಮಲೆಕ್ಕಿಗ ಪ್ರಸನ್ನ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಪರಿಹಾರಕ್ಕೆ ಮೇಲಾಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ತಿಳಿಸಿದರು.



ಮಳೆಗೆ ಶುಕ್ರವಾರ ಶಿವಕುಮಾರ್ ಅವರ ಮನೆಯ ತೊಲೆಗಳು ಕುಸಿದಿದೆ.

ಒಂದನೇ ಪುಟದಿಂದ

ಇಬ್ಬರು ಸರ್ಕಾರಿ ಅಧಿಕಾರಿಗಳ ಅಮಾನತು

ಮಾಡುತ್ತಿರುವ ಸರ್ಕಾರಿ ಅಧಿಕಾರಿಗಳಿಗೆ ಶ್ರೇಯಸ್ಸು ಸಲ್ಲಬೇಕು ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಹಾಸಬಾಂಬ ದೇವಿಯ ಉತ್ಸವವನ್ನು ಈ ಬಾರಿ ಅಚ್ಚುಕಟ್ಟಾಗಿ ನಿರ್ವಹಿಸಲಾಗುತ್ತಿದೆ. ಖುದ್ದಾಗಿ ಸಚಿವ ಕೃಷ್ಣ ಬೈರೇಗೌಡ ಅವರೇ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುತ್ತಿದ್ದಾರೆ. ಅಲ್ಲದೆ, ಜನರ ಬಳಿಗೆ ತೆರಳಿ ಅಭಿಪ್ರಾಯ, ಸಲಹೆಗಳನ್ನು ಸಂಗ್ರಹ ಮಾಡುತ್ತಿದ್ದಾರೆ. 2ನೇ ದಿನವೂ ದೇವಾಲಯಕ್ಕೆ ಆಗಮಿಸಿ ಜನರ ಬಳಿ ದೇವಿಯ ಸುಗಮ ದರ್ಶನದ ಬಗ್ಗೆ ಸಚಿವ ಕೃಷ್ಣ ಬೈರೇಗೌಡ ವಿಚಾರಿಸಿದ್ದಾರೆ.

ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ: ಹಾಸನಾಂಬ ಉತ್ಸವದಲ್ಲಿ ಪೊಲೀಸರು ಸೂಕ್ತ ಭದ್ರತೆ ನೀಡುತ್ತಿದ್ದಾರೆ. ಭಕ್ತಾದಿಗಳಿಗೆ ಯಾವುದೇ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳುತ್ತಿದ್ದಾರೆ.

ಇದೇ ವೇಳೆ ಸಚಿವ ಕೃಷ್ಣ ಬೈರೇಗೌಡ ಪೊಲೀಸರ ಕೆಲಸ ಕಾರ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು. ಹಾಸನಾಂಬೆ ದರ್ಶನಕ್ಕೆ ಈ ಬಾರಿ ಸಾಕಷ್ಟು ಉತ್ತಮ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ. ಭಕ್ತರಿಗೆ ಅನಾನುಕೂಲ ಆಗದಂತೆ ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಹಾಸನಾಂಬೆ ದರ್ಶನದಲ್ಲಿ ದಾಖಲೆಯ ಆದಾಯ: ಒಂದೇ ದಿನಕ್ಕೆ 1 ಕೋಟಿಗೂ ಹೆಚ್ಚು ಹಣ ಸಂಗ್ರಹ

ಹಾಸನ, ಅ. 11– ವರ್ಷಕ್ಕೊಮ್ಮೆ ಮಾತ್ರ ಬಾಗಿಲು ತೆರೆದು ಭಕ್ತರಿಗೆ ದರ್ಶನ ನೀಡುವ ಹಾಸನಾಂಬೆ ಅ.9ರಿಂದ ತನ್ನ ದರ್ಶನ ಆರಂಭಿಸಿದ್ದಾಳೆ.



ಮೊದಲ ದಿನವೇ ಭಕ್ತ ಸಾಗರವೇ ಹ'ರಿ ದ'ು ಬಂದಿತ್ತು. ಲಕ್ಷಕ್ಕೂ ಹೆಚ್ಚು ಭಕ್ತರು ಹಾಸನಾಂಬೆ ದರ್ಶನ ಪಡೆದಿದ್ದಾರೆ.

ಇನ್ನು ಇಂದು ಒಂದೇ ದಿನ ಒಂದು ಕೋಟಿ ರೂ.ಗೂ ಹೆಚ್ಚು ಆದಾಯ ಹಾಸನಾಂಬೆಯ ಬೊಕ್ಕಸಕ್ಕೆ ಹರಿದುಬಂದಿದೆ. ಒಂದು ಸಾವಿರ ಮೌಲ್ಯದ ಟಿಕೆಟ್ ಮಾರಾಟದಿಂದ 65 ಲಕ್ಷ ರೂ. ಸಂಗ್ರಹವಾಗಿದ್ದು, 300 ರೂ. ಮೌಲ್ಯದ ಟಿಕೆಟ್ ಮಾರಾಟದಿಂದ 35 ಲಕ್ಷ ರೂ. ಆದಾಯ ಸಂಗ್ರಹವಾಗಿದೆ. ಇದುವರೆಗೆ 91 ಸಾವಿರ ಭಕ್ತರು ದರ್ಶನ ಪಡೆದಿದ್ದಾರೆ. ಐದಾರು ವರ್ಷಗಳಿಗೆ ಹೋಲಿಸಿದೆ ಇದು ದಾಖಲೆ. ಯಾವುದೇ ಗೊಂದಲವಿಲ್ಲದೆ ದರ್ಶನ ನಡೀತಿದೆ. ಪ್ರತಿದಿನ ಕನಿಷ್ಠ 2 ಲಕ್ಷ ಭಕ್ತರು ಬರುವ ಸಾಧ್ಯತೆಯಿದೆ. ಎಲ್ಲರೂ ಅ.18ರೊಳಗೆ ಬಂದು ದರ್ಶನ ಮಾಡಿಕೊಳ್ಳಿ. ಅ.15ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಂದು ದರ್ಶನ ಮಾಡುತ್ತಾರೆ ಎಂದು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹೇಳಿದ್ದಾರೆ.

ಮಹಿಳೆ ಅತ್ಯಾಚಾರಕ್ಕೂ ಯತ್ನಿಸಿದ್ದ ದುಷ್ಕರ್ಮಿ

ಮಲಗಿದ್ದವರು ಎಚ್ಚರಗೊಳ್ಳುತ್ತಿದ್ದಂತೆ ಪೀಪಲ್ಸ್‌ಪಾರ್ಕ್ ಎದುರಿನ ಕಾಂಪೌಂಡ್ ಹಾರಿ ಪರಾರಿಯಾಗಿದ್ದಾಗಿ ಪೊಲೀಸರಿಗೆ ಕಾರ್ತಿಕ್ ಹೇಳಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ. ಸಿಸಿ ಕ್ಯಾಮರಾದಲ್ಲಿ ಈ ದೃಶ್ಯ ಸೆರೆಯಾಗಿದೆಯಾದರೂ ಮುಂಜಾನೆ ಮಬ್ಬು ಇದ್ದ ಕಾರಣ ದೃಶ್ಯಗಳು ಸ್ಪಷ್ಟವಾಗಿ ಕಾಣಿಸುತ್ತಿಲ್ಲ. ಆದರೆ ಇದೇ ಆರೋಪಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ವೆಸಗಿ ಹಲವು ಬಾರಿ ಇರಿದು ಕೊಲೆ ಮಾಡಿದ ಬಳಿಕ ಮಹಿಳೆ ಮೇಲೆ ಅತ್ಯಾಚಾರಕ್ಕೆ ಯತ್ನ ನಡೆಸಿ, ಪರಾರಿಯಾಗಿದ್ದಾನೆ ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ.

ಟ್ರಾಮಾ ಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ: ದೇವರಾಜ ಉಪ–ವಿಭಾಗದ ಎಸಿಪಿ ರಾಜೇಂದ್ರ ಅವರು ಪ್ರಕರಣದ ತನಿಖೆ ಕೈಗೊಂಡಿದ್ದು, ಪೊಲೀಸರ ಮೇಲೆರಗಿದ್ದ ಈತನ ಕಾಲಿಗೆ ಗುಂಡು ಹೊಡೆದಿದ್ದರಿಂದ ಮೂಳೆ ಮುರಿದಿದೆ. ಹಾಗಾಗಿ ಈತನ ಟ್ರಾಮಾ ಕೇರ್ ಸೆಂಟರ್‌ನಲ್ಲಿ ದಾಖಲಿಸಿದ್ದು, ಆತನಿಗೆ ಶುಕ್ರವಾರ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಿಸಿದ್ದಾರೆ. ಕೃತ್ಯವೆಸಗಿದ್ದ ದಿನ ಕಾರ್ತಿಕ್ ಕಂಠಪೂರ್ತಿ ಕುಡಿದಿದ್ದನೆಂಬುದು ವೈದ್ಯಕೀಯ ತಪಾಸಣೆಯಿಂದ ದೃಢಪಟ್ಟಿದೆ.

ಪೊಲೀಸ್ ಕಸ್ಟಡಿಗೆ: ಆಸ್ಪತ್ರೆಯಲ್ಲಿ ದಾಖಲಾಗಿರುವುದರಿಂದ ಈ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಿ ಒಂದು ವಾರದವರೆಗೆ ಆರೋಪಿಯನ್ನು ಪೊಲೀಸ್ ವಶಕ್ಕೆ ಪಡೆಯಲಾಗಿದ್ದು, ಆಸ್ಪತ್ರೆಯಿಂದ ಬಿಡುಗಡೆಯಾದ ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗುವುದು. ಈ ಮಧ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗುವುದು ಎಂದು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರ್‌ರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸುಮೊಟೋ ಕೇಸ್: ದೊಡ್ಡಕೆರೆ ಮೈದಾನದ ಬಳಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಮತ್ತು ಹತ್ಯೆ ಪ್ರಕ ರಣವನ್ನು ಗಂಭೀರವಾಗಿ ಪರಿಗಣಿಸಿ ರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದು, ಈ ಬಗ್ಗೆ ವರದಿ ನೀಡುವಂತೆ ಮೈಸೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕಚೇರಿಗಳಿಗೆ ಪತ್ರ ಬರೆಯಲಾಗಿದೆ.

ಈ ಕುರಿತು ನಾವು ಪೊಲೀಸ್, ಕಾರ್ಮಿಕ ಇಲಾಖೆ ಮತ್ತು ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅಪ್ರಾಪ್ತ ಬಾಲಕಿ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಸಂಪೂರ್ಣ ಮಾಹಿತಿ ಕಲೆ ಹಾಕಿ ಜಿಲ್ಲಾಧಿಕಾರಿಗಳ ಮೂಲಕ ಆಯೋಗಕ್ಕೆ ವರದಿ ಕಳುಹಿಸಬೇಕಾಗಿದೆ. ಹಾಗೂ ಆಯೋಗ ನಿಗಧಿ ಮಾಡುವ ದಿನದಂದು ವಿಚಾರಣೆಗೂ ಹಾಜರಾಗುತ್ತೇವೆ ಎಂದು ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯದುವೀರ್ ಸೂಚನೆ: ಮತ್ತೊಂದೆಡೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶಾಸಕ ಟಿ.ಎಸ್. ಶ್ರೀವತ್ಸ ಹಾಗೂ ಮಾಜಿ ಶಾಸಕ ಎಲ್. ನಾಗೇಂದ್ರ ಅವರೊಂದಿಗೆ ಇಂದು ನಜರ್‌ಬಾದ್‌ನ ನಗರ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿ, ಆಯುಕ್ತೆ ಸೀಮಾ ಲಾಟ್ಕರ್ ಅವರಿಂದ ಪ್ರಕರಣದ ವಿವರ ಪಡೆದರು. ಅಪರಾಧ ಕೃತ್ಯಗಳು ನಡೆಯದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಹಾಗೂ ಮೈಸೂರು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕೆಂದು ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಅವರಿಗೆ ಸಂಸದರು ತಾಕೀತು ಮಾಡಿದ್ದಾರೆ.

ಸಿದ್ದರಾಮಯ್ಯ ತಯಾರಿ

ಧವನ್ ರಾಕೇಶ್ ಅವರನ್ನು ಸಕ್ರಿಯ ರಾಜಕಾರಣಕ್ಕೆ ತರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ. ಕಳೆದ ಒಂದು ವರ್ಷದಿಂದ ಪ್ರಮುಖ ಸಭೆ, ಸಮಾರಂಭ ಹಾಗೂ ದಿಗ್ಗಜ ನಾಯಕರ ಭೇಟಿ ವೇಳೆ ತಮ್ಮ ಪ್ರೀತಿಯ ಮೊಮ್ಮಗನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಗಣ್ಯರಿಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ವೇಳೆ ತಾವು ಕಣಕ್ಕಿಳಿದಿದ್ದ ವರುಣ ವಿಧಾನಸಭಾ ಕ್ಷೇತ್ರದ ಪ್ರಚಾರ ಕಾರ್ಯದಲ್ಲಿ ಧವನ್ ರಾಕೇಶ್ ತಮ್ಮನ್ನು ತೊಡಗಿಸಿಕೊಂಡಿದ್ದರು.

ಇತ್ತೀಚೆಗೆ ವಿಧಾನಸೌಧದ ಮುಂದೆ ನಡೆದ ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮಕ್ಕೂ ಮುಖ್ಯಮಂತ್ರಿ ಅವರು ತಮ್ಮ ಮೊಮ್ಮಗನನ್ನು ವೇದಿಕೆಗೆ ಕರೆ ತಂದಿದ್ದರು. ಅಲ್ಲದೇ, ಬಿಹಾರದ ಪಾಟ್ನಾದಲ್ಲಿ ಜರುಗಿದ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳಿದ್ದ ಸಿದ್ದರಾಮಯ್ಯ, ತಮ್ಮ ಮೊಮ್ಮಗನನ್ನೂ ಕರೆದುಕೊಂಡು ಹೋಗಿ ರಾಷ್ಟ್ರಮಟ್ಟದ ನಾಯಕರ ಪರಿಚಯ ಮಾಡಿಸಿದ್ದರು.

ಅತಿಥಿ ಶಿಕ್ಷಕರ ನೇಮಕ

ಅತಿಥಿ ಶಿಕ್ಷಕರನ್ನು ನೇಮಕ ಮಾಡಬೇಕಾಗುತ್ತದೆ. ಅವರಿಗೆ ಗೌರವಧನ ಸರ್ಕಾರದಿಂದಲೇ ಪಾವತಿಸಲಾಗುವುದು. ಕನ್ನಡ ಮಾಧ್ಯಮದ ಶಾಲೆಗಳ ಉಳಿಸುವ ನಿಟ್ಟಿನಲ್ಲಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದು.

1995ರ ನಂತರದ 10 ವರ್ಷಗಳ ಅವಧಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ನಿರ್ಧರಿಸಲಾಗಿದೆ. ಆ ಪ್ರಸ್ತಾವಕ್ಕೆ ಸಿಎಂ ಸಿದ್ದರಾಮಯ್ಯ ಅನುಮತಿ ಕೊಡುತ್ತಿದ್ದಂತೆಯೇ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಪ್ರತಿಕ್ರಿಯಿಸಿದರು. ಅಂಗವಿಕಲ ಮಕ್ಕಳಿಗೆ ಚಿಕಿತ್ಸೆ ಹಾಗೂ ಶಿಕ್ಷಣ ಎರಡಕ್ಕೂ ಅವಕಾಶವಾಗಲು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 2 ವಸತಿಯುತ ಶಾಲೆ ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ಮೈಸೂರಲ್ಲಿ ಅಪ್ರಾಪ್ತ ಬಾಲಕಿ ಅತ್ಯಾಚಾರ–ಹತ್ಯೆ

ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ



ಹತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಹತ್ಯೆ ಮಾಡಿರುವ ಆರೋಪಿಗೆ ಕಠಿಣ ಶಿಕ್ಷೆ ನೀಡುವಂತೆ ಆಗ್ರಹಿಸಿ ಬಿಜೆಪಿ ನಗರ ಮಹಿಳಾ ಮೋರ್ಚಾ ಕಾರ್ಯಕರ್ತರು ಮೈಸೂರಿನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಅ.11 (ಎಸ್‌ಪಿಎನ್)– ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ನಗರದ ಹೃದಯಭಾಗದಲ್ಲೇ ಹತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರ ವೆಸಗಿ, ಹತ್ಯೆಮಾಡಿರುವ ಆರೋಪಿಗೆ ಕಠಿಣ ಶಿಕ್ಷೆ ನೀಡುವಂತೆ ಆಗ್ರಹಿಸಿ ಬಿಜೆಪಿ ನಗರ ಮಹಿಳಾ ಮೋರ್ಚಾ ಕಾರ್ಯಕರ್ತರು ಮೈಸೂರು ಜಿಲ್ಲಾ ನ್ಯಾಯಾಲಯದ ಎದುರಿನ ಮಹಾತ್ಮ ಗಾಂಧೀಜಿ ಪುತ್ಥಳಿ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ಬಿಜೆಪಿ ಮಹಿಳಾ ಮೋರ್ಚಾ ಮೈಸೂರು ನಗರ ಘಟಕದ ಅಧ್ಯಕ್ಷೆ ರೇಣುಕಾರಾಜ್ ವಹಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ, ಫಲಕ ಪ್ರದರ್ಶಿಸಿ ತಮ್ಮ ಆಕ್ರೋಶ ಹೊರಹಾಕಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೋಜು–ಮಸ್ತಿಯ ದಸರಾ ಆಚರಣೆ ಗುಂಗಿನಿಂದ ಹೊರಬಾರದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಹತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಹತ್ಯೆ ನಡೆದಿದ್ದರೂ ಘಟನೆ ಕುರಿತು ಆಕೆಯ ಕುಟುಂಬಕ್ಕೆ ಸಾಂತ್ವನದ ಮಾತುಗಳನ್ನಾಡಿಲ್ಲ. ಬಾಲಕಿ ಕಳೆದುಕೊಂಡ ಕುಟುಂಬವನ್ನು ಭೇಟಿ ಮಾಡಿ ಧೈರ್ಯ ತುಂಬುವ ಕೆಲಸ ಮಾಡಿಲ್ಲ. ತ್ವರಿತಗತಿಯಲ್ಲಿ ತನಿಖೆ ಮುಗಿಸಿ ಆರೋಪಿಗೆ ಶಿಕ್ಷೆ ಕೊಡಿಸುವಂತೆ ಪೊಲೀಸರಿಗೆ ಆದೇಶಿಸಿಲ್ಲ. ಈ ನಡೆಯನ್ನು ಗಮನಿಸಿದರೆ, ಕಾಂಗ್ರೆಸ್ ಸರ್ಕಾರ ಮಹಿಳಾ ವಿರೋಧಿ ಎಂಬುದನ್ನು ಸಾಕ್ಷೀಕರಿಸುತ್ತಿದೆ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಈ ಘಟನೆಗೂ ನನಗೂ ಯಾವುದೇ ಸಂಬಂಧವಿಲ್ಲದಂತೆ ವರ್ತಿಸುತ್ತಿರುವ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಈ ಕೂಡಲೇ ರಾಜೀನಾಮೆ ನೀಡಬೇಕು. ಅಲ್ಲದೆ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ರಾಜರ ಕಾಲದ ಸಾಂಪ್ರದಾಯಿಕ ದಸರಾವನ್ನು ಮೋಜು–ಮಸ್ತಿನ ದಸರಾವನ್ನಾಗಿ ಪರಿವರ್ತಿಸಿ, ವಿಶ್ವಮಟ್ಟದಲ್ಲಿ ದಸರಾ ಆಚರಣೆಗೆ ಅಪಕೀರ್ತಿ ತಂದಿದ್ದಾರೆ. ನಗರ ಹೃದಯ ಭಾಗದಲ್ಲೇ ಹತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿದ್ದರೂ ಉಸ್ತುವಾರಿ ಸಚಿವರು ಘಟನೆ ಕುರಿತು ಗಂಭೀರತೆ ಪ್ರದರ್ಶಿಸಿ, ಹೆಣ್ಣು ಮಕ್ಕಳಿಗೆ ಧೈರ್ಯ ತುಂಬುವ ಕೆಲಸ ಮಾಡಿಲ್ಲ ಎಂದು ಸಚಿವರ ನಡೆ ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಉಪ ಮೇಯರ್ ಜಿ.ರೂಪ, ರಾಜ್ಯ ಅಲ್ಪಸಂಖ್ಯಾತರ ವಿಭಾಗದ ಮಂಡಲ ಕಾರ್ಯದರ್ಶಿ ಸವಿತಾಗೌಡ, ಮಾಲಿನಿ, ಚಂದ್ರ ಕಲಾ, ಲಕ್ಷ್ಮಿ, ಕಿರಣ್, ಸೌಮ್ಯಾ, ಸರಸ್ವತಿ, ಪುಷ್ಪಾ, ಶಾಲಿನಿ, ಆಶಾ, ಭಾಗ್ಯ, ಶಿವಮ್ಮ, ಮಂಜುಳಾ, ರೇಖಾ, ಪವಿತ್ರ ಸೇರಿದಂತೆ ಇತರೆ ಮಹಿಳಾ ಮುಖಂಡರಿದ್ದರು.

ಹೆಚ್.ಡಿ.ದೇವೇಗೌಡರ ಆರೋಗ್ಯ ವಿಚಾರಿಸಿದ ಬಿಎಸ್‌ವೈ, ವಿಜಯೇಂದ್ರ



ಬೆಂಗಳೂರು, ಅ.11–ನಗರದ ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಪುತ್ರ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಆರೋಗ್ಯ ವಿಚಾರಿಸಿದರು. ಜೊತೆಗೆ ದೇಶದ ಮತ್ತು ರೈತರ ಹಿತಕ್ಕಾಗಿ ಸದಾ ಶ್ರಮಿಸಿದ ಈ ಮಹಾನ್ ನಾಯಕರು ಶೀಘ್ರ ಚೇತರಿಸಿಕೊಂಡು ಉತ್ತಮ ಆರೋಗ್ಯದಲ್ಲಿ ಇರಲಿ ಎಂದು ಹಾರೈಸಿದರು.

ಸದ್ಯಕ್ಕೆ ಆಸ್ಪತ್ರೆಯಲ್ಲೇ ಚಿಕಿತ್ಸೆ: ಅನಾರೋಗ್ಯದಿಂದ ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ದಾಖಲಾಗಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಆರೋಗ್ಯ ಸ್ಥಿರವಾಗಿರುವುದಾಗಿ ಎಂದು ಜೆಡಿಎಸ್ ಪಕ್ಷ ತಿಳಿಸಿದೆ. ತಾವುಗಳು ಆತಂಕಪಡುವ ಅಗತ್ಯವಿಲ್ಲ. ಮಾಜಿ ಪ್ರಧಾನಿ ಹಾಗೂ ಜನತಾದಳ ಪಕ್ಷದ ರಾಷ್ಟ್ರೀಯ ಅಧ್ಯಕರಾದ ದೇವೇಗೌಡರು ಚೇತರಿಸಿಕೊಂಡು ಗುಣಮುಖರಾಗಿದ್ದು, ಆರೋಗ್ಯವಾಗಿದ್ದಾರೆ. ಇನ್ನು ಕೆಲ ದಿನಗಳಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಲಿದ್ದಾರೆ. ನಾಡಿನ ಜನರ ಹಾರೈಕೆ, ಪ್ರೀತಿ, ಪ್ರಾರ್ಥನೆಯೇ ಅವರಿಗೆ ಶ್ರೀರಕ್ಷೆ. ವದಂತಿಗಳಿಗೆ ಕಿವಿಗೊಡಬೇಡಿ ಎಂದು ಪಕ್ಷ ಪ್ರಕಟಣೆಯಲ್ಲಿ ಮನವಿ ಮಾಡಿದೆ.

ಅಂಶಿ ಪ್ರಸನ್ನಕುಮಾರ್‌ಗೆ ಕೃಷಿ ಮಾಧ್ಯಮ ಪ್ರಶಸ್ತಿ ಪ್ರದಾನ



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಅಲುಮ್ನಿ ಅಸೋಸಿಯೇಷನ್ ಶನಿವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಮೈಸೂರಿನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ ಹೊಂಬಾಳೆ ಸಂಹಿತ ಹರಿಣಿಕುಮಾರ್ ಕೃಷಿ ಮಾಧ್ಯಮ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ, ನಿವೃತ್ತ ಪ್ರಧಾನ ಕಾರ್ಯದರ್ಶಿ ಎನ್.ಸಿ.ಮುನಿಯಪ್ಪ, ಸಂಘದ ಅಧ್ಯಕ್ಷ ಎಚ್.ಎಲ್.ಹರೀಶ್, ಕಾರ್ಯದರ್ಶಿ ಡಾ.ಕೆ.ಎಂ. ಹರಿಣಿಕುಮಾರ್, ಸನ್ಮಾನ ಸಮಿತಿ ಅಧ್ಯಕ್ಷ ಡಾ.ನಿರಂಜನ ಮೂರ್ತಿ, ಕಾರ್ಯಕಾರಿ ಸಮಿತಿ ಸದಸ್ಯ ಡಾ.ಶಿವರಾಂ, ಡಾ.ಜಗದೀಶ್ ಉಪಸ್ಥಿತರಿದ್ದರು.

ಬಿಎಂಟಿಸಿ ಬಸ್‌ಗೆ 9 ವರ್ಷದ ಬಾಲಕಿ ಬಲಿ

ಬೆಂಗಳೂರು, ಅ.11– ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(BMTC)ಯ ಬಸ್ ಚಾಲಕನ ಅಜಾಗರೂಕತೆಗೆ ಮತ್ತೊಂದು ಜೀವ ಇಂದು ಬಲಿಯಾಗಿದೆ.

ಬಿಎಂಟಿಸಿ ಬಸ್ ಹರಿದು 9 ವರ್ಷದ ಬಾಲಕಿ ಸ್ಥಳದಲ್ಲೇ ಮೃತಪಟ್ಟ ಘಟನೆ ರಾಜಾಜಿನಗರದ 1ನೇ ಬ್ಲಾಕ್‌ನಲ್ಲಿ ನಡೆದಿದೆ. ಕಳೆದ ನಾಲ್ಕು ದಿನಗಳ ಹಿಂದಷ್ಟೇ ಕಮಲಾನಗರದಲ್ಲಿ ಬಿಎಂಟಿಸಿ ಬಸ್‌ನ ಬ್ರೇಕ್ ಫೇಲ್ಯೂರ್ ಆಗಿ ನಂದಿನಿ ಪಾರ್ಲರ್‌ಗೆ ನುಗ್ಗಿದ ಘಟನೆ ನಡೆದಿತ್ತು.

ಬಸ್‌ನಲ್ಲಿ ಇಪ್ಪತ್ತು ಮಂದಿ ಪ್ರಯಾಣಿಕರಿದ್ದರು. ಯಾರಿಗೂ ಯಾವುದೇ ಪ್ರಾಣ ಹಾನಿಯಾಗಿರಲಿಲ್ಲ. ನಂದಿನಿ ಪಾರ್ಲರ್‌ನ ಗೋಡೆ ಮತ್ತು ಒಳಗಡೆಯಿದ್ದ ಕೆಲವು ಉಪಕರಣಗಳಿಗೆ ಹಾನಿಯಾಗಿತ್ತು. ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ದುರಂತ ಅಂತ್ಯ ಕಂಡ ಸಾಕಷ್ಟು ಘಟನೆಗಳು ಬೆಂಗಳೂರಿನಲ್ಲಿ ನಡೆದಿದೆ.

ಸ್ಥಳೀಯ ಸಂಸ್ಥೆಗಳ ಸ್ವಚ್ಛತಾ ವಾಹನ ಚಾಲಕರ ಖಾಯಂಗೆ ಚರ್ಚೆ

ಸ್ವಚ್ಛತಾ ವಾಹನ ಚಾಲಕರ ಸಂಘದ ಅಧ್ಯಕ್ಷರೂ ಆದ ಮಾಜಿ ಮೇಯರ್ ನಾರಾಯಣ್ ಭರವಸೆ

ಮೈಸೂರು, ಅ.11(ಎಂಟಿವೈ)– ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳ ಸ್ವಚ್ಛತಾ ವಾಹನ ಚಾಲಕರನ್ನು ಖಾಯಂಗೊಳಿಸುವ ಸಂಬಂಧ ಸರ್ಕಾರದೊಂದಿಗೆ ಚರ್ಚಿಸುವುದಾಗಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸ್ವಚ್ಛತಾ ವಾಹನ ಚಾಲಕರ ಸಂಘದ ಅಧ್ಯಕ್ಷ, ಮಾಜಿ ಮೇಯರ್ ನಾರಾಯಣ್ ಅವರು ಭರವಸೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸ್ವಚ್ಛತಾ ವಾಹನ ಚಾಲಕರ ಸಂಘದ ಪದಾಧಿಕಾರಿಗಳು ಹಾಗೂ ಸ್ವಚ್ಛತಾ ವಾಹನದ ಚಾಲಕರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಪೌರ ಕಾರ್ಮಿಕರು, ಒಳಚರಂಡಿ ವಿಭಾಗದ ಕಾರ್ಮಿಕರು ಹಾಗೂ ಸ್ವಚ್ಛತಾ ವಾಹನಗಳ ಚಾಲಕರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದಾ ಸಿದ್ಧರಿದ್ದು, ಈಗಾಗಲೇ ಪೌರಕಾರ್ಮಿಕರು ಮತ್ತು ಒಳಚರಂಡಿ ವಿಭಾಗದ ಪೌರಕಾರ್ಮಿಕರ ಕೆಲ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ ಎಂದರು.

ಕರ್ನಾಟಕ ಮುನ್ಸಿಪಲ್ ಕಾಯಿದೆ ಪ್ರಕಾರ ಕಸ ತುಂಬುವವರು, ಕಸ ಸಂಗ್ರಹಿಸುವವರು, ಗುಡಿಸುವವರು, ವಾಹನ ಚಾಲಕರು, ಒಳಚರಂಡಿ ಕಾರ್ಮಿಕರೆಲ್ಲರೂ ಪೌರಕಾರ್ಮಿಕರಾಗಿದ್ದಾರೆ. ಹಾಗಾಗಿ ಇತ್ತೀಚೆಗೆ ಪೌರಕಾರ್ಮಿಕರ ಗುತ್ತಿಗೆ ಪದ್ಧತಿಯನ್ನು ರದ್ದು ಮಾಡಿ ಅವರ ಸೇವೆಯನ್ನು ಖಾಯಂಗೊಳಿಸಿದಂತೆ ವಾಹನ ಚಾಲಕರ ಸೇವೆಯನ್ನು ಖಾಯಂ ಮಾಡಿಸಲು ಪ್ರಯತ್ನ ಮಾಡಲಾಗುವುದು. ಈ ವಿಚಾರವನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತರಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದಕ್ಕೆ ಪೂರಕವಾಗಿ ಸ್ಪಂದಿಸಿದ್ದು, ಪ್ರತ್ಯೇಕ ಸಭೆ ನಡೆಸಿ ಈ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಇತ್ತೀಚೆಗೆ ಅಧಿಕಾರಿಗಳು ಕರ್ನಾಟಕ ಮುನ್ಸಿಪಲ್ ಕಾಯಿದೆಗೆ ವಿರುದ್ಧವಾಗಿ ಕಸ ತುಂಬುವವರು, ಸಂಗ್ರಹಿಸುವವರು, ಗುಡಿಸುವವರು, ವಾಹನ ಚಾಲಕರು, ಒಳಚರಂಡಿ ಕಾರ್ಮಿಕರೆಲ್ಲರನ್ನು ಪ್ರತ್ಯೇಕ ವಿಭಾಗಗಳಾಗಿ ವಿಂಗಡಿಸಿದ್ದಾರೆ. ಈ ವಿಚಾರವನ್ನೂ ಸರ್ಕಾರದ ಗಮನಕ್ಕೆ ತರಲಾಗಿದೆ. ಸ್ವಚ್ಛತಾ ವಾಹನ ಚಾಲಕರ ಬೇಡಿಕೆಗಳ ಈಡೇರಿಕೆಗೆ ವ್ಯವಸ್ಥಿತವಾದ ಹೋರಾಟ ರೂಪಿಸಲು ಬಲಿಷ್ಠವಾದ ಸಂಘವಿಲ್ಲ. ಸರ್ಕಾರದಿಂದ ಯಾವುದೇ ಸೌಲಭ್ಯ ಪಡೆಯಬೇಕಾದರೂ ಹೋರಾಟ ಅಗತ್ಯ. ಸಂಘಟನೆ ಕುಗ್ಗಿದರೆ ಅಲ್ಲಿ ದೌರ್ಜನ್ಯ, ದಬ್ಬಾಳಿಕೆ, ಶೋಷಣೆ ಹೆಚ್ಚಾಗುತ್ತದೆ. ಹೀಗಾಗಿ ಸ್ವಚ್ಛತಾ ವಾಹನ ಚಾಲಕರ ರಾಜ್ಯ ಮಟ್ಟದ ಸಂಘ ಸ್ಥಾಪನೆ ಮಾಡಲಾಗಿದೆ. ಅದಕ್ಕೆ ಜಿಲ್ಲಾಧ್ಯಕ್ಷರೂ ಸೇರಿದಂತೆ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಎಲ್ಲಾ ಜಿಲ್ಲೆಗಳ ಜಿಲ್ಲಾಧ್ಯಕ್ಷರು ತಮ್ಮ ವ್ಯಾಪ್ತಿಯ ಎಲ್ಲಾ ತಾಲೂಕುಗಳಲ್ಲಿ ಸಂಘಟನೆ ಮಾಡಬೇಕು. ಒಮ್ಮೆ ಹೋರಾಟಕ್ಕೆ ಕರೆ ನೀಡಿದರೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸ್ವಚ್ಛತಾ ವಾಹನಗಳ ಚಾಲಕರು ಬರಬೇಕು. ಆಗ ನಮ್ಮ ಬೇಡಿಕೆಗಳನ್ನು ಸರ್ಕಾರದಿಂದ ಈಡೇರಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಸಂಘದ ರಾಜ್ಯ ಸಂಚಾಲಕ ಓಬಳೇಶ್, ಸಂಘಟನಾ ಕಾರ್ಯದರ್ಶಿ ಆರ್.ದಾಸ್, ಖಜಾಂಚಿ ಯತಿರಾಜ್, ಜಿಲ್ಲಾಧ್ಯಕ್ಷ ಆರ್ಟಿಸ್ಟ್ ನಾಗರಾಜ್, ಸಾಮಾನ್ಯ ಕಾರ್ಯದರ್ಶಿ ಶ್ರೀನಿವಾಸ್, ಶಿವಮೊಗ್ಗ, ಬಳ್ಳಾರಿ, ಕೋಲಾರ, ಧಾರವಾಡ, ಪುತ್ತೂರು, ಮಂಗಳೂರು, ಬೆಳಗಾವಿ ಜಿಲ್ಲೆಯ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸ್ವಚ್ಛತಾ ವಾಹನ ಚಾಲಕರ ಸಂಘದ ಪದಾಧಿಕಾರಿಗಳು ಹಾಗೂ ವಾಹನಗಳ ಚಾಲಕರೊಂದಿಗೆ ಮಾಜಿ ಮೇಯರ್ ನಾರಾಯಣ್ ಸಭೆ ನಡೆಸಿ, ಅವರ ಸಮಸ್ಯೆ ಆಲಿಸಿದರು.

> ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಪೌರ ಕಾರ್ಮಿಕರ ಗುತ್ತಿಗೆ ಪದ್ಧತಿ ರದ್ದಾಗಿಲ್ಲ. ಕೇವಲ 10ರಿಂದ 15 ಸಾವಿರ ರೂ.ಗೆ ದುಡಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಸಂಘಟನೆ ಕೊರತೆ ಇರುವುದರಿಂದ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ನಾಯಕರು ಪ್ರಾಮಾಣಿಕರಾಗಿದ್ದರೆ ಮಾತ್ರ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ನೂತನ ಸಂಘದ ಪದಾಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು.
>
> – ನಾರಾಯಣ್, ಮಾಜಿ ಮೇಯರ್

ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ ನೂತನ ಕಾರ್ಯಕಾರಿ ಸಮಿತಿ ಸದಸ್ಯರು



ಮೈಸೂರಿನ ನಿವೇದಿತನಗರದಲ್ಲಿರುವ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ 2025 ರಿಂದ 2030 ನೇ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಕುಳಿತಿರುವವರು: ಪಾಲಂದಿರ ಪೊನ್ನಯ್ಯ (ಕಾನೂನು ಸಲಹೆಗಾರರು), ಕುಟ್ಟಿಮಡ ಕಾರ್ಯಪ್ಪ (ಉಪಾಧ್ಯಕ್ಷರು), ಪಾಲಂದಿರ ಸೋಮಣ್ಣ (ಅಧ್ಯಕ್ಷರು), ಮುಕ್ಕಾಟಿರ ಬೆಳ್ಳಿಯಪ್ಪ (ಕಾನೂನು ಸಲಹೆಗಾರರು). ನಿಂತಿರುವವರು: ಬೊಳ್ಳೆಪಂಡ ನಂಜಪ್ಪ (ಸಿ.ಇ.ಓ) ಹಾಗೂ ನಿರ್ದೇಶಕರುಗಳು ತಾಪಂಡ ನಾಗೇಶ್ ಕುಮಾರ್, ಮಂದನೆರವಂಡ ನಾಣಯ್ಯ, ಬೊಟ್ಟೋಳಂಡ ಸರಳ, ತಂಬುಕುತ್ತಿರ ಪಾವನ, ಮನೆಯಪಂಡ ತಿಮ್ಮಯ್ಯ ಮತ್ತು ಕುಂಞಂಡ ರಾಬಿನ್.

ಪೊಲೀಸ್ ಅಕಾಡೆಮಿಯಲ್ಲಿ ತರಬೇತಿ ನಿರತ ಸಬ್‌ಇನ್‌ಸ್ಪೆಕ್ಟರ್ ಪ್ರಶಿಕ್ಷಣಾರ್ಥಿಗಳಿಂದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸ್ವಚ್ಛತೆ

ಮೈಸೂರು, ಅ.11– ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ)ಯ ತರಬೇತಿ ನಿರತ 46ನೇ ತಂಡದ ಸುಮಾರು 328 ಸಬ್‌ಇನ್‌ಸ್ಪೆಕ್ಟರ್ ಪ್ರಶಿಕ್ಷಣಾರ್ಥಿಗಳು ಶನಿವಾರ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸುವ ಮೂಲಕ ಶ್ರಮದಾನ ಮಾಡಿದರು.

ಕೆಪಿಎ ಸಮಾಜ ಸೇವಾ ಕ್ಲಬ್ ವತಿಯಿಂದ 'ಸ್ವಚ್ಛ ಕೆಪಿಎ–ಸ್ವಚ್ಛ ಮೈಸೂರು' ಶೀರ್ಷಿಕೆಯಡಿ ಆಯೋಜಿಸಿದ್ದ 'ಸ್ವಯಂ ಸೇವೆ' ಶ್ರಮದಾನಕ್ಕೆ ಚಾಲನೆ ನೀಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಪೊಲೀಸ್ ಇಲಾಖೆ ಅತ್ಯಂತ ಶಿಸ್ತಿನ ಇಲಾಖೆ. ಕಾನೂನು–ಸುವ್ಯವಸ್ಥೆ ರಕ್ಷಿಸುವ ಮಹತ್ವದ ಜವಾಬ್ದಾರಿ ಇದೆ. ಎಸ್‌ಐ ಪ್ರಶಿಕ್ಷಣಾರ್ಥಿಗಳು ಶ್ರಮಧಾನದ ಮೂಲಕ ಪರಿಸರ ಕಾಳಜಿ ಮೆರೆಯುತ್ತಿರುವುದು ಪ್ರಶಂಸನೀಯ. ಸುಂದರ ಪರಿಸರವನ್ನು ಮುಂದಿನ ಪೀಳಿಗೆಗೆ ಉಳಿಸುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕಿದೆ ಎಂದು ಆಶಿಸಿದರು.

ಕಾರ್ಯಕ್ರಮ ರೂವಾರಿ ಕೆಪಿಎ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ ಮಾತನಾಡಿ, ಎಲ್ಲಾ ಪೊಲೀಸರು ಕರ್ತವ್ಯದೊಂದಿಗೆ ಸಾಮಾಜಿಕ ಕಳಕಳಿ ಹೊಂದಿರಬೇಕು. ಆರೋಗ್ಯಪೂರ್ಣ ಸಮಾಜ ನಿರ್ಮಿಸಲು ಕಟಿಬದ್ಧರಾಗಿ, ಆ ನಿಟ್ಟಿನಲ್ಲಿ ಬದ್ಧತೆಯಿಂದ ಶ್ರಮಿಸಬೇಕು. ಈ ಮೂಲಕ ಎಲ್ಲಾ ಆಯಾಮಗಳಲ್ಲೂ ಮಾದರಿಯಾಗಿ ನಿಲ್ಲಬೇಕು ಎಂದು ಹೇಳಿದರು.

ಕೆಪಿಎ ಸಾಮಾಜಿಕ ಸೇವಾ ಕ್ಲಬ್‌ನ ಸಂಯೋಜಕರೂ ಆದ ಸಹಾಯಕ ನಿರ್ದೇಶಕ ಎಸ್.ಎನ್.ಸಂದೇಶ ಕುಮಾರ್ ಮಾತನಾಡಿ, ಮೈಕ್ರೋ ಪ್ಲಾಸ್ಟಿಕ್ ಹಾಗೂ ಏಕಬಳಕೆ ಪ್ಲಾಸ್ಟಿಕ್‌ನಿಂದ ಪರಿಸರ ಹಾಗೂ ಮನುಕುಲಕ್ಕೆ ಆಗುತ್ತಿರುವ ಅಪಾಯದ ಬಗ್ಗೆ ವಿವರಿಸಿ, ಪ್ಲಾಸ್ಟಿಕ್ ಬಳಕೆ ಸಂಪೂರ್ಣ ನಿಷೇಧಿಸುವುದು ಅನಿವಾರ್ಯವಾಗಿದೆ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕರುಗಳಾದ ರೇಣುಕಾರಾಧ್ಯ, ಸುದರ್ಶನ್, ವೆಂಕಟೇಶ್, ಬೋಧಕರಾದ ಚಂದ್ರಶೇಖರ್, ಕ್ರಾಂತಿರಾಜ್ ಒಡೆಯರ್, ವೈದ್ಯ ಕರುಣಾಕರ್, ಮೈಸೂರು ಕಲ್ಚರಲ್ ಅಸೋಸಿಯೇಶನ್‌ನ ಅಧ್ಯಕ್ಷ ಎ.ಪಿ.ನಾಗೇಶ್, ರಮೇಶ್, ಅವಿನಾಶ್, ಸಚಿನ್, ಪತ್ರಕರ್ತ ರಮೇಶ್ ಉತ್ತಪ್ಪ ಸೇರಿದಂತೆ ಕೆಪಿಎ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಮೈಸೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರಶಿಕ್ಷಣಾರ್ಥಿಗಳು ಸಂಗ್ರಹಿಸಿದ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿಗೆ ಸಹಕಾರ ನೀಡಿದರು.



ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಸಬ್‌ಇನ್‌ಸ್ಪೆಕ್ಟರ್ ಪ್ರಶಿಕ್ಷಣಾರ್ಥಿಗಳು ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಶ್ರಮದಾನದ ಮೂಲಕ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿದರು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನ, ಸಂವಿಧಾನದ ಮೇಲಿನ ದಾಳಿ

ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಕ್ರೋಶ



ಮೈಸೂರು, ಅ.11– ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಗವಾಯಿ ಅವರ ಮೇಲೆ ಶೂ ಎಸೆಯಲು ಪ್ರಯತ್ನಿಸಿರುವುದು ಪ್ರಜಾಪ್ರಭುತ್ವದ, ಸಂವಿಧಾನದ ಮೇಲಿನ ದಾಳಿ ಎಂದು ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ನ್ಯಾಯಮೂರ್ತಿಗಳನ್ನು ಮೈಲಾರ್ಡ್ ಎನ್ನುತ್ತೇವೆ. ಲಾರ್ಡ್ ಎಂದರೆ ದೇವರು. ಆದರೆ ಇಂದು ನ್ಯಾಯ ದೇವರ ಮೇಲೆಯೇ ಹಲ್ಲೆ ನಡೆಯುತ್ತಿದೆ. ಮುಖ್ಯನ್ಯಾಯಮೂರ್ತಿ ಮೇಲಿನ ದಾಳಿಯು ದೇಶದಲ್ಲಿ ದಲಿತರಿಗೆ ರಕ್ಷಣೆ ಇಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ. ಕೂಡಲೇ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ದೇಶದ ಸಂವಿಧಾನ, ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಉಳಿಸಲು ಎಲ್ಲರೂ ಒಂದಾಗಬೇಕು.

ಶೂ ಎಸೆದಿರುವ ಕೃತ್ಯವನ್ನೂ ಸಮಾಜದ ಕೆಲವು ಹಿರಿಯರು, ಬುದ್ಧಿಜೀವಿಗಳು ಸಮರ್ಥಿಸಿಕೊಳ್ಳುತ್ತಿರುವುದು ಅವರ ಕೊಳಕು ಮನಸ್ಥಿತಿಗೆ ಹಿಡಿದ ಕೈಗನ್ನಡಿ. ದಾಳಿ ನಡೆದ ನಂತರವೂ ಶಾಂತಚಿತ್ತವನ್ನು ಕಾಪಾಡಿಕೊಂಡ ನ್ಯಾಯಮೂರ್ತಿ ಗವಾಯಿ ಅವರ ನಡೆ ಮೆಚ್ಚುವಂತದ್ದು. ಈ ಕೃತ್ಯವನ್ನು ಇಡೀ ದೇಶ ಖಂಡಿಸಬೇಕು. ಏಕೆಂದರೆ ಇದು ನ್ಯಾಯಮೂರ್ತಿಗಳ ಮೇಲಿನ ದಾಳಿಯಲ್ಲ. ಸಂವಿಧಾನದ ಮೇಲಿನ ದಾಳಿ, ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದು ಮಲ್ಲೇಶ್ ತಿಳಿಸಿದ್ದಾರೆ.

ವಾಲ್ಮೀಕಿ ಜಯಂತಿ



ಮೈಸೂರಿನ ವಿಜಯನಗರ ಬಸ್ ಘಟಕದಲ್ಲಿ ಅದ್ಧೂರಿ ವಾಲ್ಮೀಕಿ ಜಯಂತಿಯನ್ನು ಘಟಕ ವ್ಯವಸ್ಥಾಪಕಿ ಸುಮಲತಾ ಅವರ ನೇತೃತ್ವದಲ್ಲಿ ಆಚರಿಸಲಾಯಿತು. ವಿಭಾಗೀಯ ನಿಯಂತ್ರಣ ಅಧಿಕಾರಿ ವೀರೇಶ್, ಭದ್ರತಾಧಿಕಾರಿ ಶಿವರಾಜೇಗೌಡ, ಸಂಚಾರಿ ನಿರೀಕ್ಷಕ ಮಹೇಶ್, ಗಣೇಶ್, ರವಿಕುಮಾರ್, ವೈ.ಮಂಜುನಾಥ್, ಎಸ್.ಡಿ.ರಾಜು, ಸಿ.ಡಿ.ವಿಶ್ವನಾಥ್, ಶ್ರೀಧರ್ ಹಾಜರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಅ. 11–ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಅ.14ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9916155453, 9448738657 ಸಂಪರ್ಕಿಸಬಹುದು.



ಡಿ.ಮಾದೇಗೌಡರಿಗೆ ಸನ್ಮಾನ

ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದ ವಿಧಾನಪರಿಷತ್ ಮಾಜಿ ಸದಸ್ಯರಾದ ಡಿ.ಮಾದೇಗೌಡರನ್ನು ಕುಂಬಾರಕೊಪ್ಪಲಿನ ಅವರ ನಿವಾಸದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಶಾಸಕ ಎಲ್. ನಾಗೇಂದ್ರ, ಬಿಜೆಪಿ ಯುವ ಮುಖಂಡ ಪುನೀತ್ ಮಂಜೇಗೌಡನ ಕೊಪ್ಪಲ್ ಅಭಿನಂದಿಸಿದರು.

ಮೈಮುಲ್ ಅಧ್ಯಕ್ಷ ಸ್ಥಾನಕ್ಕೆ ಅ.23ರಂದು ಚುನಾವಣೆ

- ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಮಾಹಿತಿ
- ದಸರಾ ವಸ್ತು ಪ್ರದರ್ಶನದ ಮೈಮುಲ್ ಮಳಿಗೆಗೆ ಭೇಟಿ
- ಹೈನುಗಾರಿಕೆ ಪಶು ಸಂರಕ್ಷಣೆ ಮಾಹಿತಿ ಪಡೆಯಲು ಜನರಿಗೆ ಸಲಹೆ

ಮೈಸೂರು, ಅ.11– ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ(ಮೈಮುಲ್) ಅಧ್ಯಕ್ಷರ ಸ್ಥಾನದ ಚುನಾವಣೆ ಇದೇ ತಿಂಗಳ ಅ.23ಕ್ಕೆ ನಡೆಯಲಿದೆ ಎಂದು ಪಶು ಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ್ ತಿಳಿಸಿದ್ದಾರೆ.


ದಸರಾ ವಸ್ತುಪ್ರದರ್ಶನದಲ್ಲಿ ಮೈಮುಲ್‌ನಿಂದ ತೆರೆಯಲಾಗಿರುವ 'ನಂದಿನಿ ಕುಟೀರ' ಮಳಿಗೆಗೆ ಭೇಟಿ ನೀಡಿದ್ದ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಈ ವಿಷಯ ತಿಳಿಸಿದರು.

ಪಶು ಸಂಗೋಪನಾ ಇಲಾಖೆ ಹಾಗೂ ಮೈಮುಲ್‌ನ ಕಾರ್ಯಕ್ರಮಗಳು, ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸುವ ಉದ್ದೇಶದಿಂದ ಪ್ರತಿ ವರ್ಷ ದಸರಾ ವಸ್ತು ಪ್ರದರ್ಶನದಲ್ಲಿ ಮಳಿಗೆ ಸ್ಥಾಪಿಸಲಾಗುತ್ತದೆ. ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೈನುಗಾರಿಕೆ ಅಭಿವೃದ್ಧಿಯಾಗುತ್ತಿದ್ದು, ರೈತರು ಈ ಮಳಿಗೆಗೆ ಭೇಟಿ ನೀಡುವ ಮೂಲಕ ಕುರಿ, ಕೋಳಿ ಮೇಕೆ, ಹಸು ಸಾಕಾಣಿಕೆ ಬಗ್ಗೆ ಅಗತ್ಯ ಮಾಹಿತಿ ತಿಳಿಯಬಹುದು. ಜೊತೆಗೆ ಇಲ್ಲಿನ ಅಧಿಕಾರಿಗಳಿಂದಲೂ ವಿವರಣೆ ಪಡೆಯಬಹುದು ಎಂದರು.

ದರ ಏರಿಕೆ ಪ್ರಸ್ತಾಪವಿಲ್ಲ: ಸದ್ಯಕ್ಕೆ ಹಾಲಿನ ದರ ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಅಷ್ಟಕ್ಕೂ ಎರಡು ತಿಂಗಳ ಹಿಂದೆ 4 ರೂ. ಹೆಚ್ಚಳ ಮಾಡಿದ್ದೇವೆ. ಬಿಜೆಪಿ ಅವಧಿಯಲ್ಲಿ ಬಾಕಿ ಉಳಿಸಿಕೊಂಡಿದ್ದ 700 ಕೋಟಿ ರೂ. ಹಾಲಿನ ಪ್ರೋತ್ಸಾಹ ಧನವನ್ನು ನಮ್ಮ ಅವಧಿಯಲ್ಲಿ ನೀಡಿದ್ದೇವೆ. ಜುಲೈವರೆಗಿನ ಪ್ರೋತ್ಸಾಹ ಧನವನ್ನು ಈಗಾಗಲೇ ನೀಡಲಾಗಿದ್ದು, ಆಯಾಯ ತಿಂಗಳಲ್ಲೇ ಸಂದಾಯ ಮಾಡುವ ಬಗ್ಗೆ ಕ್ರಮವಹಿಸಲಾಗಿದೆ. ಮ್ಯಾಟ್, ಮೇವು ಕಟಾವು ಯಂತ್ರವನ್ನು ಬೇಡಿಕೆಗೆ ಅನುಗುಣವಾಗಿ ವಿತರಿಸಲಾಗುತ್ತಿದ್ದು, ಎಲ್ಲರಿಗೂ ಸೌಲಭ್ಯ ದೊರಕುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಆಪಾದನೆಯೇ ಬಿಜೆಪಿ ಕೆಲಸ: ಮೈಸೂರು ನಗರದಲ್ಲಿ ಕೊಲೆ, ಅತ್ಯಾಚಾರ ಇನ್ನಿತರ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಈ ವಿಚಾರವಾಗಿ ನಗರ ಪೊಲೀಸ್ ಆಯುಕ್ತರನ್ನು ಕೇಳಬೇಕು. ಬಿಜೆಪಿಯವರು ನಾವು ಮಾಡುವ ಒಳ್ಳೆಯ ಕೆಲಸಗಳನ್ನು ನೋಡುವುದಿಲ್ಲ. ಎಲ್ಲಾ ವಿಷಯದಲ್ಲೂ ಸರ್ಕಾರದ ವಿರುದ್ಧ ಅಪಾದನೆ ಮಾಡುವುದೇ ಅವರ ಕೆಲಸವಾಗಿದೆ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕರಾದ ಎ.ಟಿ.ಸೋಮಶೇಖರ, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂ.ಪ್ರಕಾಶ್, ಪಿ.ಎಂ.ಪ್ರಸನ್ನ, ಆರ್.ಚೆಲುವರಾಜು, ಕೆ.ಈರೇಗೌಡ, ಕೆ.ಎಸ್.ಕುಮಾರ್, ದ್ರಾಕ್ಷಾಯಿಣಿ ಬಸವರಾಜಪ್ಪ, ಲೀಲಾ ಬಿ.ಕೆ. ನಾಗರಾಜು, ನೀಲಾಂಬಿಕೆ ಮಹೇಶ್ ಕುರಹಟ್ಟಿ, ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಗುರುಸ್ವಾಮಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ ರವಿಕುಮಾರ್, ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್ ಮತ್ತಿತರರಿದ್ದರು.



ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿನ 'ನಂದಿನಿ ಕುಟೀರ' ಮಳಿಗೆಗೆ ಶುಕ್ರವಾರ ರಾತ್ರಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಭೇಟಿ ನೀಡಿ, ವೀಕ್ಷಿಸಿದರು.

ದಸರಾ ವೇಳೆ ಬಿಡುವು; ಮೈಸೂರಲ್ಲಿ ವಾಹನಗಳ ತಪಾಸಣೆ ಮತ್ತೆ ಆರಂಭ

- ತ್ರಿಬಲ್ ರೈಡಿಂಗ್ ವಿರುದ್ಧ 55 ಪ್ರಕರಣ ದಾಖಲು
- ಲೈಟಿಂಗ್ ವೀಕ್ಷಣೆ ವೇಳೆ ಟ್ರಾಫಿಕ್ ನಿಯಮ ಉಲ್ಲಂಘಿಸುವವರ ಮೇಲೆ ಕೆಂಗಣ್ಣು

ಮೈಸೂರು, ಅ.11(ಜಿಎ)–ದಸರಾ ಮುಗಿಯುತ್ತಿದ್ದಂತೆ ಮೈಸೂರು ನಗರದಾದ್ಯಂತ ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ.

ದಸರಾ ಮಹೋತ್ಸವದ ಅಂಗವಾಗಿ ಚೆಸ್ಕಾಂ ವತಿಯಿಂದ ಮೈಸೂರು ನಗರವನ್ನು ದೀಪಾಲಂಕಾರದ ಮೂಲಕ ನವವಧುವಿನಂತೆ ಶೃಂಗಾರಗೊಳಿಸಲಾಗಿದ್ದು, ಅದನ್ನು ವೀಕ್ಷಿಸಲು ಸಂಜೆ ನಂತರ ರಸ್ತೆಗಿಳಿಯುತ್ತಿರುವ ವಾಹನ ಸವಾರರು ಸಂಚಾರ ನಿಯಮವನ್ನು ಪಾಲಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿ ಮೊದಲ ದಿನವೇ ತ್ರಿಬಲ್ ರೈಡಿಂಗ್ ವಿರುದ್ಧ 55 ಕೇಸ್ ದಾಖಲಿಸಿದ್ದು, ಇತರ ಪ್ರಕರಣಗಳಲ್ಲಿ 52 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಲು ಬರುವ ಪ್ರವಾಸಿಗರು ಮತ್ತು ಸ್ಥಳೀಯರು ಸಂಚಾರಿ ನಿಯಮಗಳನ್ನು ಗಾಳಿಗೆ ತೂರುತ್ತಿದ್ದಾರೆ. ಹೆಲ್ಮೆಟ್ ರಹಿತ ವಾಹನ ಚಾಲನೆ, ತ್ರಿಬಲ್ ರೈಡಿಂಗ್, ದೋಷ ಪೂರಿತ ನಂಬರ್ ಪ್ಲೇಟ್ ಇರುವ ವಾಹನ ಬಳಕೆ ಸೇರಿದಂತೆ ಅನೇಕ ರೀತಿ ಸಂಚಾರಿ ನಿಯಮವನ್ನು ಉಲ್ಲಂಘಿಸುತ್ತಿರುವುದನ್ನು ಸಂಚಾರಿ ಪೊಲೀಸರು ಕಟ್ಟುನಿಟ್ಟಾಗಿ ಗಮನಿಸುತ್ತಿದ್ದಾರೆ.

ಸಂಜೆ ದೀಪಾಲಂಕಾರ ವೀಕ್ಷಿಸಲು ಬರುತ್ತಿರುವ ಯುವಕರ ಮೇಲೆ ತೀವ್ರ ನಿಗಾ ಇಟ್ಟಿರುವ ಪೊಲೀಸರು ಸಂಚಾರಿ ನಿಯಮ ಉಲ್ಲಂಘನೆ ಜೊತೆಗೆ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿರುವುದನ್ನು ಗಮನಿಸಿ, ಅ.10(ಶುಕ್ರವಾರ)ರ ಸಂಜೆಯಿಂದ ಬಿಸಿ ಮುಟ್ಟಿಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಾಚರಣೆಯನ್ನು ಆರಂಭಿಸಿ, ದೇವರಾಜ, ಕೃಷ್ಣರಾಜ, ನರಸಿಂಹರಾಜ, ಸಿದ್ದಾರ್ಥ ಮತ್ತು ವಿವಿ ಪುರಂ ಸಂಚಾರಿ ಪೊಲೀಸರು ವಾಹನ ತಪಾಸಣೆ ನಡೆಸಿ, ಕೇಸ್ ದಾಖಲಿಸುತ್ತಿದ್ದಾರೆ.

ಸಂಚಾರ ವಿಭಾಗದ ಎಸಿಪಿ ಶಿವಶಂಕರ್ ನೇತೃತ್ವದಲ್ಲಿ ಅ.10ರಂದು ಕಾರ್ಯಾಚರಣೆ ಆರಂಭಿಸಿದ ಸಂಚಾರಿ ಪೊಲೀಸರು ದೇವರಾಜ 13, ಕೃಷ್ಣರಾಜ 21, ನರಸಿಂಹರಾಜ 1, ಸಿದ್ದಾರ್ಥ 11 ಹಾಗೂ ವಿವಿ ಪುರಂ ಸಂಚಾರಿ ಠಾಣಾ ವ್ಯಾಪ್ತಿಯಲ್ಲಿ 55 ತ್ರಿಬಲ್ ರೈಡಿಂಗ್ ಕೇಸ್ ದಾಖಲಿಸಿ ದಂಡ ವಿಧಿಸಿದ್ದಾರೆ. ಇತರೆ ಪ್ರಕರಣಗಳಲ್ಲಿ ದೇವರಾಜ 15, ನರಸಿಂಹರಾಜ 2, ಸಿದ್ದಾರ್ಥ 17, ವಿವಿ ಪುರಂ ವ್ಯಾಪ್ತಿಯಲ್ಲಿ 18 ಸೇರಿದಂತೆ 52 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಮುಖವಾಗಿ ಹಾರ್ಡಿಂಜ್ (ಜಯಚಾಮರಾಜೇಂದ್ರ) ವೃತ್ತ, ಸಯ್ಯಾಜಿರಾವ್ ರಸ್ತೆ, ಬನ್ನಿಮಂಟಪ, ಡಿ.ದೇವರಾಜ ಅರಸು ರಸ್ತೆ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಚಾಮರಾಜ ಜೋಡಿ ರಸ್ತೆ, ಜೆಎಲ್‌ಬಿ ರಸ್ತೆ, ಮಿಲೇನಿಯಂ(ಎಲ್‌ಐಸಿ ಸರ್ಕಲ್) ವೃತ್ತ, ಒಂಟಿಕೊಪ್ಪಲ್ ಟೆಂಪಲ್ ರಸ್ತೆ, ಕೆಆರ್‌ಎಸ್ ರಸ್ತೆ, ಮೈಸೂರು–ಬೆಂಗಳೂರು ಬಿಎನ್ ರಸ್ತೆ ಸೇರಿದಂತೆ ಮೈಸೂರು ನಗರದಾದ್ಯಂತ ಕಾರ್ಯಾಚರಣೆಯನ್ನು ಚುರುಕುಗೊಳಿಸಿರುವ ಪೊಲೀಸರು ಸಂಚಾರಿ ನಿಯಮವನ್ನು ಪಾಲಿಸದ ವಾಹನ ಸವಾರರಿಗೆ ದಂಡ ವಿಧಿಸಲು ಮುಂದಾಗಿದ್ದಾರೆ.



ಮೈಸೂರು ನಗರದಾದ್ಯಂತ ಸಂಚಾರಿ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿ, ಸಂಚಾರಿ ನಿಯಮ ಉಲ್ಲಂಘಿಸಿದ ವಾಹನ ಸವಾರರ ವಿರುದ್ಧ ಕೇಸ್ ದಾಖಲಿಸಿದರು.

ನಾಪೋಕ್ಲುನಲ್ಲಿ ಭಾರೀ ಮಳೆ : ಕೊಟ್ಟಿಗೆ ಕುಸಿತ, ಗಾಳಿಗೆ ಹಾರಿದ ಶೀಟು


ದನದ ಕೊಟ್ಟಿಗೆ ಕುಸಿದುಬಿದ್ದಿರುವುದು.

ನಾಪೋಕ್ಲು: ನಾಪೋಕ್ಲು ವ್ಯಾಪ್ತಿಯಲ್ಲಿ ಶನಿವಾರ ಸುರಿದ ಬಿರುಸಿನ ಮಳೆಯಿಂದ ಕೊಟ್ಟಿಗೆ ಕುಸಿದು, ಶೀಟುಗಳು ಹಾರಿ ಹೋಗಿವೆ.

ಬೆಳಗಿನ ಜಾವ ನಿಧಾನವಾಗಿ ಆರಂಭಗೊಂಡ ಮಳೆ ಬಳಿಕ ಮಧ್ಯಾಹ್ನದವರೆಗೂ ಎಡೆಬಿಡದೆ ಸುರಿಯಿತು. ನಾಪೋಕ್ಲು ವ್ಯಾಪ್ತಿಯ ಗ್ರಾಮಗಳಲ್ಲಿ ಗುಡುಗು ಸಹಿತ ಮಳೆಯಾಗಿದ್ದು ಅಲ್ಲಲ್ಲಿ ಹಾನಿ ಸಂಭವಿಸಿದೆ. ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ ಪಾರ್ವತಿ ಎಂಬವರ ಮನೆಯ ದನದ ಕೊಟ್ಟಿಗೆ ಕುಸಿದುಬಿದ್ದಿದ್ದು, ಗಾಳಿಗೆ ಶೀಟುಗಳು ಹಾರಿ ಹೋಗಿ ಪುಡಿಪುಡಿಯಾಗಿ ನಷ್ಟ ಸಂಭವಿಸಿದೆ. ದನಗಳನ್ನು ಮೇಯಲು ಬಿಟ್ಟಿದ್ದ ಕಾರಣ ಅಪಾಯದಿಂದ ಪಾರಾಗಿವೆ ಎಂದು ಪಾರ್ವತಿ ತಿಳಿಸಿದ್ದಾರೆ.

ಬೀಟೆ ಮರ ಕಡಿದ ಇಬ್ಬರ ಬಂಧನ

ಮಡಿಕೇರಿ,ಅ.11– ಶ್ರೀಮಂಗಲ ಹೋಬಳಿ ಮಂಚಳ್ಳಿ ಗ್ರಾಮದಲ್ಲಿ ಅಕ್ರಮವಾಗಿ 5 ಬೀಟೆ ಮರಗಳನ್ನು ಕಡಿದಿರುವುದು ಪತ್ತೆಯಾಗಿದೆ.

ಪೊನ್ನಂಪೇಟೆ ವಲಯದ ವಲಯ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರಕರಣವನ್ನು ಪತ್ತೆ ಹಚ್ಚಿ ಅಂತರ್ ರಾಜ್ಯ ಕಳ್ಳನಾದ ಕೇರಳ ವಯನಾಡುವಿನ ತೋಲಪಟ್ಟಿ ಗ್ರಾಮದ ನೈಜಾಮ ಮತ್ತು ಮಂಚಳ್ಳಿ ನಿವಾಸಿ ಮರಗಳನ್ನು ಕಡಿಯಲು ಸಹಕರಿಸಿದ ಧನೇಶ್ ಕೆ.ಎಸ್. ಎಂಬಾತನನ್ನು ಬಂಧಿಸಿದ್ದಾರೆ.

ಬಂಧಿತ ಆರೋಪಿ ಪೊನ್ನಂಪೇಟೆ ವಲಯದಲ್ಲಿ 3 ಬೀಟೆ ಹಾಗೂ 1 ಕಾಡು ಜಾತಿ ಮರ ಕಡಿದ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈತ ಕಳೆದ 8 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ. ಇಬ್ಬರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ಎ.ಕೆ. ಸುಬ್ಬಯ್ಯ, ಪೊನ್ನಮ್ಮ ಸುಬ್ಬಯ್ಯ ದತ್ತಿ ನಿಧಿ ಹಾಗೂ ಚಾರಿಟೆಬಲ್ ಟ್ರಸ್ಟ್‌ನಿಂದ

91 ವಿದ್ಯಾರ್ಥಿನಿಯರಿಗೆ ದತ್ತಿನಿಧಿ ವಿತರಣೆ

ವಿರಾಜಪೇಟೆ, ಅ.11–ಹೆಣ್ಣು ಮಕ್ಕಳು ಅಸಮಾನತೆಯಿಂದ ಹೊರ ಬರಲು ಶಿಕ್ಷಣ ಅತ್ಯಗತ್ಯ, ಪ್ರತಿಯೊಬ್ಬರೂ ವಿದ್ಯಾಭ್ಯಾಸ ಪಡೆದು ಸಮಸ್ಯೆಗಳಿಗೆ ಧ್ವನಿ ಎತ್ತಿ ಎಂದು ಎ.ಕೆ.ಸುಬ್ಬಯ್ಯ, ಪೊನ್ನಮ್ಮ ಸುಬ್ಬಯ್ಯ ದತ್ತಿ ನಿಧಿ ಹಾಗೂ ಚಾರಿಟೆಬಲ್ ಟ್ರಸ್ಟ್ ವ್ಯವಸ್ಥಾಪಕರಾದ ಶಾಸಕ ಎ.ಎಸ್. ಪೊನ್ನಣ್ಣ ಕರೆ ನೀಡಿದರು.

ತಮ್ಮ ಮನೆಯ ಆವರಣದಲ್ಲಿ ಎ.ಕೆ.ಸುಬ್ಬಯ್ಯ, ಪೊನ್ನಮ್ಮ ಸುಬ್ಬಯ್ಯ ದತ್ತಿ ನಿಧಿ ಹಾಗೂ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿನಿಯರಿಗೆ ಐದನೇ ವರ್ಷದ ದತ್ತಿ ವಿತರಣಾ ಸಮಾರಂಭದಲ್ಲಿ 91 ವಿದ್ಯಾರ್ಥಿಗಳಿಗೆ ದತ್ತಿನಿಧಿ ವಿತರಿಸಿ ಮಾತನಾಡಿ ಇಲ್ಲಿ ಯಾವ ರಾಜಕೀಯ ಇರಬಾರದು ಎಂಬ ಕಾರಣಕ್ಕೆ ಸ್ಥಳೀಯ ಪತ್ರಿಕೆಯ ಆಡಳಿತ ಮಂಡಳಿಯ ಸಹಕಾರದಲ್ಲಿ ದತ್ತಿ ನಿಧಿಯ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ. ಯಾವ ಹಸ್ತಕ್ಷೇಪ ಇಲ್ಲದೆ ಪಾರದರ್ಶಕತೆಯನ್ನು ಕಾದುಕೊಂಡು ಬರಲಾಗುತ್ತಿದೆ ಎಂದರು.

ಹೆಣ್ಣು ಮಕ್ಕಳಿಗೆ ಮಾತ್ರ ಏಕೆ ನೀಡುತ್ತಿದ್ದಿರಿ ಎಂಬ ಪ್ರಶ್ನೆ ಕೇಳಿ ಬಂದಿದೆ. ಇದಕ್ಕೆ ಕಾರಣ ಹೆಣ್ಣು ಮಕ್ಕಳು ಗಂಡು ಮಕ್ಕಳಿಗೆ ಸಮಾನಾಂತರವಾಗಿಲ್ಲ ಎನ್ನುವ ಕಾರಣಕ್ಕೆ ಪದವಿ ಪಡೆಯುವ ವಿದ್ಯಾರ್ಥಿನಿಯರಿಗೆ ಮೂರು ವರ್ಷಗಳ ಕಾಲ ತಲಾ 10 ಸಾವಿರದಂತೆ ದತ್ತಿ ನಿಧಿ ನೀಡಲಾಗುತ್ತದೆ ಈ ಮೂಲಕ ಸ್ವ ಶಕ್ತಿಯನ್ನು ಶಿಕ್ಷಣದಿಂದ ಪಡೆದು ಸಮಾಜದಲ್ಲಿ ಸಮಾನತೆಯ ಮೂಲಕ ಹೆಣ್ಣು ಪರಿವರ್ತನೆ ತರಲು ಸಾಧ್ಯವಾಗಲಿ ಎಂಬ ಉದ್ದೇಶ ನಮ್ಮದು. ಎಂದು ಪೊನ್ನಣ್ಣ ಹೇಳಿದರು.


ವಿರಾಜಪೇಟೆಯಲ್ಲಿ ನಡೆದ ಸಮಾರಂಭದಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಅವರಿಂದ ದತ್ತಿನಿಧಿ ಸ್ವೀಕರಿಸಿದ ವಿದ್ಯಾರ್ಥಿನಿಯರು.

ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ ನಾವು ರಾಜಕಾರಣಿಗಳನ್ನು ನೋಡುವ ದೃಷ್ಟಿ ಬೇರೆ. ಇಲ್ಲಿ ಪೊನ್ನಣ್ಣರ ಅಂತಕರಣದಲ್ಲಿರುವ ಮಾನವಿಯತೆಯನ್ನು ನೋಡುವುದೇ ಬೇರೆಯಾಗಿರುತ್ತದೆ. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿದಿರುತ್ತಾರೆ. ಆದರಿಂದ ಅವರ ಶಿಕ್ಷಣಕ್ಕೆ ನೆರವಾಗುವುದು ಪ್ರಶಂಸನೀಯ ಕೆಲಸವಾಗಿದೆ ಎಂದರು.

ಸಂಪಾದಕ ಚಿದ್ವಿಲಾಸ್ ಕಾರ್ಯಕ್ರಮದ ಕುರಿತು ಮಾತನಾಡಿ ಪಾರದರ್ಶಕತೆಯನ್ನು ಕಾದುಕೊಂಡು ಬರುವ ನಿಟ್ಟಿನಲ್ಲಿ ಪೊನ್ನಣ್ಣ ಅವರು ನೀಡಿದ ಜವಾಬ್ದಾರಿಯಂತೆ ನಾವು ಈ ದತ್ತಿ ನಿಧಿಯ ಪ್ರಕ್ರಿಯೆಯನ್ನು ನಡೆಸಿಕೊಂಡು ಬರುತ್ತಿದ್ದೇವೆ. ಈ ದತ್ತಿ ನಿಧಿ ವಿತರಣೆ ನಿಂತ ನೀರಾಗದೆ ಹರಿಯುತ್ತ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವಾಗುತ್ತಿದೆ. ಎಂದರು.

ಸಭೆಯನ್ನು ಉದ್ದೇಶಿಸಿ ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಸುಂಟಿಕೊಪ್ಪದ ಸ್ವಸ್ಥ ಸಂಸ್ಥೆಯ ನಿರ್ದೇಶಕಿ ಅರತಿ ಸೋಮಯ್ಯ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಜ ಉತ್ತಪ್ಪ ಹಿರಿಯರಾದ ಮಾಚಿಮಾಡ ಗಂಗಮ್ಮ ಸುಬ್ರಮಣಿ, ಕಾಂಚನ ಪೊನ್ನಣ್ಣ ಮತ್ತಿತರರು ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ 35 ಆರಂಭಿಕ ಪದವಿ ವಿದ್ಯಾರ್ಥಿನಿಯರಿಗೆ ಹಾಗೂ ಕಳೆದ ಸಾಲಿನ ವಿದ್ಯಾರ್ಥಿಗಳಿಗೆಸೇರಿ 91 ವಿದ್ಯಾರ್ಥಿನಿಯರಿಗೆ ದತ್ತಿ ನಿಧಿ ವಿತರಣೆ ಮಾಡಲಾಯಿತು. ಅರಣ್ಯ ಅಭಿವೃದ್ಧಿ ನಿಗಮದ ನಿಕಟಪೂರ್ವ ನಿರ್ದೇಶಕ ಅಜ್ಜಿಕುಟ್ಟಿರ ನೀರನ್ ಕಾರ್ಯಪ್ಪ ಸ್ವಾಗತಿಸಿದರು. ಮಂಜುನಾಥ್ ನಿರೂಪಿಸಿ ವಂದಿಸಿದರು.

ಶ್ರೀ ಭಗಂಡೇಶ್ವರ ದೇವಸ್ಥಾನದಲ್ಲಿ ನಾಳೆ ಶುಚಿತ್ವ ಕಾರ್ಯ

ಮಡಿಕೇರಿ, ಅ.11– ಭಾಗಮಂಡಲದ ಶ್ರೀ ಭಗಂಡೇಶ್ವರ – ತಲಕಾವೇರಿ ದೇವಾಲಯಗಳಲ್ಲಿ ಅ.17 ರಂದು ಮಧ್ಯಾಹ್ನ 1:44 ನಿಮಿಷಕ್ಕೆ 'ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ' ಜಾತ್ರೆಯು ಜರುಗಲಿದ್ದು, ಜಾತ್ರೆಯ ಪ್ರಯುಕ್ತ ಶ್ರೀ ಭಗಂಡೇಶ್ವರ ದೇವರ ಸನ್ನಿಧಿಗಳಲ್ಲಿ ಊರ್ಧ್ವಾರ್ಚನೆ (ಶುಚಿತ್ವ) ಕಾರ್ಯವು ಅ.13 ರಂದು ಬೆಳಗ್ಗೆ 6 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿದೆ.

ಈ ಸಮಯದಲ್ಲಿ ಭಕ್ತಾದಿಗಳಿಗೆ ದೇವಾಲಯದ ಪ್ರವೇಶ ಹಾಗೂ ಯಾವುದೇ ಸೇವೆಗಳು ಇರುವುದಿಲ್ಲ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ಸಹಕರಿಸಬೇಕಾಗಿ ದೇವಾಲಯದ ಆಡಳಿತಾಧಿಕಾರಿಯವರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಸಾರ್ವಜನಿಕ ಭಕ್ತಾದಿಗಳಲ್ಲಿ ಮನವಿ ಮಾಡಿದ್ದಾರೆ.

ಧನಲಕ್ಷ್ಮಿಗೆ ಪಿಹೆಚ್.ಡಿ ಪದವಿ



ಮೈಸೂರು, ಅ.11– ಡಾ. ನವಿತಾ ತಿಮ್ಮಯ್ಯ ಅವರ ಮಾರ್ಗದರ್ಶನದಲ್ಲಿ ಆರ್. ಧನಲಕ್ಷ್ಮಿ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಓದು, ಬರಹದ ಮಹತ್ವ ತಿಳಿಸಿದ ಅನಂತಶಯನ

ಮಡಿಕೇರಿ,ಅ.11– ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಗ್ರಂಥಾಲಯದ ವತಿಯಿಂದ ಒಂದು ದಿನದ ರಾಷ್ಟ್ರ ಮಟ್ಟದ ಕಾರ್ಯಾಗಾರ ನಡೆಯಿತು. ಕಾಲೇಜಿನ ವಿಚಾರ ಸಂಕಿರಣ ಸಭಾಂಗಣದಲ್ಲಿ ನಡೆದ ಕಾರ್ಯಾಗಾರವನ್ನು ಶಕ್ತಿ ದಿನಪತ್ರಿಕೆಯ ಸಲಹಾ ಸಂಪದಕ ಬಿ.ಜಿ.ಅನಂತಶಯನ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಓದು ಹಾಗೂ ಸಾಕ್ಷರತೆಯ ಮಹತ್ವದ ಕುರಿತು ವಿವರಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಪಂಜಾಬ್ ಅಮೃತಸರ್ ಗುರುನಾನಕ್‌ದೇವ್ ವಿಶ್ವವಿದ್ಯಾಲಯದ ಗ್ರಂಥಾಲಯ ಮಾಹಿತಿ ವಿಜ್ಞಾನ ವಿಭಾಗದ ಪ್ರೊ.ಎಂ.ಪಿ.ಸತೀಜ ಹಾಗೂ ಬೆಂಗಳೂರು ಇಂಡಿಯನ್ ಸ್ಟೇಟಿಸ್ಟಿಕಲ್ ಇನ್ಸ್ಟಿಟ್ಯೂಟ್ (ಐ.ಎಸ್.ಐ) ಡಾಕ್ಯುಮೆಂಟೇಶನ್ ಮತ್ತು ರಿಸರ್ಚ್ ಟ್ರೈನಿಂಗ್ ಸೆಂಟರ್ ಮುಖ್ಯಸ್ಥರಾದ ಡಾ.ಕೃಷ್ಣಮೂರ್ತಿ ಮಾತನಾಡಿ ಸಾಕ್ಷರತೆ, ಓದು ಹಾಗೂ ಸಂಶೋಧನಾ ಪ್ರಬಂಧ, ಬರವಣಿಗೆಯ ಮಹತ್ವ ಬರವಣಿಗೆಯಲ್ಲಿ ಪಾಲಿಸಬೇಕಾದ ನೀತಿ ನಿಯಮಗಳ ಬಗ್ಗೆ ತಾಂತ್ರಿಕ ಉಪನ್ಯಾಸ ನೀಡಿದರು.


ಕಾರ್ಯಾಗಾರವನ್ನು ಪತ್ರಿಕೆಯ ಸಲಹಾ ಸಂಪಾದಕ ಅನಂತಶಯನ ಉದ್ಘಾಟಿಸಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಪ್ರೊ.ಬಿ.ರಾಘವ, ಕಾಲೇಜಿನ ಗ್ರಂಥಾಲಯದ ಡಿಜಿಟಲೀಕರಣ, ಇ–ಬುಕ್ ವ್ಯವಸ್ಥೆ, ಇ.ಲರ್ನಿಂಗ್, ವಿದ್ಯಾರ್ಥಿಗಳಿಗೆ ದೈನಂದಿನ ಬಳಕೆಗೆ ಸುಲಭವಾದ ವ್ಯವಸ್ಥೆಗಳು ಹಾಗೂ ವಿದ್ಯಾರ್ಥಿಗಳಲ್ಲಿ ಓದಿನ ಮಹತ್ವದ ಬಗ್ಗೆ ತಿಳಿದರು. ಇದೇ ಸಂದರ್ಭ ಚರ್ಚೆ ನಡೆಸಿ, ಭಾಗವಹಿಸಿದವರಿಗೆ ಪ್ರಮಾಣ ಪತ್ರ ನೀಡಲಾಯಿತು. ರಾಜ್ಯದ ವಿವಿಧ ಭಾಗಗಳ ಗ್ರಂಥಪಾಲಕರು, ಸ್ಥಳೀಯ ಗ್ರಂಥಪಾಲಕರು ಮತ್ತು ಉಪನ್ಯಾಸಕರು ಸೇರಿ ಒಟ್ಟು 62 ಮಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ, ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಪತ್ರಕರ್ತರು, ಕುಟುಂಬದವರಿಗೆ ಒಳಾಂಗಣ ಕ್ರೀಡಾಕೂಟ

ಮಡಿಕೇರಿ,ಅ.11– ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ 24ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಅ.19ರಂದು ನಗರದ ಪತ್ರಿಕಾ ಭವನದಲ್ಲಿ ಪತ್ರಕರ್ತರು ಮತ್ತು ಅವರ ಕುಟುಂಬಸ್ಥರಿಗೆ ಒಳಾಂಗಣ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ.

ಕ್ರೀಡಾಕೂಟದಲ್ಲಿ ಟೇಬಲ್ ಟೆನ್ನಿಸ್ ಸಿಂಗಲ್ಸ್ ಮತ್ತು ಡಬಲ್ಸ್, ಕೇರಂ ಸಿಂಗಲ್ಸ್ ಮತ್ತು ಡಬಲ್ಸ್ ಮತ್ತು ಚೆಸ್ ಪಂದ್ಯಾವಳಿ ನಡೆಯಲಿದೆ. ಟೇಬಲ್ ಟೆನ್ನಿಸ್, ಕೇರಂ ಸಿಂಗಲ್ಸ್ ಪಂದ್ಯಾವಳಿಗೆ ಹೆಸರು ನೋಂದಾಯಿಸಿಕೊಂಡವರನ್ನು ಡಬಲ್ಸ್ ತಂಡಗಳನ್ನಾಗಿ ಬಳಿಕ ವಿಂಗಡಿಸಿಕೊಳ್ಳಲಾಗುವುದು. ಚೆಸ್ ಪಂದ್ಯಾವಳಿಯನ್ನು 15 ವರ್ಷ ವಯೋಮಿತಿಯ ಒಳಗಿನ ಮತ್ತು ಅದಕ್ಕೆ ಮೇಲ್ಪಟ್ಟ 2 ವಿಭಾಗಗಳಲ್ಲಿ ನಡೆಸಲಾಗುತ್ತದೆ. ಚೆಸ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವವರು ದಯವಿಟ್ಟು ಚೆಸ್ ಬೋರ್ಡ್ ತರಬೇಕು.

ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ

ಸಂವಿಧಾನದ ಮೇಲೆ ನಡೆದ ದಾಳಿ

ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ನಾಚಪ್ಪ ಬೇಸರ


ಎನ್.ಯು.ನಾಚಪ್ಪ

ಮಡಿಕೇರಿ,ಅ.11– ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಪಾದರಕ್ಷೆ ಎಸೆಯಲೆತ್ನಿಸಿದ ಪ್ರಕರಣ ಖಂಡನೀಯ. ಇದು ಸಂವಿಧಾನದ ಮೇಲಿನ ದಾಳಿಯಾಗಿದ್ದು, ಈ ರೀತಿಯ ಘಟನೆಗಳು ನ್ಯಾಯಾಂಗದ ಘನತೆಗೆ ಧಕ್ಕೆ ತರುತ್ತದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ವಕೀಲ ರಾಕೇಶ್ ಕಿಶೋರ್ ಮಾಡಿರುವ ತಪ್ಪನ್ನು ಸ್ವತಃ ವಕೀಲನಾಗಿರುವ ನಾನು ತೀವ್ರವಾಗಿ ಖಂಡಿಸುತ್ತೇನೆ. ಇದು ಕ್ಷಮಿಸಲಾಗದ ಕೃತ್ಯವಾಗಿದೆ ಎಂದು ತಿಳಿಸಿದ್ದಾರೆ.

ಇದು ನಮ್ಮ ದೇಶದ ಪವಿತ್ರ ಸಂವಿಧಾನದ ಮೇಲಿನ ದಾಳಿಯಾಗಿದ್ದು, ಈ ರೀತಿಯ ಬೆಳವಣಿಗೆ ಕಾನೂನು ವ್ಯವಸ್ಥೆಯನ್ನು ಹಾಳು ಮಾಡುತ್ತದೆ. ಶಾಂತಿಯುತ ಹೋರಾಟಗಳು ನ್ಯಾಯಾಂಗ ವ್ಯವಸ್ಥೆ, ಸಂವಿಧಾನದ ಆಶಯ ಮತ್ತು ಪ್ರಜಾಪ್ರಭುತ್ವದ ಶಕ್ತಿಯನ್ನು ಹೆಚ್ಚಿಸುತ್ತದೆ. ಸಂವಿಧಾನದ ಆಶಯಗಳಿಗೆ ಬದ್ಧರಾಗಿರುವ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಬೆಂಬಲಕ್ಕೆ ಸಿಎನ್‌ಸಿ ನಿಲ್ಲಲಿದೆ. ನ್ಯಾಯಾಂಗ ವ್ಯವಸ್ಥೆ ಮತ್ತು ಸಂವಿಧಾನ ಸಂಸ್ಥೆಗಳಲ್ಲಿ ಅಪಾರ ಗೌರವ ಹೊಂದಿದಾಗ ಮಾತ್ರ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢವಾಗಿ ಹಾಗೂ ಶಾಶ್ವತವಾಗಿ ಮುಂದುವರಿಯಲು ಸಾಧ್ಯ ಎಂದು ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಪ್ರತಿಪಾದಿಸಿದ್ದಾರೆ.

ಕೆರೆಹಳ್ಳಿ ಕೆರೆ ನೀರೆತ್ತುವ ಪಂಪ್ 15 ದಿನದಲ್ಲಿ ದುರಸ್ತಿ

ಗುಂಡ್ಲುಪೇಟೆ, ಅ.11– ಕೆರೆಹಳ್ಳಿ ಕೆರೆಯ ಬಳಿ ಇರುವ ಮೋಟರ್ ಪಂಪ್ ದುರಸ್ತಿಯಲ್ಲಿದ್ದು, ಇನ್ನು ಹದಿನೈದು ದಿನಗಳಲ್ಲಿ ಪಂಪ್ ದುರಸ್ತಿ ಪಡಿಸಿ, ಕೆರೆಗಳಿಗೆ ನೀರು ತುಂಬಿಸಲು ಎಲ್ಲಾ ರೀತಿಯ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್ ತಿಳಿಸಿದರು.

ತಾಲೂಕಿನ ಕೆರೆಹಳ್ಳಿ ಕೆರೆ ಹತ್ತಿರದಲ್ಲಿರುವ ನಿರ್ಮಾಣವಾಗಿರುವ ಪಂಪ್‌ಹೌಸ್‌ಗೆ ಇಂದು ಮಧ್ಯಾಹ್ನ ಭೇಟಿ ನೀಡಿ ಪರಿಶೀಲನೆ ಮಾಡಿದ ಅವರು, ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಮಹೇಶ್ ಜೊತೆಗೆ ಸಮಾಲೋಚನೆ ಮಾಡಿದರು. ಕೆರೆಹಳ್ಳಿ ಕೆರೆ ಭರ್ತಿಯಾಗಿದ್ದು, ಅಲ್ಲಿಂದ ತಮ್ಮಡಹಳ್ಳಿ ಕೆರೆಗೆ ನೀರೆತ್ತುವ ಮೋಟರ್ ದುರಸ್ತಿಯಾಗಿದೆ. ಈ ಕಾರಣಕ್ಕೆ ಮುಂದಿನ ಕೆರೆಗಳಿಗೆ ನೀರು ಹರಿಸುವುದು ಕಷ್ಟವಾಗಿದೆ ಎಂದರು.

ಈಗಾಗಲೇ ನೀರಾವರಿ ನಿಗಮದ ಅಧಿಕಾರಿಗಳು ತುರ್ತು ಕ್ರಮ ವಹಿಸಿ, ಮೋಟಾರ್‌ಗಳನ್ನು ಲಿಫ್ಟ್ ಮಾಡಿದ್ದಾರೆ. ಭಾರಿ ಗಾತ್ರದ ಮೋಟರ್‌ಗಳನ್ನು ಲಿಫ್ಟ್ ಮಾಡಲು ಐದು ದಿನ ತೆಗೆದುಕೊಂಡಿದೆ. ಪಂಪ್‌ನಲ್ಲಿರುವ ನ್ಯೂನ್ಯತೆಯನ್ನು ನಮ್ಮ ತಾಂತ್ರಿಕ ತಂಡ ಗಮನಿಸಿ, ಸಫ್ಟ್, ರಿಂಗ್, ಬೂಸ್ ಇತರೇ ಸಲಕರಣೆಗಳು ಸವಕಳಿಯಾಗಿವೆ. ಇವುಗಳನ್ನು ಬದಲಾಯಿಸಿ, ಮತ್ತೇ ಚಲೋ ಮಾಡಬೇಕಾಗಿದೆ. ಈ ದೊಡ್ಡ ಗಾತ್ರದ ಮೋಟರ್‌ಗಳನ್ನು ಪುಣೆಯ ಕಂಪನಿಯೊಂದು ವಿನ್ಯಾಸ ಮಾಡಿದೆ. ಅವರ ಸಲಹೆ, ಮಾರ್ಗದರ್ಶನದಂತೆ ಮೋಟರ್ ಮೇಲ್ಪತ್ತಿ ಪರಿಶೀಲನೆ ಮೈಸೂರಿನಲ್ಲಿ ಸೂಕ್ತವಾದ ಕಂಪನಿಗೆ ಕಳುಹಿಸಿಕೊಡಲಾಗಿದೆ. ಈ ಎಲ್ಲಾ ಪ್ರಕ್ರಿಯೆ ಬಹಳ ವೇಗವಾಗಿ ನಡೆಯುತ್ತಿದೆ ದುರಸ್ತಿಯಾಗುತ್ತಿದ್ದಂತೆ ಕೆರೆಗಳಿಗೆ ನೀರು ತುಂಬಿಸುವ ಪ್ರಕ್ರಿಯೆ ನಿರಂತರವಾಗಿರುತ್ತದೆ ಎಂದು ತಿಳಿಸಿದರು.


ಶಾಸಕ ಗಣೇಶ್‌ಪ್ರಸಾದ್ ಕೆರೆಹಳ್ಳಿ ಕೆರೆ ಪಂಪ್‌ಹೌಸ್‌ಗೆ ಭೇಟಿ ನೀಡಿದ್ದರು.

ರೈತ ಪರ ಮುಖಂಡರು ಕೆರೆಹಳ್ಳಿ, ತಮ್ಮಹಳ್ಳಿಯಲ್ಲಿರುವ ನೀರೆತ್ತುವ ಘಟಕಗಳಿಗೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ಕಾರ್ಯವನ್ನು ಒಮ್ಮೆ ಪರಿಶೀಲನೆ ಮಾಡುವಂತೆ ಶಾಸಕರು ಮನವಿ ಮಾಡಿದರು. ಕೆರೆಗಳಿಗೆ ನೀರು ತುಂಬಿಸಲು ಸರ್ಕಾರ ಹಾಗೂ ಶಾಸಕರ ನಿರಾಸಕ್ತಿ ಎಂದು ಪ್ರತಿಭಟನೆ ಮಾಡುವುದು ಸರಿಯಾದ ಮಾರ್ಗವಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹಗಲು ರಾತ್ರಿ ಎನ್ನದೇ ಕೆಲಸ ಮಾಡುತ್ತಿದ್ದಾರೆ. ಪಂಪ್‌ಗಳ ದುರಸ್ತಿಯಾಗುತ್ತಿರುವುದು ನೈಜ ಕಾರಣವಾಗಿದೆ. ಅದು ಬಿಟ್ಟು ಸರ್ಕಾರ ವಿದ್ಯುತ್ ಬಿಲ್ ಪಾವತಿ ಮಾಡಿಲ್ಲ. ಕೆರೆಗಳಿಗೆ ನೀರು ತುಂಬಿಸಲು ಶಾಸಕರು ನಿರಾಸಕ್ತಿ ಎಂಬ ತಪ್ಪು ಹೇಳಿಕೆಯನ್ನು ನೀಡುತ್ತಿರುವುದು ಸರಿಯಲ್ಲ. ಇನ್ನು ಹದಿನೈದು ದಿನಗಳಲ್ಲಿ ಕೆರೆಗಳಿಗೆ ನೀರು ತುಂಬಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಗಣೇಶ್ ಪ್ರಸಾದ್ ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ಮುಖಂಡರಾದ ಗುರುಬಸಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ರಾಜಕುಮಾರ್, ಮುಖಂಡರಾದ ಸಿದ್ದರಾಜನಾಯಕ, ಕೆರೆಹಳ್ಳಿ ರಾಜೇಂದ್ರಕುಮಾರ್, ಶಂಕರ್ ನಾಗರಾಜಪ್ಪ, ನಾಗರಾಜಯ್ಯ, ಶಿವಣ್ಣ, ಚಿನ್ನಪ್ಪ, ಇತರರು ಇದ್ದರು.

ತಿಂಗಳಲ್ಲಿ 12 ಕಳವು ಪ್ರಕರಣ ಭೇದಿಸಿದ ಜಿಲ್ಲಾ ಪೊಲೀಸರು

ನಗದು, ಚಿನ್ನಾಭರಣ ಸೇರಿ ಒಟ್ಟು 22.23 ಲಕ್ಷ ರೂ. ಮೌಲ್ಯದ ಮಾಲು ವಶ

ಚಾಮರಾಜನಗರ. ಅ.11–ಚಾಮರಾಜನಗರ ಕೊಳ್ಳೇಗಾಲ ಉಪವಿಭಾಗದಲ್ಲಿ 12 ಕಳ್ಳತನ ಪ್ರಕರಣಗಳನ್ನು ಜಿಲ್ಲಾ ಪೊಲೀಸರು ಭೇದಿಸಿದ್ದು, ವಿವಿಧ ಪ್ರಕರಣಗಳಿಂದ 285 ಗ್ರಾಂ ಚಿನ್ನ, 45 ಗ್ರಾಂ ಬೆಳ್ಳಿ, 2 ಓಮ್ನಿಕಾರು, 10 ಬೈಕ್, 55 ಸಾವಿರ ರೂ. ನಗದು ಸೇರಿದಂತೆ 22.23 ಲಕ್ಷ ರೂ. ಮೌಲ್ಯದ ಮಾಲುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಹೇಳಿದರು.

ಗ್ರಾಮಾಂತರ ಠಾಣೆ–2. ಪಟ್ಟಣ ಠಾಣೆ–3 ರಾಮಸಮುದ್ರ ಪೂರ್ವ ಪೊಲೀಸ್ ಠಾಣೆ–1, ಕುದೇರು–1. ಕೊಳ್ಳೇಗಾಲ ಉಪ ವಿಭಾಗದಲ್ಲಿ ಗ್ರಾಮಾಂತರ ಠಾಣೆ–2. ಯಳಂದೂರು–2, ರಾಮಾಪುರ ಠಾಣೆ–1 ಸೇರಿದಂತೆ ಒಟ್ಟು 12 ಕಳ್ಳತನ ಪ್ರಕರಣ ಭೇದಿಸಲಾಗಿದೆ. ಆರೋಪಿಗಳಾದ ಬೆಂಗಳೂರಿನ ಮುಜಾಹಿದ್‌ಖಾನ್, ಆಕಾಶ್, ಸಂತೋಷ್. ಚಂದ್ರು ಯಳಂದೂರು ತಾಲೂಕಿನ ಬಿಆಕಹಳ್ಳಿ ಗ್ರಾಮದ ಪ್ರವೀಣ್‌ಕುಮಾರ್, ಅಮಚವಾಡಿ ಗ್ರಾಮದ ಸಿದ್ದರಾಜು, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ, ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಗ್ರಾಮದ ನಟೇಶ್, ಚಾಮರಾಜ ನಗರ ತಾಲೂಕಿನ ಹೊಂಗನೂರು ಗ್ರಾಮದ ಬಂಗಾರಸ್ವಾಮಿ, ಕಾಗಲವಾಡಿ ಗ್ರಾಮದ ಮುಬಾರಕ್, ಕೆಂಗಾಕಿ ಗ್ರಾಮದ ಕೆ.ವಿ.ವೃಷಭೇಂದ್ರಪ್ಪ ಸೇರಿದಂತೆ 14 ಮಂದಿ ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


12 ಪ್ರಕರಣಗಳಲ್ಲಿ ಆರೋಪಿಗಳಿಂದ ವಶಪಡಿಸಿಕೊಂಡ ಚಿನ್ನಭರಣಗಳೊಂದಿಗೆ ಪೊಲೀಸ್ ತನಿಖಾ ತಂಡ

ಪೂರ್ವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಘರ್ಷಕ್ಕೊಳಗಾದ ಬಾಲಕನಿಗೆ ನೋಟಿಸ್ ಜಾರಿಮಾಡಲಾಗಿದೆ. ಹೊಂಗನೂರು ಗ್ರಾಮದ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಗೋಷ್ಠಿಯಲ್ಲಿ ಕೊಳ್ಳೇಗಾಲ ಡಿವೈಎಸ್‌ಪಿ ಧರ್ಮೇಂದ್ರ, ಚಾಮರಾಜನಗರ ಡಿವೈಎಸ್‌ಪಿ ಎಸ್. ಸ್ನೇಹರಾಜು ಹಾಜರಿದ್ದರು.

ರಾಜ್ಯದಲ್ಲೇ ಅತ್ಯಂತ ಎತ್ತರದ ಹುತಾತ್ಮ ಸ್ಮಾರಕ ಚಾಮರಾಜನಗರದಲ್ಲಿ ನಿರ್ಮಾಣ

ಚಾಮರಾಜನಗರ, ಅ.11– ಸಮಾಜದ ಶಾಂತಿ–ಸುವ್ಯವಸ್ಥೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಹುತಾತ್ಮ ಪೊಲೀಸರ ಸ್ಮರಣಾರ್ಥ ನಗರದ ಸಶಸ್ತ್ರ ಮೀಸಲು ಪಡೆ ಆವರಣದಲ್ಲಿ ಹುತಾತ್ಮ ಸ್ಮಾರಕ ನಿರ್ಮಾಣವಾಗುತ್ತಿದೆ.

ಕ್ಯಾಂಪಾ ಕೋಲಾ ಕಂಪನಿಯ ಸಿಎಸ್‌ಆರ್ ಫಂಡ್ ಹಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ಮಾರಕವು 27 ಅಡಿ ಎತ್ತರವಾಗಿದ್ದು, ಜಗತ್ ಪ್ರಸಿದ್ಧ ಚಾ.ನಗರದ ಗ್ರಾನೈಟ್ ಬಳಸಲಾಗಿದೆ. ಹುಲ್ಲು ಹಾಸು ಹಾಗೂ ತೋಟವೂ ನಿರ್ಮಾಣವಾಗಲಿದೆ. ಜೊತೆಗೆ, ಪೆರೇಡ್ ಮೈದಾನವನ್ನು ನವೀಕರಣ ಮಾಡಲಾಗುತ್ತಿದೆ. ಪೆರೇಡ್ ಗ್ರೌಂಡ್ ಕೂಡ ನವೀಕರಣ ಮಾಡುತ್ತಿರುವುದರಿಂದ ಮೈದಾನದ ಸನಿಹದಲ್ಲೇ ಇರುವ ಶಸ್ತ್ರಾಗಾರದಿಂದ ಬಂದೂಕು ಪಡೆದು ಪರೇಡ್ ನಡೆಸಲು ಅನುಕೂಲ ಆಗಲಿದೆ. ಶಸ್ತ್ರಾಗಾರದಿಂದ ಎಸ್ಪಿ ಕಚೇರಿ ಸಮೀಪದ ಪೊಲೀಸ್ ಪರೇಡ್ ಗ್ರೌಂಡ್‌ಗೆ ತೆರಳಬೇಕಾದ ಅಲೆದಾಟ ತಪ್ಪಲಿದೆ. ವೀರಪ್ಪನ್ ವಿರುದ್ಧ ಪೊಲೀಸರ ಕೆಚ್ಚೆದೆಯ ಬಗ್ಗೆ ಎಸ್ಪಿ ಮಾತನಾಡಿ, ವೀರಪ್ಪನ್ ಕಾಲದಿಂದಲೂ ಇಲ್ಲಿನ ಹಲವು ಪೊಲೀಸರು ಪ್ರಾಣ ತ್ಯಾಗ ಮಾಡಿದ್ದಾರೆ. ಬಹುಶಃ ಇದು ರಾಜ್ಯದಲ್ಲೇ ಅತ್ಯಂತ ಎತ್ತರವೆನಿಸುವ 27 ಅಡಿ ಎತ್ತರದ ಹುತಾತ್ಮ ಸ್ಮಾರಕದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಅದು ಪೂರ್ಣಗೊಂಡು ಅ.21 ರಂದು ಉದ್ಘಾಟನೆಗೊಳ್ಳಲಿದೆ ಎಂದರು. ಇದಿಷ್ಟೇ ಅಲ್ಲದೇ ನಮ್ಮ ಪರೇಡ್ ಮೈದಾನದಲ್ಲಿ ಗಾರ್ಡನ್ ನಿರ್ಮಿಸಲು ಕ್ಯಾಂಪಾ ಕೋಲಾದವರು ಸಹಕಾರ ನೀಡುತ್ತಿದ್ದಾರೆ. ನಮ್ಮ ಪರೇಡ್ ಮೈದಾನ ಸುಂದರ ತಾಣವಾಗಿ ನಿರ್ಮಾಣವಾಗುತ್ತಿದೆ ಎಂದು ಅವರು ಹೇಳಿದರು.


ಚಾಮರಾಜನಗರ ಜಿಲ್ಲಾ ಸಶಸ್ತ್ರ ಪಡೆಗಳ ಮೈದಾನದಲ್ಲಿ ನಿರ್ಮಾಣವಾಗುತ್ತಿರುವ ಪೊಲೀಸ್ ಹುತಾತ್ಮರ ಸ್ಮಾರಕ.

ಯಳಂದೂರು ಪಟ್ಟಣ ಪಂಚಾಯಿತಿಯಿಂದ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳ ಪ್ರವಾಸ


ಪಟ್ಟಣ ಪಂಚಾಯಿತಿ ವತಿಯಿಂದ ಶುಕ್ರವಾರ ಹೊರಟ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳ ಪ್ರವಾಸಕ್ಕೆ ಮುಖ್ಯಾಧಿಕಾರಿ ಮಹೇಶ್ ಕುಮಾರ್ ಚಾಲನೆ ನೀಡಿದರು.

ಯಳಂದೂರು, ಅ.11–ಪಟ್ಟಣ ಪಂಚಾಯಿತಿ ಸದಸ್ಯರು, ಪೌರ ಕಾರ್ಮಿಕರು ಹಾಗೂ ನೌಕರರಿಗೆ ಆಯೋಜಿಸಿರುವ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳ ಪ್ರವಾಸಕ್ಕೆ ಮುಖ್ಯಾಧಿಕಾರಿ ಎಂ.ಪಿ. ಮಹೇಶ್ ಕುಮಾರ್ ಚಾಲನೆ ನೀಡಿದರು.

ಪಟ್ಟಣ ಪಂಚಾಯಿತಿ ಸದಸ್ಯರು, ನೌಕರರು ಹಾಗೂ ಪೌರ ಕಾರ್ಮಿಕರಿಗೆ ಘನತ್ಯಾಜ್ಯ ವಿಲೇವಾರಿ, ಪ್ಲಾಸ್ಟಿಕ್ ತ್ಯಾಜ್ಯ, ಇದರ ಬದಲು ಕಾಗದದ ಬಳಕೆ, ಭೂಮಿಯಲ್ಲಿ ಕರಗುವ ವಸ್ತುಗಳಿಂದ ತಯಾರಿಸಿದ ಕೈಚೀಲಗಳು, ಪರಿಸರಕ್ಕೆ ತ್ಯಾಜ್ಯದಿಂದಾಗುವ ಅಡ್ಡಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಲು ವಿಷನ್ ಫೌಂಡೇಷನ್ ಸಹಯೋಗದೊಂದಿಗೆ 3 ದಿನಗಳ ಮಾಹಿತಿ ಶಿಕ್ಷಣ ಸಂವಹನ ಹಾಗೂ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಪಟ್ಟಣದಿಂದ ಹೊರಟು ಮೈಸೂರಿನಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕ, ಉಡುಪಿಯಲ್ಲಿರುವ ಘಟಕ ಹಾಗೂ ಕಾರಾವಾರದಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಕರೆದೊಯ್ದು ಅಲ್ಲಿ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಲಾಗುತ್ತದೆ. ಕಲುಷಿತ ನೀರಿನ ಸಂಸ್ಕರಣೆ, ಅದರ ಮರುಬಳಕೆ, ಪರಿಸರಕ್ಕೆ ಮಾರಕವಾಗದಂತೆ ಇದನ್ನು ಜಲಮೂಲಗಳಿಗೆ ಬಿಡುವ ಬಗೆ, ಅನುಷ್ಠಾನಕ್ಕೆ ಕೈಕೊಂಡಿರುವ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ಕೊಡಿಸಲಾಗುವುದು ಎಂದು ತಿಳಿಸಿದರು.

ಪಪಂ ಅಧ್ಯಕ್ಷೆ ಲಕ್ಷ್ಮಿಮಲ್ಲು. ಸದಸ್ಯರಾದ ಮಹೇಶ್, ವೈ.ಜಿ. ರಂಗನಾಥ, ಮಹದೇವ, ಮಂಜು, ಪ್ರಭಾವತಿ ರಾಜಶೇಖರ್, ಬಿ.ರವಿ, ಸುಶೀಲಾಪ್ರಕಾಶ್, ಶ್ರೀಕಂತಸ್ವಾಮಿ ಆಹಾರ ನಿರೀಕ್ಷಕ ರಾಘವೇಂದ್ರ, ಪರಶಿವ, ಮಲ್ಲಿಕಾರ್ಜುನ ಸೇರಿದಂತೆ ಪಪಂನ ಸಿಬ್ಬಂದಿ ಹಾಗೂ ಪೌರ ಕಾರ್ಮಿಕರು ಇದ್ದರು.

ಬದನಗುಪ್ಪೆಯಲ್ಲಿ ಪೋಷಣ್ ಅಭಿಯಾನ

ಚಾಮರಾಜನಗರ, ಅ.11– ಆರೋಗ್ಯವಂತ ಮಗುವಿನ ಜನನದಿಂದ ಸದೃಢ ಸಮಾಜ ನಿರ್ಮಾಣವಾಗಲಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್ ತಿಳಿಸಿದ್ದಾರೆ.

ತಾಲೂಕಿನ ಬದನಗುಪ್ಪೆ ಗ್ರಾಮದ ಗಣೇಶ ದೇಗುಲದ ಮುಂಭಾಗ ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಬದನಗುಪ್ಪೆ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಪೋಷಣ್ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ರಕ್ತಹೀನತೆಯಿಂದ ಬಳುತ್ತಿರುವ ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳ ಆರೋಗ್ಯ ಕಾಪಾಡಲು ಪೌಷ್ಠಿಕ ಆಹಾರ ಒದಗಿಸುವುದು ಪೋಷಣ್ ಅಭಿಯಾನದ ಮುಖ್ಯ ಉದ್ದೇಶ ಎಂದು ಹೇಳಿದರು.

ಪ್ರಾಚೀನ ಕಾಲದಲ್ಲಿ ಸತಿ ಸಹಗಮನ ಪದ್ಧತಿ ಇತ್ತು. ಆದರೆ ಈಗ ಬಾಲ್ಯ ವಿವಾಹ ಚಾಲ್ತಿಯಲ್ಲಿದೆ. ಇದನ್ನು ತಡೆಗಟ್ಟಬೇಕಿದ್ದು, ಬಾಲ್ಯ ವಿವಾಹ ಮಾಡಿದರೆ ತಂದೆ–ತಾಯಿ ಜೈಲು ಶಿಕ್ಷೆ ಅನುಭವಿಸುತ್ತಾರೆ. ಹೆಣ್ಣು ಮಕ್ಕಳಿಗೆ ಬೇಗ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವ ಮನೋಭಾವವನ್ನು ಬಿಡಬೇಕು. ಗಂಡು ಮಕ್ಕಳಷ್ಟೇ ಹೆಣ್ಣು ಮಕ್ಕಳು ಬಲಾಢ್ಯರಾಗಿದ್ದಾರೆ ಎಂದರು.

ಜಿಲ್ಲೆಯ ಆಡಳಿತ ವ್ಯವಸ್ಥೆಯ ಪ್ರಮುಖ ಹುದ್ದೆಗಳಲ್ಲಿ ಮಹಿಳಾ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರಂತೆಯೇ ನಿಮ್ಮ ಮನೆಯ ಹೆಣ್ಣು ಮಕ್ಕಳಿಗೆ ಅಧಿಕಾರಿಗಳು ಶಿಕ್ಷಣ ಕೊಡಿಸಬೇಕು. ವಿದ್ಯೆ ಇಲ್ಲದಿದ್ದರೆ ಅರಿವಿಲ್ಲ. ಹಣ, ಆಸ್ತಿ ಸಂಪಾದನೆ ಮಾಡುವ ಬದಲು ಮಕ್ಕಳಿಗೆ ಶಿಕ್ಷಣ ಕೊಡಿಸಿ. ಹೆಣ್ಣು ಮಕ್ಕಳು ದೊಡ್ಡವರಾಗುತ್ತಿದ್ದಂತೆಯೇ ಶಾಲೆ ಬಿಡಿಸಬಾರದು ಎಂದು ತಿಳಿ ಹೇಳಿದರು.

ಇದೇ ವೇಳೆ ಗರ್ಭಿಣಿಯರಿಗೆ ಸೀಮಂತ ಮಾಡಲಾಯಿತು. ಮಕ್ಕಳಿಗೆ ಅನ್ನಪ್ರಾಶನ ಮಾಡಲಾಯಿತು. ಅಕ್ಷರಾಭ್ಯಾಸವನ್ನೂ ಸಹ ನಡೆಸಲಾಯಿತು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶೀಲಾ, ಮೇಲ್ವಿಚಾರಕಿ ಕಲಾವತಿ, ಜಿಲ್ಲಾ ಮಾತೃವಂದನಾ ಸಂಯೋಜಕ ಶಿವಸ್ವಾಮಿ, ಪೋಷಣ್ ಅಭಿಯಾನದ ಸಹಾಯಕ ಸಂಯೋಜಕಿ ಚಾಂದಿನಿ, ಗ್ರಾಪಂ ಅಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷೆ ರಾಜಮ್ಮ, ತಾಪಂ ಮಾಜಿ ಅಧ್ಯಕ್ಷ ಜಿ.ಬಸವಣ್ಣ, ಮಾಜಿ ಅಧ್ಯಕ್ಷ ಎಂ. ಕುಮಾರ್, ಗ್ರಾಪಂ ಸದಸ್ಯರು, ಕಲರ್ ಸ್ಟೋನ್ ಮುಖ್ಯಸ್ಥೆ ಸರಸ್ವತಿ, ಪಾರ್ವತಮ್ಮ, ಜಯಮಾಲ, ಜಯ ಲಕ್ಷ್ಮಿ, ಸುನೀತಾ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತು ಗ್ರಾಮಸ್ಥರು ಇದ್ದರು.

ಮೊಬೈಲ್ ಪತ್ತೆಹಚ್ಚಿದ ಪೊಲೀಸರು


ಮೊಬೈಲನ್ನು ವಾರಸುದಾರರಿಗೆ ಹಿಂದಿರುಗಿಸುತ್ತಿರುವ ಪೊಲೀಸರು.

ಯಳಂದೂರು, ಅ.11–ಯಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳುವಾಗಿದ್ದ ಮೊಬೈಲನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ತಾಲೂಕಿನ ಚಂಗಚಹಳ್ಳಿ ಗ್ರಾಮದ ಎನ್.ಕುಮಾರ್ ಎಂಬುವವರು ಬಸ್ ನಿಲ್ದಾಣದ ಬಳಿ ಶುಕ್ರವಾರ ಮೊಬೈಲ್ ಕಳೆದು ಕೊಂಡಿದ್ದು ದೂರು ದಾಖಲಾಗಿತ್ತು. ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಅಪರಾಧ ಸಿಬ್ಬಂದಿಯವರಾದ ರಾಮಶೆಟ್ಟಿ ಮತ್ತು ದೊಡ್ಡವೀರಶೆಟ್ಟಿರವರು ಮೊಬೈಲನ್ನು ಪತ್ತೆ ಹಚ್ಚಿ ಶನಿವಾರ ವಾರಸುದಾರರಿಗೆ ತಲುಪಿಸಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 12–10–2025

ಮರೆಯಲಾಗದ ಅಂಬಾರಿ ಆನೆಗಳು!

ನಾಡಹಬ್ಬ ದಸರಾ ಮಹೋತ್ಸವಕ್ಕೂ ಗಜಪಡೆಗೂ ಅವಿನಾಭಾವ ಸಂಬಂಧ. ಗಜಪಡೆಯಿಲ್ಲದ ದಸರಾವನ್ನು ಊಹಿಸಲು ಸಾಧ್ಯವಿಲ್ಲ. ನಾಲ್ಕು ಶತಮಾನಗಳ ಇತಿಹಾಸವುಳ್ಳ ದಸರಾ ಮಹೋತ್ಸವದಲ್ಲಿ ಹಲವು ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗಿವೆ. ಅವುಗಳಲ್ಲಿ ಕೆಲವು ಆನೆಗಳು ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿವೆ. ವಿಜಯನಗರ ಸಾಮ್ರಾಜ್ಯ ಪತನದ ಬಳಿಕ ಯದುವಂಶದ ರಾಜ ಒಡೆಯರ್, 1610ರಲ್ಲಿ ಶ್ರೀರಂಗಪಟ್ಟಣದಲ್ಲಿ ದಸರಾ ಮಹೋತ್ಸವ (ಮಹಾನವಮಿ ಆಚರಣೆ) ಆರಂಭಿಸಿದರು. 1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತದ ಕೇಂದ್ರ ಸ್ಥಾನವನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾಯಿಸಿಕೊಂಡ ಬಳಿಕ ಮೈಸೂರು ದಸರಾ ಮೈಸೂರಲ್ಲೇ ಮುಂದುವರೆಯಿತು. ಅಂದಿನಿಂದ ಇಂದಿನವರೆಗೂ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗಿದ ಅನೇಕ ಆನೆಗಳಿದ್ದರೂ, ಕೆಲವೇ ಕೆಲವು ತಮ್ಮ ವಿಶಿಷ್ಟ ವರ್ತನೆ ಸಾಧನೆ ಮೂಲಕ ಜನರ ಪ್ರೀತಿಗೆ ಪಾತ್ರವಾಗಿವೆ. 1870ರಲ್ಲಿ ಚಿನ್ನದ ಅಂಬಾರಿಯನ್ನು ಆನೆ ಮೇಲೆ ಇರಿಸಿ, ಜಂಬೂಸವಾರಿ ಮೆರವಣಿಗೆಯಲ್ಲಿ ಕೊಂಡೊಯ್ಯುವ ಪದ್ಧತಿ ಆರಂಭವಾಗಿದ್ದು, ಅಂದಿನಿಂದ ಇದುವರೆಗೂ ಅಂಬಾರಿ ಹೊತ್ತ ಆನೆಗಳಲ್ಲಿ ಪ್ರಮುಖ 12 ಆನೆಗಳ ಸಾಧನೆ ಶ್ಲಾಘನೀಯ. ಹಾಗಾಗಿ ಅವು ಜನರ ಮನಸ್ಸಲ್ಲಿ ಉಳಿದಿವೆ. ಹಾಗೆಯೇ ಇತಿಹಾಸದಲ್ಲಿ ದಾಖಲಾಗಿ ಮತ್ತೆ ಮತ್ತೆ ನೆನಪಾಗುತ್ತಿವೆ.

ಜವಾಬ್ದಾರಿ ನಿಭಾಯಿಸಿದ ಐದು ಆನೆಗಳು

ಸುದೀರ್ಘ ಅವಧಿಗೆ ಚಿನ್ನದ ಅಂಬಾರಿ ಹೊತ್ತ ಜಯಮಾರ್ತಾಂಡ ತೆರೆಮರೆಗೆ ಸರಿದ ಬಳಿಕ ವಿಜಯಬಹದ್ದೂರ್, ನಂಜುಂಡ, ರಾಮಪ್ರಸಾದ್ ಹಾಗೂ ಮೋತಿಲಾಲ್‌ರಾಜ್ ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದವು.


ಎಂ.ಟಿ.ಯೋಗೇಶ್ ಕುಮಾರ್
ಮೊ: 9880813195

ಜಯಮಾರ್ತಾಂಡ




ಅಂಬಾರಿ ಆನೆಗಳಲ್ಲಿ ಜಯಮಾರ್ತಾಂಡ ಸಾಧನೆ ಶ್ಲಾಘನೀಯ. ಈ ಆನೆ ಮೂರು ತಲೆಮಾರಿನ ರಾಜರುಗಳಾದ ಹತ್ತನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜೇಂದ್ರ ಒಡೆಯರ್ ಅವರನ್ನು ಅಂಬಾರಿಯಲ್ಲಿ ಹೊತ್ತು ಸಾಗಿದ ಕೀರ್ತಿಗೆ ಪಾತ್ರವಾಗಿದೆ. ಪಿರಿಯಾಪಟ್ಟಣದ ಬೆಟ್ಟದಪುರದ ಬಳಿ ಕೃಷ್ಣದೇವರಾಯ ಒಡೆಯರ್ ಕಾಲದಲ್ಲಿ ಖೆಡ್ಡಾ ಆಪರೇಷನ್ ಮೂಲಕ ಜಯಮಾರ್ತಾಂಡನ ಸೆರೆ ಹಿಡಿಯಲಾಗಿತ್ತು. ಚಿನ್ನದ ಅಂಬಾರಿ ಹೊತ್ತ ಮೊಟ್ಟ ಮೊದಲ ಆನೆ ಹೆಗ್ಗಳಿಕೆಗೂ ಪಾತ್ರವಾಗಿದೆ. 1870ರಿಂದ 1915ರವರೆಗೂ ಸತತವಾಗಿ 45 ವರ್ಷ ಚಿನ್ನದ ಅಂಬಾರಿ ಹೊತ್ತು ಅಳಿಸಲಾಗದ ದಾಖಲೆ ಬರೆದಿರುವ ಜಯಮಾರ್ತಾಂಡ, ರಾಜವಂಶಸ್ಥರ ಅಚ್ಚುಮೆಚ್ಚಿನ ಆನೆಯೂ ಆಗಿತ್ತು. ಆ ಕಾರಣದಿಂದ ಅರಮನೆಯ ಮುಖ್ಯ ದ್ವಾರಕ್ಕೆ 'ಜಯಮಾರ್ತಾಂಡ' ಹೆಸರನ್ನು ಇಡಲಾಗಿದ್ದು, ಆ ದ್ವಾರದ ನಾಲ್ಕು ಬದಿಯಲ್ಲೂ ಜಯಮಾರ್ತಾಂಡ ಆನೆ ತಲೆಯನ್ನು ಹೋಲುವಂತೆ ಕಲ್ಲಿನಿಂದ ಕೆತ್ತನೆ ಮಾಡಿದ ಪುತ್ಥಳಿ ಅಳವಡಿಸಲಾಗಿದೆ. ಅಲ್ಲದೆ, ಜಯಮಾರ್ತಾಂಡ ಆನೆಗೆ ಗೌರವ ಸಮರ್ಪಿಸುವ ನಿಟ್ಟಿನಲ್ಲಿ ಪ್ರತಿವರ್ಷವೂ ದಸರಾ ಗಜಪಡೆಗೆ ಜಯಮಾರ್ತಾಂಡ ದ್ವಾರದ ಬಳಿಯೇ ಪೂಜೆ ಸಲ್ಲಿಸಿ, ಬರಮಾಡಿಕೊಳ್ಳುವ ಪದ್ಧತಿ ರೂಢಿಯಲ್ಲಿದೆ.

ಐರಾವತ



ನಂತರದ ವರ್ಷಗಳಲ್ಲಿ ಚಿನ್ನದ ಅಂಬಾರಿ ಹೊತ್ತಿದ್ದ 'ಐರಾವತ' 'ದಿ ಎಲಿಫ್ಯಾಂಟ್ ಬಾಯ್' ಚಲನಚಿತ್ರದಲ್ಲಿ ಅಭಿನಯಿಸುವ ಮೂಲಕ ವಿಶ್ವ ಪ್ರಸಿದ್ಧಿ ಪಡೆದ ಹಾಲಿವುಡ್‌ನಲ್ಲಿ ಹಲವು ಪ್ರಶಸ್ತಿ ಪಡೆದ ಈ ಚಲನಚಿತ್ರದಲ್ಲಿ 'ಐರಾವತ' ಆನೆಯ ಮಾವುತ ಸಾಹು(ಸಾಬು) ನಾಯಕ ನಟನಾಗಿರುವುದು ವಿಶೇಷ. ಇಂದಿಗೂ 'ಐರಾವತ' ಹೆಸರು ಪ್ರಚಲಿತದಲ್ಲಿದೆ.

ಎತ್ತರದ ಆನೆ ಬಿಳಿಗಿರಿ



ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಆನೆಗಳಲ್ಲಿ ಅತೀ ಎತ್ತರದ ಆನೆ ಎಂಬ ಹೆಗ್ಗಳಿಕೆಗೆ 'ಬಿಳಿಗಿರಿ' ಆನೆಯದ್ದಾಗಿದೆ. 11 ರಿಂದ 12 ಅಡಿ ಎತ್ತರ, 7 ಸಾವಿರ ಕೆಜಿ ತೂಕವಿದ್ದ ದೈತ್ಯಾಕಾರದ ಬಿಳಿಗಿರಿ ಜಂಬೂಸವಾರಿ ಮೆರವಣಿಗೆಯಲ್ಲಿ ಕೊನೆ ಅರಸರಾದ ಜಯಚಾಮ ರಾಜೇಂದ್ರ ಒಡೆಯರ್ ಅವರನ್ನು ಹೊತ್ತು ಸಾಗಿದ ಆನೆ ದಾಖಲೆ ಹೊಂದಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದ ಬಳಿಕ ಸರ್ಕಾರದ ವತಿಯಿಂದ ದಸರಾ ಆಚರಿಸಲ್ಪಟ್ಟಾಗ ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂಬಾರಿ ಆರಂಭದಲ್ಲಿ ಭಾರತಾಂಬೆ ಚಿತ್ರ, ನಂತರ ಭುವನೇಶ್ವರಿ ವಿಗ್ರಹ, ಇದೀಗ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿ ಇಟ್ಟು ಮೆರವಣಿಗೆ ಮಾಡುವ ಪದ್ಧತಿ ಅನುಸರಿಸಲಾಗುತ್ತಿದೆ.

ಮೃದು ಸ್ವಭಾವಿ 'ಬಲರಾಮ'




ದ್ರೋಣನ ಅಕಾಲಿಕ ಸಾವಿನಿಂದಾಗಿ ದಸರಾ ಗಜಪಡೆಯ ಸದಸ್ಯನಾಗಿದ್ದ 'ಬಲರಾಮ'ನಿಗೆ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿ ನೀಡಲಾಯಿತು. 1998ರಿಂದ 2011ರವರೆಗೆ ಸತತ 13 ಬಾರಿ ಅಂಬಾರಿ ಹೊತ್ತು ಸಾಗಿದ ಹೆಗ್ಗಳಿಕೆ ಬಲರಾಮನಿಗೆ ದಕ್ಕಿದ್ದು, ಅತೀ ಹೆಚ್ಚು ಬಾರಿ ಅಂಬಾರಿ ಹೊತ್ತು ಸಾಗಿದ ಮೂರನೇ ಆನೆಯೂ ಬಲರಾಮನೇ ಆಗಿದ್ದಾನೆ. 1987ರಲ್ಲಿ ಕೊಡಗಿನ ಕಟ್ಟೆಪುರ ಅರಣ್ಯದಲ್ಲಿ ಸೆರೆ ಹಿಡಿಯಲಾಗಿದ್ದ ಬಲರಾಮ ಅತ್ಯಂತ ಮೃದು ಸ್ವಭಾವಿ. ಶಕ್ತಿಶಾಲಿಯಾದ ಈತನ ಬಲಗಣ್ಣಿಗೆ ಮರದ ಕೊಂಬೆ ಬಡಿದು ದೃಷ್ಟಿ ಕಳೆದುಕೊಂಡಿದ್ದರೂ ದಸರಾ ಮಹೋತ್ಸವದಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿತ್ತು. ಪುಣ್ಯಕೋಟಿಯ ಸಂದೇಶದಂತೆ ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಗುಣ ಬಲರಾಮನದ್ದಾಗಿತ್ತು. ಪುಷ್ಪಾರ್ಚನೆಗೂ ಎರಡು ಗಂಟೆ ಮೊದಲೇ ಅಂಬಾರಿ ಹೊತ್ತು ನಿಲ್ಲುತ್ತಿದ್ದ ಬಲರಾಮ ಸತತ 4–5 ಗಂಟೆಗಳ ಕಾಲ 750 ಕೆಜಿ ಚಿನ್ನದ ಅಂಬಾರಿಯೊಂದಿಗೆ ಗಾದಿ, ನಮ್ದಾ ಸೇರಿ 1100 ಕೆಜಿ ಹೊತ್ತು ನಿಂತು ತನ್ನ ಭುಜಬಲವನ್ನು ಸಾಬೀತು ಮಾಡಿತ್ತು.

ತಲೆ ಬಾಗದ 'ಅರ್ಜುನ'



ಸರ್ಕಾರಿ ನೌಕರರಂತೆ 60 ವರ್ಷ ಮೇಲ್ಪಟ್ಟ ಆನೆಗಳಿಗೆ ನಿವೃತ್ತಿ ನೀಡುವಂತೆ ನ್ಯಾಯಾಲಯದ ಆದೇಶದ ಅನುಸಾರ 2011ರಲ್ಲಿ ಬಲರಾಮನಿಗೆ ವಯೋ ನಿವೃತ್ತಿ ಘೋಷಿಸಿದ ಪರಿಣಾಮ ದೈತ್ಯದೇಹಿ ಅರ್ಜುನನಿಗೆ 2012ರಿಂದ 2019ರವರೆಗೆ ಸತತ 8 ವರ್ಷ ಅಂಬಾರಿ ಹೊರುವ ಜವಾಬ್ದಾರಿ ದೊರೆಯಿತು. ತನ್ನ 35ನೇ ವಯಸ್ಸಿನಲ್ಲಿಯೇ ಬನ್ನಿಮಂಟಪದಿಂದ ಅರಮನೆವರೆಗೆ ಚಿನ್ನದ ಅಂಬಾರಿಯನ್ನು ಹೊತ್ತು ಸಾಗಿದ್ದ 'ಅರ್ಜುನ' ಭರವಸೆ ಮೂಡಿಸಿದ್ದ. 1996 – 97ರಲ್ಲಿ ದೊಡ್ಡಕೆರೆ ಮೈದಾನದಿಂದ ಕಾರಂಜಿಕೆರೆಗೆ ಹೋಗುವ ಮಾರ್ಗದಲ್ಲಿ ಇಳಿಜಾರಿನಲ್ಲಿ ಎಡವಿ ಬಿದ್ದ ಬೇರೊಂದು ಆನೆಯ ಮಾವುತನ ಮೇಲೆ ಅರ್ಜುನ ಕಾಲಿಟ್ಟು, ಅವನ ಸಾವಿಗೆ ಕಾರಣವಾಗಿತ್ತು. ಈ ಕಳಂಕ ಹೊತ್ತುಕೊಂಡ ಕಾರಣ ದಸರಾದಿಂದ ನಿಷೇಧಕ್ಕೆ ಒಳಗಾಗಿತ್ತು. 2006ರಿಂದ ಮತ್ತೆ ದಸರಾ ಗಜಪಡೆಯಲ್ಲಿ ಸ್ಥಾನಗಿಟ್ಟಿಸಿಕೊಂಡ ಅರ್ಜುನ, ಬಲರಾಮನ ನಿವೃತ್ತಿಯ ನಂತರ 2012ರಿಂದ 8 ವರ್ಷ ಅಂಬಾರಿ ಹೊತ್ತು ನಿವೃತ್ತಿಯಾಗಿತ್ತು. 2023ನೇ ಸಾಲಿನ ದಸರಾ ಮಹೋತ್ಸವದಲ್ಲಿ ಮೆರವಣಿಗೆಯ ಮುಂಚೂಣಿಯಲ್ಲಿ ನಿಶಾನೆ ಆನೆಯಾಗಿ ಸಾಗಿ ಅಪಾರ ಜನರ ಪ್ರೀತಿಗೆ ಪಾತ್ರವಾಗಿತ್ತು. 2023ರ ಡಿಸೆಂಬರ್‌ನಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಪುಂಡಾನೆ ದಾಳಿಗೆ ತುತ್ತಾಗಿ ಇಹಲೋಕ ತ್ಯಜಿಸಿತ್ತು.

ದ್ರೋಣ




ದಸರಾ ಆನೆಗಳಲ್ಲಿಯೇ ಅತೀ ಹೆಚ್ಚು ಬಾರಿ ಅಂಬಾರಿ ಹೊತ್ತದಾಖಲೆಯಲ್ಲಿ ಎರಡನೇ ಸ್ಥಾನ ದ್ರೋಣನದ್ದು. ಖೆಡ್ಡ ಆಪರೇಷನ್‌ನಲ್ಲಿ 1971ರಲ್ಲಿ ಕಾಕನಕೋಟೆ ಕಾಡಲ್ಲಿ ಸೆರೆಸಿಕ್ಕ ದ್ರೋಣ 1980ರಿಂದ 1998ರವರೆಗೆ ಸತತ 18 ಬಾರಿ ಚಿನ್ನದ ಅಂಬಾರಿ ಹೊತ್ತಿರುವ ದಾಖಲೆ ಬರೆದಿದೆ. ಈ ದ್ರೋಣ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ ಚಿನ್ನದ ಅಂಬಾರಿ ಹೊತ್ತು, ಮತ್ತೆ ಅರಮನೆವರೆಗೂ ಅಂಬಾರಿಯನ್ನು ಹೊತ್ತು ಸಾಗಿ ಸೈ ಎನಿಸಿಕೊಂಡಿತ್ತು. ಜಂಬೂಸವಾರಿ ಮಾತ್ರವಲ್ಲದೆ, ಹಿಂದಿ ಧಾರವಾಹಿ 'ದಿ ಸೋರ್ಡ್ ಆಫ್ ಟಿಪ್ಪುಸುಲ್ತಾನ್'ನಲ್ಲೂ ಅಭಿನಯಿಸಿದೆ. 1998ರಲ್ಲಿ ವಿದ್ಯುತ್ ತಂತಿ ಮೇಲೆ ಬಿದ್ದಿದ್ದ ಆಲದ ಸೊಪ್ಪನ್ನು ಎಳೆದು ತಿನ್ನಲು ಹೋಗಿ ದ್ರೋಣ ದುರಂತ ಸಾವಿಗೀಡಾಗಿದ್ದ. ನಾಡಿನ ಜನ ಆಗ ಮಮ್ಮಲ ಮರುಗಿದ್ದರು.

ಕೂಂಬಿಂಗ್ ಸ್ಟಾರ್ ಅಭಿಮನ್ಯು



ಅರ್ಜುನನ ನಿವೃತ್ತಿಯಿಂದಾಗಿ 2020ರಿಂದ ಅಂಬಾರಿ ಹೊರುತ್ತಿರುವ ಅಭಿಮನ್ಯು ಈ ಸಾಲಿನ ದಸರಾ ಸೇರಿದಂತೆ 6 ಬಾರಿ ಚಿನ್ನದ ಅಂಬಾರಿ ಹೊರುವ ಸಾಧನೆ ಮಾಡಿದ್ದಾನೆ. ಕಳೆದ 30 ವರ್ಷಕ್ಕೂ ಹೆಚ್ಚು ಸಮಯದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಅನುಭವ ಅಭಿಮನ್ಯುವಿಗಿದೆ. ಹಲವು ವರ್ಷ ಆನೆ ಗಾಡಿಯನ್ನು ಎಳೆದುಕೊಂಡು ಹೋಗುವ ಜವಾಬ್ದಾರಿ ನಿಭಾಯಿಸುತ್ತಿದ್ದ ಅಭಿಮನ್ಯು ನಂತರ ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತಿದ್ದ. ಕೂಂಬಿಂಗ್ ಸ್ಟಾರ್, ಕರ್ನಾಟಕದ ಎಕೆ–47 ಸೇರಿದಂತೆ ಹಲವು ಹೆಸರಿನಿಂದ ಕರೆಯಲ್ಪಡುವ ಅಭಿಮನ್ಯುವಿಗೆ ಈಗ 59 ವರ್ಷ. 2026ರಲ್ಲೂ ಅಂಬಾರಿ ಹೊರುವ ಅವಕಾಶ ದೊರೆಯಬಹುದು ಎಂದು ನಿರೀಕ್ಷಿಸಲಾಗಿದೆ. ಪ್ರಸ್ತುತ ಗಜಪಡೆಯ 10 ಗಂಡಾನೆಗಳಲ್ಲಿ ಬಹುತೇಕ ಆನೆಗಳನ್ನು ಸೆರೆ ಹಿಡಿದಿರುವ ಕೀರ್ತಿ ಅಭಿಮನ್ಯುವಿಗೆ ಸಲ್ಲಲಿದೆ. ಇದೂವರೆಗೆ 150ಕ್ಕೂ ಹೆಚ್ಚು ಕಾಡಾನೆ ಹಾಗೂ 50ಕ್ಕೂ ಹೆಚ್ಚು ಹುಲಿ ಸೆರೆ ಹಿಡಿದು ಸೈ ಎನಿಸಿಕೊಂಡಿದೆ. ಅಭಿಮನ್ಯುವಿನ ಮಾವುತರಾಗಿ ವಸಂತ್ ಹಾಗೂ ಕಾವಾಡಿಯಾಗಿ ರಾಜು ಕಾರ್ಯ ನಿರ್ವಹಿಸುತ್ತಿದ್ದಾರೆ.

ಗಂಧದಗುಡಿಯ 'ರಾಜೇಂದ್ರ'



ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ಆಚರಿಸಿದ ಮೊಟ್ಟ ಮೊದಲ ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊತ್ತ ಆನೆ ಎಂಬ ಹೆಗ್ಗಳಿಕೆಗೆ 'ರಾಜೇಂದ್ರ' ಪಾತ್ರವಾಗಿದೆ. ರಾಜೇಂದ್ರ 1977ರಿಂದ ಸತತ ಮೂರು ವರ್ಷ ಅಂಬಾರಿ ಹೊತ್ತಿತ್ತು. ಈ ಆನೆ ವರನಟ ಡಾ.ರಾಜ್‌ಕುಮಾರ್ ಅಭಿನಯದ 'ಗಂಧದಗುಡಿ' ಚಿತ್ರದಲ್ಲಿ ಅಭಿನಯಿಸಿ ಮೆಚ್ಚುಗೆಗೆ ಪಾತ್ರವಾಗಿದೆ. 'ನಾವಾಡುವ ನುಡಿಯೇ ಕನ್ನಡ ನುಡಿ' ಗೀತೆಯಲ್ಲಿ ಡಾ.ರಾಜ್‌ಕುಮಾರ್ ಅವರು ರಾಜೇಂದ್ರನ ದಂತದ ಮೇಲೆ ಕುಳಿತು ಸಾಗುವ ದೃಶ್ಯ ಇಂದಿಗೂ ಜನರ ಮನದಲ್ಲಿ ಅಚ್ಚಳಿಯದೇ ಉಳಿದಿದೆ.

ವಾರಭವಿಷ್ಯ

12.10.2025 ರಿಂದ 18.10.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕನ್ಯಾ, ಚಂದ್ರ–ಮಿಥುನ, ಕಟಕ, ಸಿಂಹ, ಕುಜ–ತುಲಾ, ಬುಧ–ತುಲಾ, ಗುರು–ಮಿಥುನ, ಕಟಕ, ಶುಕ್ರ–ಕನ್ಯಾ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಈ ವಾರದಲ್ಲಿ ನಿರೀಕ್ಷೆಯಂತೆ ಹಣ ಕೈ ಸೇರಿದರೂ ಪರ್ಸ್ ಖಾಲಿ ಆಗಲು ಕ್ಷಣ ಮಾತ್ರ. ಹಲವರಿಗೆ ಚಂದ್ರಬಲ ಶುಭವಿದ್ದು, ನೂತನ ಉದ್ಯೋಗ ಲಾಭ. ವಿದ್ಯುತ್ ಉಪಕರಣ ಮಾರಾಟಗಾರರಿಗೆ ಅಧಿಕ ಧನಲಾಭ. ಸರ್ಕಾರಿ ನೌಕರರು ಅಪಮಾರ್ಗದಲ್ಲಿ ಹಣ ಸಂಪಾದನೆಗೆ ಆಸೆ ಪಟ್ಟು ಅಪಮಾನ ಹಾಗೂ ಕಾನೂನುಕ್ರಮಕ್ಕೆ ಗುರಿಯಾಗುವರು. ಸಣ್ಣ ಪುಟ್ಟ ಕಾಯಿಲೆ ಕಾಡುವುದು.

ಶ್ರೀ ಸುಬ್ರಮಣ್ಯಸ್ವಾಮಿ ಸೇವೆ. ಶುಭ ಸಂಖ್ಯೆ–5

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಗುರುಜನರ ಮಧ್ಯ ಪ್ರವೇಶದಿಂದ ಕೌಟುಂಬಿಕ ಸಮಸ್ಯೆಗಳು ಪರಿಹಾರವಾಗುತ್ತವೆ. ಆಧ್ಯಾತ್ಮ ವಿಚಾರಗಳಲ್ಲಿ ಒಲವು ತೋರುವಿರಿ. ದಾನ, ಧರ್ಮ ಪ್ರವೃತ್ತಿಯಿಂದ ಮಾನಸಿಕ ಶಾಂತಿ. ಕೈ ಹಾಕಿದ ಕೆಲಸಗಳು ಸುಸೂತ್ರವಾಗಿ ನೆರವೇರುವುದು. 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ' ಉತ್ತಮರ ಒಡನಾಟ ನಿಮಗೂ ಗೌರವ ತರುವುದು. ಮಹಿಳಾಮಣಿಯರು ಮಾಂಗಲ್ಯ ಸರ ಜೋಪಾನ ಮಾಡಿಕೊಳ್ಳಿ.

ಶ್ರೀ ಗುರು ಅಷ್ಟೋತ್ತರ ಪಠಿಸಿ, ಶುಭ ಸಂಖ್ಯೆ–6

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ನಿಮ್ಮ ರಾಶಿಗೆ ಬರುವ ಚಂದ್ರನಿಂದ ನಿಮ್ಮ ಸುತ್ತಮುತ್ತ ಹರ್ಷಪೂರ್ಣ ಘಟನೆಗಳು ಜರುಗುವುದು. ನಿಮ್ಮ ಮನೋಸ್ಥೈರ್ಯವೂ ವೃದ್ಧಿಸಲಿದೆ. ಹತ್ತಿ, ಸಿದ್ಧವಸ್ತ್ರ, ಜವಳಿ ವ್ಯಾಪಾರಗಳು ತೇಜಿಯಾಗಿ ನಡೆಯಲಿದೆ. ವಿದ್ಯಾರ್ಥಿಗಳಿಗೆ ಅವರ ಸಂತುಷ್ಟದಂತೆ ಸಾಧನೆ ಆಗದು. ಅಗ್ನಿ, ವಿದ್ಯುತ್ ಅಪಘಾತಗಳಿಂದ ಎಚ್ಚರವಿರಿ. ವಿಹಾರ ಪ್ರವಾಸಗಳಲ್ಲಿ ಅನಾಹುತಗಳು ಆಗದಂತೆ ಎಚ್ಚರ ವಹಿಸಿ.

ಶ್ರೀ ವಿಷ್ಣುನಾಮ ಆರಾಧನೆ, ಶುಭ ಸಂಖ್ಯೆ–8

ಕಟಕ (ಹೊ,ಹು,ಹೆ,ಡ,ಡಿ,ಡು)

ನಿಮ್ಮ ರಾಶ್ಯಾಧಿಪತಿ ಚಂದ್ರನಿಂದ ಹೊಸ ಮಿತ್ರರ ಪರಿಚಯ. ನೂತನ ವಸ್ತ್ರ, ವಾಹನ ಪ್ರಾಪ್ತಿ. ಶ್ರೀಮತಿಯರ ಶಾಪಿಂಗ್ ಜೋರು. ಪತಿ ದೇವರ ಪರ್ಸ್ ಖಾಲಿ. ಸ್ಥಿರಾಸ್ತಿ ಖರೀದಿಸುವ ಉಮೇದು ಇದ್ದರೆ ದಸ್ತಾವೇಜುಗಳನ್ನು ಸೂಕ್ತ ವಕೀಲರಿಂದ ಪರಿಶೀಲಿಸಿ ಮುಂದುವರಿಯಿರಿ. ಈ ಸಮಯದಲ್ಲಿ ಗೃಹಲಕ್ಷ್ಮಿಯ ಸಲಹೆಯೂ ಸಹಾಯಕ್ಕೆ ಬರಲಿದೆ.

ಶ್ರೀ ದೇವೀ ಖಡ್ಗಮೂಲ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–2

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ವಾರದ ಆದಿಗೆ ಗುರು–ಚಂದ್ರ ಸಂಯೋಗದಿಂದ ಗೃಹ, ನಿವೇಶನ ಖರೀದಿಗೆ ಯೋಜನೆ ತಯಾರು. ನಿರೀಕ್ಷೆಯಂತೆ ಹಣ ಕೈ ಸೇರುವುದು. ಮನಸೋ ಇಚ್ಛೆ ಖರ್ಚು ಮಾಡದಿರಿ. ಇದರಲ್ಲಿ ಶ್ರೀಮತಿಯವರನ್ನು ಖುಷಿಗೊಳಿಸುವ ಪಾಲೂ ಇದೆ. ಅಷ್ಟಮ ಶನಿದೇವನಿರುವ ಕಾರಣ ಇಲ್ಲಸಲ್ಲದ ಕೆಲಸ ಮಾಡಿ ಎಡವಟ್ಟು ಆದೀತು. ಆತುರದ ವಾಹನ ಚಾಲನೆ ತೊಂದರೆಗೆ ಆಹ್ವಾನ.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–3

ಕನ್ಯಾ (ಟೊ,ಪ,ಪಿ,ಪು,ಫ,ಣ,ಠ,ಪೆ,ಪೊ)

ವಾರದ ಆದಿಭಾಗಕ್ಕೆ ಆತ್ಮವಿಶ್ವಾಸದ ಕೊರತೆ ಕಾಡುತ್ತಿದೆ. ಒತ್ತಡದಲ್ಲಿ ಕೆಲಸ ಮಾಡಲು ಅಸಹನೀಯವೆನಿಸುತ್ತದೆ. ಈ ನಡುವೆ ಮನೆಗೆ ಅಪ್ತೇಷ್ಟರ ಆಗಮನದಿಂದ ಮನಸ್ಸು ಪ್ರಫುಲ್ಲವೆನಿಸುವುದು. ಮೀಡಿಯಾ ಮಾಧ್ಯಮದವರಿಗೆ ಸರ್ಕಾರಿ ಗೌರವ ದೊರೆಯುವುದು. ವಾರದ ದ್ವಿತೀಯ ಭಾಗಕ್ಕೆ ಹೋಟೆಲ್, ಕೇಟರಿಂಗ್ ದಂಧೆಯವರಿಗೆ ಬೇಡಿಕೆ ಹಾಗೂ ಧನಾದಾಯ ಹೆಚ್ಚುವುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–9

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ನಿಮ್ಮ ಕುಲಾಚಾರ–ವಿಚಾರಗಳನ್ನು ಪಾಲಿಸುವುದರಿಂದ ಉತ್ತರೋತ್ತರ ಶ್ರೇಯಸ್ಸು ಹಾಗೂ ಅಭಿವೃದ್ಧಿ. ನೂತನ ಗೃಹ ನಿರ್ಮಾಣಕ್ಕೆ ಗುರುಗ್ರಹದ ಪ್ರೇರಣೆ. ಉತ್ತಮ ಭೋಜನ, ಸಮಾನ ಮನಸ್ಸಿನ ಸ್ತ್ರೀಯರ ಜೊತೆ ಸಮಾಗಮ. ಮನೆಯಲ್ಲಿ ದೇವತಾ ಕಾರ್ಯಗಳು ನಡೆದೀತು. ರಾಹು ಉತ್ತಮನಿಲ್ಲ. ವಿಷಾಹಾರ ಸೇವನೆಯಿಂದ ವೈದ್ಯರ ಭೇಟಿಯಾದೀತು. ಸ್ವಚ್ಛತೆ ಕಾಯ್ದುಕೊಳ್ಳಿ.

ಶ್ರೀ ಧನ್ವಂತರಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಸಪ್ತಾಹದ ಆರಂಭಕ್ಕೆ ಹಸನ್ಮುಖ ಚಂದ್ರ ನಿಮ್ಮ ಬಾಳಲ್ಲಿ ಸುಖ, ಸಂತೋಷ, ಮನೋವಾಂಛಿತ ವಸ್ತು, ವೈಭೋಗಗಳನ್ನು ನೀಡಲಿದ್ದಾನೆ. ಮನೆಯಲ್ಲಿ ಸಂತಸದ ವಾತಾವರಣ, 'ಕೂಡಿ ಬಾಳಿದರೆ ಸ್ವರ್ಗ ಸುಖ'. ಗುರು–ಚಂದ್ರ ಸಂಯೋಗದಿಂದ ತಡವಾಗಿದ್ದ ಮುಖ್ಯ ಕೆಲಸಗಳು ತ್ವರಿತಗತಿಯನ್ನು ಪಡೆದುಕೊಳ್ಳಲಿದೆ. ಹೊಸ ಜವಾಬ್ದಾರಿ ದೊರೆತು ಹಿರಿಯರಿಂದ ಪ್ರಶಂಸೆ.

ಶ್ರೀ ದತ್ತರಾಜ ಪೂಜೆ. ಶುಭ ಸಂಖ್ಯೆ–7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ನಿಮ್ಮ ಅವಿರತ ಶ್ರಮಕ್ಕೆ ಫಲ ದೊರೆಯುವ ಸಮಯ ಬಂದಿದೆ. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಆಸ್ತಿ ವಿವಾದಗಳೂ ಸುಖಾಂತ್ಯವನ್ನು ಕಾಣುವುದು. 'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ' ಎಂಬ ದಾಸರ ಪದದಂತೆ ಮುಂದೆ ಸಾಗಿ. ಚತುರ್ಥ ಶನಿಯ ಕಾರಣ ನಿಮ್ಮ ಸಮಾಜಿಕ ಜೀವನದಲ್ಲಿ ಪ್ರತಿಸ್ಪರ್ಧಿಗಳು ಅಡಚಣೆಯನ್ನು ಉಂಟು ಮಾಡುವರು.

ಶ್ರೀ ಸಾಯಿಬಾಬಾ ಪ್ರಾರ್ಥನೆ. ಶುಭ ಸಂಖ್ಯೆ–3

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ವಾರದ ಪೂರ್ವಾರ್ಧದಲ್ಲಿ ಐಷಾರಾಮಿ ವಸ್ತುಗಳ ಖರೀದಿ. ಹೊಸ ಗೆಳೆಯ–ಗೆಳತಿಯರ ಸಂಪರ್ಕ. ವಿಶಿಷ್ಟ ವ್ಯಕ್ತಿಗಳ ಭೇಟಿಯಿಂದ ಭವಿಷ್ಯದ ಜೀವನ ಉಜ್ವಲವಾಗಲಿದೆ. ಮನೆಯ ಹೊರಗೆ ಸಮಸ್ಯೆಗಳು ಎದುರಾದರೂ ಬುದ್ಧಿಕುಶಲತೆಯಿಂದ ಪರಿಹರಿಸಿಕೊಳ್ಳುವಿರಿ. ರಾಹು–ಕೇತುಗಳು ಅಶುಭರಿದ್ದು, ಸ್ತ್ರೀಯರು ತಮ್ಮ ಮಾಂಗಲ್ಯ ಸರ ರಕ್ಷಣೆ ಮಾಡಿಕೊಳ್ಳುವುದು ಮುಖ್ಯ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಸಾಡೇಸಾತಿ ಶನಿಯ ಹೊರತಾಗಿಯೂ ನೀವು ಕೈ ಹಾಕಿದ ಕೆಲಸಗಳು ಸುಖಕರವಾಗಿ ಸಂಪನ್ನವಾಗುವುದು. ಸತಿ–ಸುತರ ಸಲಹೆ, ಸಹಕಾರಗಳೂ ದೊರೆಯಲಿದೆ. ಐಟಿ ಬಿಟಿ ಉದ್ಯೋಗಿಗಳಿಗೆ ಕಂಪನಿಯಿಂದ ವಿದೇಶಕ್ಕೆ ಹೋಗುವ ಆಹ್ವಾನ ದೊರೆಯಬಹುದು. ಕಂಟ್ರಾಕ್ಟರುಗಳು, ಇಂಜಿನಿಯರುಗಳಿಗೆ ಗಣನೀಯ ಯೋಜನೆಗಳು ದೊರೆಯುವುದು. ನಿಮ್ಮ ಆರೋಗ್ಯದ ಕಡೆ ಗಮನ ನೀಡಿ.

ಶ್ರೀ ಅಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–1

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ವಾರದ ಆರಂಭಕ್ಕೆ ಹಿತ ಶತ್ರುಗಳ ಕಾಟ. ಸಾಲದ ಜಾಲದಲ್ಲಿ ಬೀಳುವ ಸಾಧ್ಯತೆ. ಗುರು ಹಿರಿಯರು ಹಾಗೂ ನಿಕಟವರ್ತಿಗಳು ನೆರವು ನೀಡುವರು. ಗೃಹ ಕಲಹಗಳು ಬೀದಿಗೆ ಬರದಂತೆ ಎಚ್ಚರ ವಹಿಸಿ. ಆರೋಗ್ಯ ಕೆಟ್ಟು ವೈದ್ಯರ ಭೇಟಿ ಅನಿವಾರ್ಯವಾಗಬಹುದು. ಸಮಾಜಘಾತುಕ ಜನರ ಸಂಪರ್ಕದಿಂದ ಅಪಖ್ಯಾತಿಗೆ ಗುರಿಯಾಗುವಿರಿ. ಕರುಳು ಬೇನೆ ಕಾಡಬಹುದು.

ಶ್ರೀ ಗುರುರಾಯರ ಅರ್ಚನೆ. ಶುಭ ಸಂಖ್ಯೆ–8

ಮೈಸೂರು ಮಿತ್ರ

ಭಾನುವಾರ 12 ಅಕ್ಟೋಬರ್ 2025

ಸುಪ್ರೀಂಕೋರ್ಟ್ ನ್ಯಾಯಮೂರ್ತಿಗೆ ಅಪಮಾನ ಖಂಡಿಸಿ ಪಂಜಿನ ಮೆರವಣಿಗೆ

ತಿ.ನರಸೀಪುರದಲ್ಲಿ ಪ್ರತಿಕೃತಿ ದಹಿಸಿ ಕಿಡಿಗೇಡಿಗಳ ವಿರುದ್ಧ ಆಕ್ರೋಶ



ದಸಂಸ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಪಂಜಿನ ಮೆರವಣಿಗೆ ನಡೆಸಿದರು.

ತಿ.ನರಸೀಪುರ, ಆ.11– ಸರ್ವೋಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳನ್ನು ಅಪಮಾನಿಸಿರುವ ವಕೀಲ ರಾಕೇಶ್ ಕಿಶೋರನನ್ನು ದೇಶ ದ್ರೋಹ ಕಾಯ್ದೆಯಡಿ ಬಂಧಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಮತ್ತು ಮುಖಂಡರು ಪಟ್ಟಣದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಖಾಸಗಿ ಬಸ್ ನಿಲ್ದಾಣದ ಮುಂಭಾಗ ಜಮಾವಣೆಗೊಂಡಿದ್ದ ದಸಂಸ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಪಂಜುಗಳಿಗೆ ಆಕ್ರೋಶದ ಕಿಚ್ಚನ್ನು ಹೊತ್ತಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಿಜೆ ಅವರ ಮೇಲೆ ಶೂ ಎಸೆಯಲೆತ್ನಿಸಿದ ಹಾಗೂ ಮಧ್ಯಪ್ರದೇಶದಲ್ಲಿ ಅಂಬೇಡ್ಕರ್ ಕುರಿತು ಹಗುರವಾಗಿ ಮಾತನಾಡಿರುವ ವಕೀಲರು ಮತ್ತು ವಕೀಲರ ಕಾನೂನು ಬಾಹಿರ ಕೃತ್ಯವನ್ನು ಸಮರ್ಥಿಸಿರುವ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿ, ಮೂವರ ಮೇಲೂ ಕಠಿಣ ಕಾನೂನು ಕ್ರಮಕ್ಕೆ ಆಗಮಿಸಿ ಪ್ರತಿಭಟನಾ ಮೆರವಣಿಗೆ ಆರಂಭಿಸಿದರು.

ವೃತ್ತದಲ್ಲಿ ಮೂವರ ಭಾವಚಿತ್ರಗಳನ್ನು ದಹಿಸಿ, ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಕಾಲೇಜು ರಸ್ತೆಯ ಮಾರ್ಗವಾಗಿ ತಾಲೂಕು ಕಚೇರಿ ಮುಂಭಾಗವಿರುವ ಅಂಬೇಡ್ಕರ್ ಪುತ್ಥಳಿಯ ಬಳಿ, ಮೆರವಣಿಗೆ ಸಮಾಪ್ತಿಗೊಳಿಸಿದರು. ಮೆರವಣಿಗೆಂಯು ಉದ್ದಕ್ಕೂ ದೇಶದಲ್ಲಿ ಕೋಮುವಾದಿ ಮನಸ್ಥಿತಿಯ ಹಿನ್ನೆಲೆಯುಳ್ಳ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವುದರಿಂದ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ಅಸಹನೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿರುವ ಕಿಡಿಗೇಡಿಗಳಿಗೆ ಕೇಂದ್ರ ಸರ್ಕಾರವೇ ಕುಮ್ಮಕ್ಕು ನೀಡುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಆಲಗೂಡು ಶಿವಕುಮಾರ್ ಮಾತನಾಡಿ ಸ್ಪೃಶ್ಯ–ಅಸ್ಪೃಶ್ಯತೆ, ಮಡಿ–ಮೈಲಿಗೆ, ಅಸಮಾನತೆ, ಜಾತೀಯತೆ, ಕೋಮು ಭಾವನೆ, ತಾರತಮ್ಯ ನೀತಿಗಳನ್ನೇ ತನ್ನ ಉಸಿರಾಗಿಸಿಕೊಂಡು ಸದಾ ಜಾತಿ–ಜಾತಿಗಳ ನಡುವೆ ಧರ್ಮ–ಧರ್ಮಗಳ ನಡುವೆ ಜಗಳ ತಂದಿಟ್ಟು ಲಾಭ ಮಾಡಿಕೊಂಡು ನಿರಂತರವಾಗಿ ಆಳುವ ವರ್ಗವಾಗಿ ಆಧಿಪತ್ಯ ಸ್ಥಾಪಿಸಿಕೊಂಡಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ (RSS) ಈಗ 100 ವರ್ಷ ತುಂಬಿದೆಯಂತೆ.!! ಈ ಶತಮಾನೋತ್ಸವದ ಉನ್ಮಾದ ಸ್ಥಿತಿಯಲ್ಲಿರುವ ಕೋಮುವಾದಿಗಳು ಇಂಥ ಶೂ ಎಸೆತದಂತ ಅವಾಂತರಗಳು ಹಾಗೂ "ಸಂವಿಧಾನ– ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವಂತಹ ಜಾತಿ ಗಲಭೆ– ಕೋಮುಗಲಭೆಗಳನ್ನು ಸೃಷ್ಟಿಸಿ ಭಾರತದ ಸಾರ್ವಭೌಮತ್ವಕ್ಕೆ ಸವಾಲು ಒಡ್ಡುವ ಕುಕೃತ್ಯದಲ್ಲಿ ತೊಡಗುವ ಅಪಾಯವಿದ್ದೇ ಇದೆ ಎಂದರು.

ಜಿಲ್ಲಾ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿರುವ ಗೌರವಾನ್ವಿತ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಮತಾಂಧ ಸನಾತನಿ ವಕೀಲ ನೊಬ್ಬ ಶೂ ಎಸೆದು ಅಪಮಾನ ಮಾಡಿರುವ ದುರ್ಘಟನೆಯನ್ನು ದಲಿತ ಸಂಘರ್ಷ ಸಮಿತಿಗಳ ಒಕ್ಕೂಟವು ತೀವ್ರವಾಗಿ ಖಂಡಿಸುತ್ತದೆ ಎಂದರು.

ಪ್ರತಿಭಟನೆಯಲ್ಲಿ ತಾಲೂಕು ಸಂಚಾಲಕ ಯಾಚೇನಹಳ್ಳಿ ಸೋಮಶೇಖರ್, ದಲಿತ ಸಂಘರ್ಷ ಸಮಿತಿ (ಬಣರಹಿತ)ಯ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ, ಮುಖಂಡರಾದ ಕೇತುಪುರ ಶಿವಪ್ರಕಾಶ್, ಸೋಸಲೆ ನಂಜುಂಡಸ್ವಾಮಿ, ಕಿರಗಸೂರು ರಜನಿ, ಬನ್ನಹಳ್ಳಿಹುಂಡಿ ಉಮೇಶ, ಆಲ ಗೂಡು ನಾಗರಾಜ್ ಮೂರ್ತಿ, ಶಾಂತ ಕುಮಾರ್, ರವಿಚಂದ್ರ, ವಾಟಾಳ್ ನಾಗರಾಜ್, ಕೃಷ್ಣ ಮೂರ್ತಿ, ಉಕ್ಕಲಗೆರೆ ರವಿ ಕುಮಾರ್, ತುಂಬಲ ಸಿದ್ದರಾಜು, ಮಹ ದೇವಸ್ವಾಮಿ, ಕೆಂಪನಪುರ ಮಂಟಯ್ಯ, ಹೊಸಪುರ ಸೋಮಶೇಖರ್, ಬಿಲಗೆರೆ ಹುಂಡಿ ಶಿವ ಕುಮಾರ್, ಚಂದಳ್ಳಿಮಲ್ಲೇಶ್, ಸಿ.ಬಿ.ಹುಂಡಿ ನಾಗೇಶ್, ಯಡದೊರೆ ನಾರಾಯಣ, ಚಿಕ್ಕ ಲಕ್ಷ್ಮೀಪುರ ಲಿಂಗರಾಜು, ಇಂಡವಾಳು ನಾಗರಾಜು, ಸುಜ್ಜಲೂರು ಶಿವಯ್ಯ, ಕೇತಹಳ್ಳಿ ಪ್ರಶಾಂತ್, ಮಾದಪುರ ಉಮೇಶ್, ದಾಸೌಡನ ಕೊಪ್ಪಲು ಬಸವರಾಜು. ಕನ್ನಹಳ್ಳಿ ಶಶಿ ಕುಮಾರ್, ಸಂಪತ್ತು ಕುಮಾರ್, ಯಡದೊರೆ ನಾರಾಯಣ, ರಾಜು, ಕಟ್ಟೆಹುಂಡಿ ಆನಂದ್ ಹಾಗೂ ಇತರರು ಇದ್ದರು.

ಶ್ರೀವಾಲ್ಮೀಕಿ ಭಾವಚಿತ್ರದ ಹೂವಿನ ಪಲ್ಲಕ್ಕಿ ಮೆರವಣಿಗೆ



ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಮೂಗೂರಿನ ಹೂವಿನ ಬೀದಿ ನಾಯಕರ ಸಮುದಾಯದಿಂದ ಶ್ರೀವಾಲ್ಮೀಕಿ ಭಾವಚಿತ್ರದ ಹೂವಿನ ಪಲ್ಲಕ್ಕಿ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಗ್ರಾಮದ ಹಿರಿಯ ಮುಖಂಡರು ಹಾಗೂ ಎಂ.ಡಿ.ಬಸವರಾಜು ಅಭಿಮಾನಿ ಬಳಗದ ಪದಾಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಅಂಗನವಾಡಿ ಹಬ್ಬ ಕಾರ್ಯಕ್ರಮ



ಅಂಗನವಾಡಿ ಹಬ್ಬ ಕಾರ್ಯಕ್ರಮವನ್ನು ಸಿಡಿಪಿಓ ದೀಪ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ: ಅಂಗನವಾಡಿಗಳಲ್ಲಿ ಶಾಲಾ ಪೂರ್ವ ಶಿಕ್ಷಣದ ಪ್ರಾಮುಖ್ಯತೆಯನ್ನು ಸಮುದಾಯಕ್ಕೆ ತಿಳಿಸುವ ಸಲುವಾಗಿ ಹಾಗೂ ಆರಂಭಿಕ ಬಾಲ್ಯ ಶಿಕ್ಷಣದ ಗುಣಮಟ್ಟವನ್ನು ಬಲಪಡಿಸಲು ಸಮುದಾಯದ ಪಾತ್ರ ಬಹುಮುಖ್ಯ ಎಂದು ಸಿಡಿಪಿಓ ದೀಪ ತಿಳಿಸಿದರು.

ತಾಲೂಕಿನ ತುಂಬಸೋಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಕ್ಕಳ ಜಾಗೃತಿ ಸಂಸ್ಥೆ, ತುಂಬಸೋಗೆ ಗ್ರಾಪಂ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹೆಚ್‌ಸಿಎಲ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಸರಗೂರು ವೃತ್ತದ ಅಂಗನವಾಡಿ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂಗನವಾಡಿ ಹಬ್ಬದ ಕಾರ್ಯಕ್ರಮಗಳು ಆರು ತಿಂಗಳಿಗೊಮ್ಮೆ ಪ್ರತಿಯೊಂದು ಗ್ರಾಪಂ ಮಟ್ಟದಲ್ಲೂ ನಡೆಯಬೇಕು. ಇದರಿಂದ ಮಕ್ಕಳಿಗೆ ಹಾಗೂ ಪೋಷಕರಿಗೆ ಒಂದು ಅರಿವು ಉಂಟಾಗುತ್ತದೆ ಹಾಗೂ ಎಲ್ಲಾ ಕ್ಷೇತ್ರದ ಬೆಳವಣಿಗೆಗಳು ಸಾಧ್ಯವಾಗುತ್ತದೆ. ಮಕ್ಕಳ ಜಾಗೃತಿ ಸಂಸ್ಥೆಯು ಒಂದು ಉತ್ತಮ ಕಾರ್ಯಕ್ರಮವನ್ನು ಮಾಡುತ್ತಾ ಬಂದಿದೆ ಎಂದು ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಮಕ್ಕಳಲ್ಲಿ ಪ್ರಮುಖವಾಗಿ ಆಗುವ ದೈಹಿಕ, ಮಾತು ಮತ್ತು ಭಾಷೆ, ಬೌದ್ಧಿಕ, ಸಾಮಾಜಿಕ ಹಾಗೂ ಭಾವನಾತ್ಮಕ ಬೆಳವಣಿಗೆಗಳು, ಪೋಷಣೆ, ಪೋಷಕರಿಗೆ ಕ್ರಿಯಾತ್ಮಕ ಆಟಗಳ ಸ್ಟಾಲ್‌ಗಳನ್ನು ಆಯೋಜಿಸಲಾಗಿತ್ತು ಪ್ರತಿಯೊಂದು ಸ್ಟಾಲ್‌ನಲ್ಲೂ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಪೋಸ್ಟರ್‌ಗಳನ್ನೂ ಶಿಕ್ಷಕಿಯರು, ಮಕ್ಕಳ ಜಾಗೃತಿ ಸಂಸ್ಥೆಯ ಸಂಯೋಜಕ ರೊಡಗೂಡಿ ಪೋಷಕರಿಗೆ ವಿವರಿಸಿದರು ಮತ್ತು ಮಕ್ಕಳಿಗೆ, ಪೋಷಕರಿಗೆ ಚಟುವಟಿಕೆ ಗಳನ್ನು ಮಾಡಿಸಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು, ಮಮತಾ, ಪಿಡಿಓ ರವಿ, ಮಹಿಳಾ ತಾಲೂಕು ಆರೋಗ್ಯ ಅಧಿಕಾರಿ ರವಿ, ಅಂಗನವಾಡಿ ಮೇಲ್ವಿಚಾರಕಿ ರಜಿತಾ, ಸುಮಾ ತುಂಬಸೋಗೆ ಹಾಜರಿದ್ದರು.

ಮೋದಿಯವರಿಂದ ಆತ್ಮ ನಿರ್ಭರತೆಯ ಸಾಧನೆ ಯಶಸ್ಸು



ಜಿಲ್ಲಾ ಸಹ ಸಂಚಾಲಕರಾದ ಶರತ್ ಪುಟ್ಟಬುದ್ಧಿ ಮಾತನಾಡಿದರು.

ತಿ.ನರಸೀಪುರ ಆ.11– ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲ ಸಾಮಾಜಿಕ ಕ್ಷೇತ್ರಗಳಲ್ಲಿ ಸ್ವಾವಲಂಬನೆಯ ಪರಿಕಲ್ಪನೆಯನ್ನು ನನಸು ಮಾಡುತ್ತಾ ಬಂದಿದ್ದಾರೆ ಎಂದು ವರುಣ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ತಿಳಿಸಿದರು.

ವರುಣ ವಿಧಾನಸಭಾ ಕ್ಷೇತ್ರದ ಚಿಕ್ಕಹಳ್ಳಿ ದೊಡ್ಡ ಆಲದ ಮರದ ಸಮೀಪ ಇರುವ ಮೈಸೆಮ್ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ವರುಣ ವಿಧಾನ ಸಭಾ ಕ್ಷೇತ್ರದ ಆತ್ಮನಿರ್ಭರ ಭಾರತ ಕಾರ್ಯಾಗಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆತ್ಮನಿರ್ಭರತೆಗಾಗಿ ಮೋದಿ ಅವರು ನೀಡಿದ ಕರೆಯಿಂದಾಗಿ ದೇಶಾದ್ಯಂತ ವಿವಿಧ ಕ್ಷೇತ್ರಗಳಲ್ಲಿ ಆತ್ಮ ನಿರ್ಭರತೆಯ ಸಾಧನೆಯ ಯಶಸ್ಸು ವಿಶ್ವದಾದ್ಯಂತ ಪ್ರತಿಧ್ವನಿಸುತ್ತಿದೆ ಎಂದು ಹೇಳಿದರು.

ಮುಖ್ಯ ಭಾಷಣಕಾರರಾಗಿ ಆತ್ಮ ನಿರ್ಭರ ಭಾರತ ಸಂಕಲ್ಪ ಅಭಿಯಾನದ ಜಿಲ್ಲಾ ಸಹ ಸಂಚಾಲಕರಾದ ಶರತ್ ಪುಟ್ಟಬುದ್ಧಿ ಮಾತನಾಡಿ, ದೇಶದ ಪ್ರತಿಯೊಬ್ಬ ನಾಗರಿಕರೂ ಸಹ ಸ್ವದೇಶಿ ಉತ್ಪನ್ನಗಳ ಬಳಕೆ, ಸ್ವದೇಶಿ ನೀತಿಯ ಆಧಾರದ ಮೇಲೆ ಸಾಮಾಜಿಕ ಜೀವನವನ್ನು ರೂಢಿಸಿಕೊಳ್ಳುವ ಪ್ರತಿಜ್ಞೆಯನ್ನು "ಆತ್ಮನಿರ್ಭರ ಭಾರತ ಸಂಕಲ್ಪ ಅಭಿಯಾನದ" ಮೂಲಕ ಕೈಗೊಳ್ಳಬೇಕೆಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಸೂಚಿಸಿ ರುವದನ್ನು ಪಕ್ಷದ ಕಾರ್ಯಕರ್ತರಿಗೆ ತಿಳಿಸಿದರು. ಕೊನೆಯಲ್ಲಿ ಶರತ್ ಪುಟ್ಟಬುದ್ಧಿಯವರು ನೆರೆದಿದ್ದ ಎಲ್ಲ ಪಕ್ಷದ ಮುಖಂ ಡರಿಗೂ ಮತ್ತು ಕಾರ್ಯಕರ್ತರಿಗೂ ಆತ್ಮ ನಿರ್ಭರ ಭಾರತ ಪ್ರತಿಜ್ಞಾ ವಿಧಿಯನ್ನು ಭೋದಿಸಿದರು.

ಸಭೆಯಲ್ಲಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಜಿಲ್ಲಾ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಸದಾನಂದ, ಗುರುಸ್ವಾಮಿ, ಕೀಳನಪುರ ಮಾದಪ್ಪ, ಹದಿನಾರು ನಂಜುಂಡಸ್ವಾಮಿ, ಕೂಡನಹಳ್ಳಿ ಶಂಕರ್, ದಂಡೀಕೆರೆ ಶ್ರೀಧರ್, ಅಲಗಂಚಿ ಶಿವಯ್ಯ, ವರುಣ ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮೀ, ಗುರುಮೂರ್ತಿ, ನರಸಿಂಹ ನಾಯಕ, ಗಾಪಂ ಸದಸ್ಯರು, ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಇಂದು ಕೆ.ಆರ್.ನಗರದಲ್ಲಿ ದೊಡ್ಡಸ್ವಾಮೇಗೌಡರ ಹುಟ್ಟುಹಬ್ಬ

ಕೆ.ಆರ್.ನಗರ: ಎಂಡಿಸಿಸಿ ಬ್ಯಾಂಕ್ ನಿರ್ದೇಶಕರು ಹಾಗೂ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯರಾದ ದೊಡ್ಡಸ್ವಾಮೇಗೌಡರ 75ನೇ ಜನ್ಮ ದಿನೋತ್ಸವ ಪ್ರಯುಕ್ತ ಪಟ್ಟಣದ ಬಯಲು ರಂಗಮಂದಿರದಲ್ಲಿ ಭಾನುವಾರ(ಅ.12) ಆರೋಗ್ಯ ತಪಾಸಣಾ ಶಿಬಿರ ಹಾಗೂ ಬೃಹತ್ ಉದ್ಯೋಗ ಮೇಳವನ್ನು ವಿವಿಧ ಮಠಾಧೀಶರ ಸಮ್ಮುಖದಲ್ಲಿ ಆಯೋಜಿಸಲಾಗಿದೆ ಎಂದು ದೊಡ್ಡಸ್ವಾಮೇಗೌಡರ ಪುತ್ರರಾದ ಶಾಸಕ.ಡಿ.ರವಿಶಂಕರ್ ತಿಳಿಸಿದರು.

ಆರೋಗ್ಯ ತಪಾಸಣಾ ಶಿಬಿರ ಹಾಗೂ ಉದ್ಯೋಗ ಮೇಳದ ಬೃಹತ್ ವೇದಿಕೆಯನ್ನು ಪರಿಶೀಲನೆ ನಡೆಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ನಟರಾಜಸ್ವಾಮಿ, ಶ್ರೀ ಗುರುಲಿಂದ ಜಂಗಮ ಮಠ ಗಾವಡಗೆರೆ, ಶ್ರೀ ಶಂಕರ ಭಾರತಿ ಮಠ ಸ್ವಾಮೀಜಿ, ಎಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಕೆ.ಆರ್.ನಗರ, ಡಾ. ಶ್ರೀ ಶಿವಾನಂದಪುರಿ ಮಹಾಸ್ವಾಮಿಗಳು, ಶ್ರೀ ಕನಕ ಗುರುಪೀಠ ಮಹಾ ಸಂಸ್ಥಾನ ಮೈಸೂರು ವಿಭಾಗ, ಮೈಸೂರಿನ ಉರಿಲಿಂಗ ಪೆದ್ದಿಮಠದ ಪೀಠಾಧಿಪತಿ ಶ್ರೀ ಜ್ಞಾನಪ್ರಕಾಶ ಸ್ವಾಮಿಜಿ ಸೇರಿದಂತೆ ಗಣ್ಯರು ಭಾಗವಹಿಸುವರು ಎಂದು ಅವರು ತಿಳಿಸಿದರು.

ಕೆ.ಆರ್.ನಗರದಲ್ಲಿ ಅ.14ಕ್ಕೆ ಜನಜಾಗೃತಿ ಸಮಾವೇಶ

ಕೆ.ಆರ್.ನಗರ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ, ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಸಂಯಕ್ತ ಆಶ್ರಯದಲ್ಲಿ ಅ.14ರಂದು ಪಟ್ಟಣದಲ್ಲಿ ಗಾಂಧಿಸ್ಮೃತಿ ಪ್ರಯುಕ್ತ ಜನಜಾಗೃತಿ ಸಮಾವೇಶ ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 11ಕ್ಕೆ ಪಟ್ಟಣದ ಎಚ್.ಡಿ.ದೇವೇಗೌಡ ಸಮುದಾಯ ಭವನ ದಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸುವರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸದಸ್ಯರಿಗೆ ಅಭಿನಂದಿಸಲಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅನುದಾನ ವಿತರಣೆ ಮಾಡುವರು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್ ಅಧ್ಯಕ್ಷತೆ ವಹಿಸುವರು. ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಸಾಧಕರಿಗೆ ಸನ್ಮಾನಿಸುವರು. ಹುಣಸೂರು ಶಾಸಕ ಹರೀಶ್‌ಗೌಡ ಜನಜಾಗೃತಿ ಜಾಥಾಕ್ಕೆ ಚಾಲನೆ ನೀಡುವರು.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಸಾ.ರಾ.ಮಹೇಶ್, ಹುಣಸೂರಿನ ಮಾಜಿ ಶಾಸಕ ಮಂಜುನಾಥ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ, ಎಸ್‌ಬಿಐನ ಮುಖ್ಯ ವ್ಯವಸ್ಥಾಪಕ ಲೂಯಿಸ್ ರೊಸಾರಿಯೋ, ಜನಜಾಗೃತಿ ವೇದಿಕೆ ರಾಜ್ಯ ಸಂಘಟನಾ ಅಧ್ಯಕ್ಷ ನಟರಾಜ್ ಬಾದಾಮಿ ಅವರುಗಳು ಭಾಗವಹಿಸಲಿರುವರು.

ಸರಗೂರಲ್ಲಿ ವಿಶ್ವ ದೃಷ್ಟಿ ದಿನ ಆಚರಣೆ



ವಿಶ್ವದೃಷ್ಟಿ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಚೇತನ್ ಕುಮಾರ್, ಡಾ.ವಿನಯ್ ಕುಮಾರ್, ಡಾ.ನೇತ್ರ ಹರ್ಷ ಅವರನ್ನು ಸನ್ಮಾನಿಸಲಾಯಿತು.

ಸರಗೂರು: ವಿವೇಕಾನಂದ ಸ್ಮಾರಕ ಆಸ್ಪತ್ರೆಯ ವತಿಯಿಂದ ವಿಶ್ವದೃಷ್ಟಿ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಮೈಸೂರು. ಕೆ.ಆರ್. ಆಸ್ಪತ್ರೆ ಕಣ್ಣಿನ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಚೇತನ್ ಕುಮಾರ್, ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರು ತಮ್ಮ ತಮ್ಮ ಕಣ್ಣುಗಳನ್ನು ರಕ್ಷಿಸಿಕೊಳ್ಳಿ, ತಾವು ಮಾಡುವ ಕೆಲಸದ ಸ್ಥಳಗಳಲ್ಲಿ ತಮ್ಮ ಕಣ್ಣುಗಳನ್ನು ಆರೈಕೆ ಮಾಡಿಕೊಳ್ಳಿ, ಪ್ರತಿ 20 ನಿಮಿಷಗಳಿಗೊಮ್ಮೆ ಕಣ್ಣಿಗೆ ವಿಶ್ರಾಂತಿ ತೆಗೆದು ಕೊಳ್ಳುವುದು ಸೂಕ್ತ. ನಾರಿನಂಶವಿರುವ ಸೊಪ್ಪು ಮತ್ತು ತರಕಾರಿಗಳನ್ನು ಸೇವಿಸಿ, ಪ್ರೋಟಿನ್ ಯುಕ್ತ ಸಮತೋಲನ ಆಹಾರವನ್ನು ಸೇವಿಸಿದರೆ ಕಣ್ಣಿಗೆ ರಕ್ಷಣೆ ಸಿಗುತ್ತದೆ ಎಂದರು.

ಮಕ್ಕಳ ಕಣ್ಣಿನ ಶಸ್ತ್ರಚಿಕಿತ್ಸಾ ತಜ್ಞರು ವಿಠಲ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಪ್ತಾಲ್ಮೊಲಜಿ ಬೆಂಗಳೂರಿನ ಡಾ. ನೇತ್ರ ಹರ್ಷ, ಕಣ್ಣಿನ ನರರೋಗ ತಜ್ಞ ಡಾ.ವಿನಯ್‌ಕುಮಾರ್ ಮಾತನಾಡಿದರು.

ಡಾ.ರವೀಂದ್ರನಾಥ್ ಶ್ರಾಫ್, ವಿವೇಕಾನಂದ ಸ್ಮಾರಕ ಆಸ್ಪತ್ರೆಯ ವ್ಯವಸ್ಥಾಪಕ ಸಂಧ್ಯ ಬಿ.ಜಿ, ವೈದ್ಯರಾದ ಡಾ ಸುಷ್ಮ ವೈದ್ಯನಾಥ್, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ.ನಿಸರ್ಗ, ಡಾ ಗಣೇಶ್, ಡಾ. ಪ್ರಶಾಂತ್ ಬಿಂಜಲ್‌ಬಾವಿ, ಡಾ. ಅರ್ಜುನ್ ಎಸ್ ಪ್ರಕಾಶ್, ಪುಟ್ಟಮ್ಮ, ಅಪ್ರೋಶ್ ಪಾಷ, ಬಂಗಾರ ಶೆಟ್ಟಿ, ಗೋಪಾಲಕೃಷ್ಣ ರೂಪೇಶ್, ಮಮತ, ದೀಪಿಕ, ಸ್ಪೂರ್ತಿ ಶ್ಯಾಮಲ, ಸಿಂಚನ, ಸುಧರಾಣಿ, ಪದ್ಮಚಂದ್ರ, ನವೀನ್ ಕುಮಾರ್, ಅನಿತ, ರುಚಿತ, ನಂಜುಂಡಸ್ವಾಮಿ, ಮಂಜುಳ, ರಾಜು, ಸಿಬ್ಬಂದಿ ವರ್ಗದವರು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ನಾಳೆ ನಂಜನಗೂಡಲ್ಲಿ ಪಾನ ಮುಕ್ತರಿಗೆ ಸನ್ಮಾನ

ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜಾಗೃತಿ ಜಾಥಾ



ಗೋಷ್ಠಿಯಲ್ಲಿ ಕೆಎಸ್.ಶಿವಯ್ಯ, ನರಸಿಂಹಮೂರ್ತಿ, ಸೋಮಶೇಖರ್ ಮೂರ್ತಿ ಮಾತನಾಡಿದರು.

ನಂಜನಗೂಡು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಗಾಂಧಿ ಜಯಂತಿ ಸಂಭ್ರಮಾಚರಣೆ ಪ್ರಯುಕ್ತವಾಗಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಸೋಮವಾರ(ಅ.13) ಬೆಳಗ್ಗೆ 9 ಗಂಟೆಗೆ ಜನಜಾಗೃತಿ ಜಾಥಾ ಮತ್ತು ಪಾನಮುಕ್ತ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಧರ್ಮರಾಜ್ ತಿಳಿಸಿದರು.

ನಗರದ ತಾಲೂಕು ಪತ್ರಕರ್ತರ ಸಂಘದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕಳೆದ 10 ವರ್ಷಗಳಿಂದ ಮದ್ಯ ವರ್ಜನ ಶಿಬಿರಗಳನ್ನು ಆಯೋಜಿಸಿ ಸಾವಿರಾರು ಜನರು ಪಾನಮುಕ್ತರಾಗಿ ನವ ಜೀವನ ನಡೆಸಲು ಕಾರಣೀಭೂತವಾಗಿದೆ. ಆದ್ದರಿಂದ ಪಾನಮುಕ್ತರನ್ನು ಗೌರವಿಸಿ ಉತ್ತೇಜನ ನೀಡುವ ಸಲುವಾಗಿ ಪಾನ ಮುಕ್ತರಾಗಿ ನವ ಜೀವನ ನಡೆಸುತ್ತಿರುವವರನ್ನು ಅಭಿನಂದಿಸಲಾಗುವುದು. ಜೊತೆಗೆ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ನಗರದ ಎಂಜಿಎಸ್ ರಸ್ತೆ, ಆರ್‌ಪಿ ರಸ್ತೆಗಳಲ್ಲಿ ಜಾಗೃತಿ ಜಾಥಾ ನಡೆಸಿ ರಾಜ್ಯದಲ್ಲಿ ಮಧ್ಯಪಾನ ನಿಷೇಧ ಮಾಡುವಂತೆ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸುವ ಮೂಲಕ ಹಕ್ಕೊತ್ತಾಯ ಮಾಡಲಾಗುವುದು ಎಂದರು.

ಸೋಮಶೇಖರ್ ಮೂರ್ತಿ ಮಾತನಾಡಿ, ಅಂದಿನ ಜಾಗೃತಿ ಜಾಥ ಕಾರ್ಯಕ್ರಮವನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉದ್ಘಾಟಿಸಲಿದ್ದಾರೆ, ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಲಿದ್ದಾರೆ, ಅಧ್ಯಕ್ಷತೆಯನ್ನು ಜಿಲ್ಲಾ ಜನಜಾಗೃತಿ ವೇದಿಕೆಯ ಕೆ.ಎಲ್.ಪ್ರಭುಸ್ವಾಮಿ ವಹಿಸಲಿದ್ದು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕರಾದ ಜಯಂತ್ ಪೂಜಾರಿ ನವಜೀವನ ಸಮಿತಿ ಸದಸ್ಯರಿಗೆ ಅಭಿನಂದನೆ ಸಲ್ಲಿಸಲಿದ್ದಾರೆ, ಮುಖ್ಯ ಭಾಷಣಕಾರರಾಗಿ ಜೆಎಸ್‌ಎಸ್ ಕಾಲೇಜಿನ ಡಾ.ಎಂ.ಪಿ.ಸೋಮ ಶೇಖರ್ ರವರು ಆಗಮಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ನಗರಸಭೆಯ ಅಧ್ಯಕ್ಷರಾದ ಶ್ರೀಕಂಠಸ್ವಾಮಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಜಿ.ಪಂ ಮಾಜಿ ಸದಸ್ಯ ಸದಾನಂದ, ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ಸೇರಿದಂತೆ ಹಲವಾರು ಜನ ಪ್ರತಿನಿಧಿಗಳು ಭಾಗವಹಿಸಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಉತ್ತಮ ಜೀವನ ಶೈಲಿಯಿಂದಷ್ಟೇ ಆರೋಗ್ಯ



ಉಚಿತ ಬಿಎಂಡಿ, ಆರೋಗ್ಯ ತಪಾಸಣೆ ಉದ್ಘಾಟಿಸುತ್ತಿರುವ ಡಾ.ಸಿಂಧು.

ಹುಣಸೂರು, ಅ.11– ಮನುಷ್ಯನ ಮೂಳೆಗಳು ಬಲಿಷ್ಠವಾಗಿರಬೇಕಾದರೆ ದಿನನಿತ್ಯ ಪೌಷ್ಟಿಕಾಂಶವುಳ್ಳ ಆಹಾರ ಸೇವನೆ ಮತ್ತು ಜೀವನ ಶೈಲಿಯಿಂದ ಮಾತ್ರ ಸಾಧ್ಯವೆಂದು ಅಪೂಲೋ ಆಸ್ಪತ್ರೆಯ ಅರ್ಥೋಪೆಡಿಕ್ ಸರ್ಜನ್ ಡಾ.ಸಿಂಧು ಬಿ. ತಿಳಿಸಿದರು.

ನಗರದ ರೋಟರಿ ಭವನದಲ್ಲಿ ಹುಣಸೂರು ರೋಟರಿ ಕ್ಲಬ್ ಮತ್ತು ಅಪೂಲೋ ಆಸ್ಪತ್ರೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಬಿಎಂಡಿ ಆರೋಗ್ಯ ಶಿಬಿರದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮ ಮೂಳೆಗಳಿಗೆ ಆಸ್ಟಿಯೊ ಪೊರೋಸಿಸ್ ಕಾಯಿಲೆ ಬರದಂತೆ ಕಾಪಾಡಿಕೊಂಡರೆ, ನಿಮ್ಮ ಮೂಳೆ ಮುರಿಯುವುದು ಮತ್ತು ಬಿರುಕು ಬಿಡುವುದನ್ನು ತಪ್ಪಿಸಬಹುದು ಎಂದರು.

ಬಿಎಂಡಿ ಪರೀಕ್ಷೆಯ ಮೂಲಕ ನಿಮ್ಮ ಸಮಗ್ರ ಮೂಳೆಗಳ ಗುಣಮಟ್ಟ ತಿಳಿದರೆ, ಆಹಾರ ಪದ್ಧತಿ ಬದಲಾವಣೆಯ ಅವಶ್ಯಕತೆಯಿದ್ದು, ಪ್ರತಿ ದಿನ ಹಸಿ ತರಕಾರಿ, ಸೊಪ್ಪು, ಡ್ರೈಫ್ರೂಟ್ಸ್, ಕ್ಯಾಲ್ಸಿಯಂ ಇರುವ ಪದಾರ್ಥಗಳನ್ನು ಸೇವಿಸಿದರೆ ಮೂಳೆಗಳ ಸಾಂದ್ರತೆಯನ್ನು ತಡೆದು ಆರೋಗ್ಯವಂತ ಜೀವನವನ್ನು ರೂಪಿಸಿಕೊಳ್ಳಬಹುದಾಗಿದೆ ಎಂದರು.

ರೋಟರಿ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಸಮಾಜದ ಪ್ರತಿಯೊಬ್ಬರಿಗೂ ಆರೋಗ್ಯ ಮತ್ತು ವಿದ್ಯೆ ಸಿಗಬೇಕು ಎಂಬ ಕಲ್ಪನೆಯೊಂದಿಗೆ ನಿರಂತರ ನಿಸ್ವಾರ್ಥ ಸೇವೆಯಲ್ಲಿರುವ ಅಂತರಾಷ್ಟ್ರೀಯ ರೋಟರಿ ಸಂಸ್ಥೆ ಬದುಕಿನ ಕಡೆಯ ವ್ಯಕ್ತಿಗೂ ಸಾಮಾಜಿಕ ಸೌಲಭ್ಯಗಳು ಸಿಗಬೇಕು ಎಂಬ ಧ್ಯೇಯಯೊಂದಿಗೆ ಮುನ್ನುಗ್ಗುತ್ತಿದೆ ಎಂದರು.

ಶಿಬಿರದಲ್ಲಿ ಸುಮಾರು 40 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ಚಿಕಿತ್ಸೆಗೆ ಒಳಪಟ್ಟರು. ಶಿಬಿರದ ವೇದಿಕೆಯಲ್ಲಿ ರೋಟರಿ ಕಾರ್ಯದರ್ಶಿ ಶ್ಯಾಮಣ್ಣ ಧರ್ಮಾಪುರ, ರೊ.ಆನಂದ್, ರೊ.ಚನ್ನಕೇಶವ್, ಕೇಶವ್, ರೊ. ಮಹೇಶ್ ಶ್ರೀನಿವಾಸ್ ಇದ್ದರು.

ಹುಣಸೂರಿನ ಶಾಸ್ತ್ರಿ ಪಿಯು ಕಾಲೇಜು ಚಾಂಪಿಯನ್



ಚಾಂಪಿಯನ್ ಆಗಿ ಹೊರಹೊಮ್ಮಿದ ಶಾಸ್ತ್ರಿ ಕಾಲೇಜಿನ ವಿದ್ಯಾರ್ಥಿಗಳ ತಂಡ.

ಮೈಸೂರು: ಬೆಂಗಳೂರಿನಲ್ಲಿ ನಡೆದ ದಕ್ಷಿಣ ವಲಯ ವಿದ್ಯಾ ಭಾರತಿ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಿದ ಹುಣಸೂರಿನ ಶಾಸ್ತ್ರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ವಿವಿಧ ಟ್ರಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ನೀಡಿದ ಶ್ರೇಷ್ಠ ಪ್ರದರ್ಶನಗಳ ಮೂಲಕ ಕರ್ನಾಟಕದ ಹುಡುಗರ ಹಾಗೂ ಹುಡುಗಿಯರ ತಂಡಗಳು ಎರಡೂ ಒಟ್ಟಾರೆ ಚಾಂಪಿಯನ್‌ಗಳಾಗಿ ಹೊರಹೊಮ್ಮಿದ್ದು, ಅದರಲ್ಲಿ ಶಾಸ್ತ್ರಿ, ಕಾಲೇಜಿನ ಅಥ್ಲೆಟ್‌ಗಳ ಕೊಡುಗೆ ಅತ್ಯಂತ ಪ್ರಮುಖವಾಗಿದೆ.

ಬಾಲಕಿಯರ ಸಾಧನೆ: 100, 400 ಮೀ. ಅನುಶ್ರೀ ಪ್ರಥಮ, 1500 ಮೀ ಅಮೃತಾ ಪ್ರಥಮ, ಅಂಕಿತಾ ದ್ವಿತೀಯ, 3000 ಮೀ ಅಮೃತಾ ಪ್ರಥಮ, ಅಂಕಿತಾ ದ್ವಿತೀಯ.

ಲಾಂಗ್ ಜಂಪ್: ಭುವನೇಶ್ವರಿ ಪ್ರಥಮ, ಅನುಶ್ರೀ ದ್ವಿತೀಯ, ಟ್ರಿಪಲ್ ಜಂಪ್ ಭುವನೇಶ್ವರಿ ಪ್ರಥಮ, ರೇಸ್ ವಾಕ್ ಯಶೋಧಾ ಪ್ರಥಮ, ಗುಂಡು ಎಸೆತ ಅಂಕಿತಾ ಪ್ರಥಮ, 4x400 ಮೀ ರಿಲೇ: ಅಮೃತಾ, ಅಂಕಿತಾ, ವಂದನಾ, ಸಿಂಚನಾ ಪ್ರಥಮ, 4x100 ಮೀ ರಿಲೇ: ಅನುಶ್ರೀ, ಯಶೋಧಾ, ಭುವನೇಶ್ವರಿ, ಸಾನಿಕಾ ಪ್ರಥಮ, 4 ಕಿ. ಮೀ.ಕ್ರಾಸ್ ಕಂಟ್ರಿ ಭವಿಕಾ, ಜಶ್ಚಿತಾ, ವರ್ಷಿತಾ, ಲಕ್ಷ್ಮೀ, ಅಂಕಿತಾ, ಸ್ನಿಗ್ಧಾ ಪ್ರಥಮ.

ಬಾಲಕರ ಸಾಧನೆ: 400, 800 ಮೀ: ಅಭಿಷೇಕ್ ಪ್ರಥಮ, ಟ್ರಿಪಲ್ ಜಂಪ್: ರಾಘವೇಂದ್ರ ಪ್ರಥಮ, ಅಭಿಷೇಕ್ ದ್ವಿತೀಯ, ಲಾಂಗ್ ಜಂಪ್: ರಾಘವೇಂದ್ರ ಪ್ರಥಮ, ರೇಸ್ ವಾಕ್: ಗೌತಮ್ ದ್ವಿತೀಯ, 4x100 ಮೀ ರಿಲೇ: ಬಸಂತ್, ಜಶ್ವಂತ್, ಮೇಘಶ್ಯಾಮ್, ರಾಘವೇಂದ್ರ ಪ್ರಥಮ, 4x400 ಮೀ ರಿಲೇ: ಅಭಿಷೇಕ್, ಗೌತಮ್, ಚಿನ್ಮಯ್, ತೌನ್ ಪ್ರಥಮ, 6 ಕಿ.ಮೀ.ಕ್ರಾಸ್ ಕಂಟ್ರಿ: ಚೇತನ್, ಸಚಿನ್, ಯುವರಾಜ್, ಪ್ರೀತಮ್, ಧೀರಜ್, ಶಶಿಕುಮಾರ್ ಪ್ರಥಮ.

ಶಾಸ್ತ್ರಿ ಕಾಂಪೋಸಿಟ್ ಪಿಯು ಕಾಲೇಜಿನ ದೈಹಿಕ ಶಿಕ್ಷಕ ಕಾರ್ತಿಕ್ ಈ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದವರು. ಆಡಳಿತ ಮಂಡಳಿ, ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗ ಈ ಪ್ರತಿಭಾವಂತ ಕ್ರೀಡಾಪಟುಗಳನ್ನು ಮತ್ತು ತರಬೇತುದಾರರನ್ನು ಅಭಿನಂದಿಸಿದೆ.

ಡಾ.ರಾಜೇಂದ್ರ ಶ್ರೀಗಳು ಮಾತೃ ಹೃದಯಿ



ಡಣಾಯಕನಪುರ ಮಲ್ಲಣ್ಣ ಹಾಗೂ ತೊಟ್ಟವಾಡಿ ಎನ್.ರವಿ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.11–ಸಾಮಾಜಿಕ ಕಳಕಳಿ ಹಾಗೂ ದೂರದೃಷ್ಟಿ ಹೊಂದಿದ್ದ ಡಾ.ರಾಜೇಂದ್ರ ಶ್ರೀಗಳು ಜನರಿಗಾಗಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನ ಹೆಳವರಹುಂಡಿ ಸಿದ್ದಪ್ಪ ಹೇಳಿದರು.

ತಾಲೂಕಿನ ಬಿಲಿಗೆ ಹುಂಡಿ ಗ್ರಾಮದ ಶ್ರೀಗುರು ಮಲ್ಲೇಶ್ವರ ಭಿಕ್ಷದ ಮಠದಲ್ಲಿ ಆಯೋಜಿಸಿದ್ದ ರಾಜೇಂದ್ರ ಶ್ರೀಗಳ 110ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ. ಹಸಿದು ಬಂದವರನ್ನು ಸ್ವತಃ ಗುರುತಿಸಿ ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದ ಮಾತೃ ಹೃದಯಿಗಳಾಗಿದ್ದ ರಾಜೇಂದ್ರ ಶ್ರೀಗಳು, ಅನ್ನ, ಅಕ್ಷರ, ಆರೋಗ್ಯ ತ್ರಿವಿಧ ದಾಸೋಹ ನಡೆಸಿ ಅನೇಕರ ಬಾಳಿಗೆ ಬೆಳಕಾದರು ಎಂದರು. ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಡಣಾಯಕನಪುರ ಮಲ್ಲಣ್ಣ ಹಾಗೂ ನಾಲ್ಕನೇ ಬಾರಿಗೆ ಕುರುಬೂರು ಪಿಎಸಿಸಿಎಸ್‌ಗೆ ಅವಿರೋಧವಾಗಿ ಆಯ್ಕೆಯಾದ ತೊಟ್ಟವಾಡಿ ಎನ್.ರವಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮವನ್ನು ಕುರಿತಂತೆ ಮೊರಬದ ಮಲ್ಲಿಕಾರ್ಜುನ, ವಾಟಾಳು ಶ್ರೀಗಳು, ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ, ನಿಕಟಪೂರ್ವ ಪೂರ್ವ ಅಧ್ಯಕ್ಷ ಚಂದ್ರಶೇಖರ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರ್, ಉಪಾಧ್ಯಕ್ಷ ಮಹದೇವಸ್ವಾಮಿ, ಶಿವಕುಮಾರ ಸ್ವಾಮಿ ಟ್ರಸ್ಟ್‌ನ ಅಧ್ಯಕ್ಷ ಬಜ್ಜಿ ನಿಂಗಪ್ಪ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಮುಡಿಗುಂಡ ಪುಟ್ಟಣ್ಣ ದೊಡ್ಡನ ಹುಂಡಿ ನಂಜುಂಡಸ್ವಾಮಿ, ಸುರೇಶ, ಗುತ್ತಿಗೆದಾರ ಮಂಟೇಲಿಂಗಪ್ಪ ಗೌಡರ ಬಸವರಾಜಪ್ಪ ಪ್ರಭುಸ್ವಾಮಿ, ಮಹೇಶ, ದತ್ತಿ ದಾನಿ ಹೆಳವರಹುಂಡಿ ಮೂರ್ತಿ, ಗೌಡರ ಪ್ರಭು, ಫ್ಯಾನ್ಸಿ ಮೋಹನ್, ವಕೀಲ ಜ್ಞಾನೇಂದ್ರ ಮೂರ್ತಿ, ಮಹೇಂದ್ರ ಕುಮಾರ್, ಸುಂದರ ಹಾಜರಿದ್ದರು.

ಮೈಸೂರು ಸಂಗೀತ ಸುಗಂಧ ವಿಶೇಷ ಕಾರ್ಯಕ್ರಮಕ್ಕೆ ಚಾಲನೆ

ಭಾರತದ ಸಂಸ್ಕೃತಿ, ಸಂಗೀತದಲ್ಲಿ ದಾಸ ಪರಂಪರೆಗೆ ದೊಡ್ಡ ಇತಿಹಾಸವಿದೆ: ಸಂಸದ ಯದುವೀರ್ ಅಭಿಮತ

ಮೈಸೂರು, ಅ.11(ಬಿಎಲ್‌ಯು)– ಭಾರತೀಯ ಸಂಸ್ಕೃತಿ ಮತ್ತು ಸಂಗೀತದಲ್ಲಿ ದಾಸ ಪರಂಪರೆಗೆ ದೊಡ್ಡ ಇತಿಹಾಸವಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಇಂದು ಕರ್ನಾಟಕ ಶಾಸ್ತ್ರೀಯ ಸಂಗೀತದ ದಾಸ ಪರಂಪರೆಯ ಸಂಗೀತೋತ್ಸವಗಳ ಎರಡು ದಿನಗಳ ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಸಂಸ್ಕೃತಿ ಮತ್ತು ಸಂಗೀತದಲ್ಲಿ ದಾಸ ಪರಂಪರೆ ಒಂದಕ್ಕೊಂದು ಕೊಂಡಿಯಾಗಿ ಬೆಸೆದುಕೊಂಡಿವೆ ಎಂದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಳೆದ ವರ್ಷ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು. ದೇಶದ ಸಾಂಸ್ಕೃತಿಕ ಹಾಗೂ ಸಂಗೀತ ಪರಂಪರೆಯನ್ನು ಅನಾವರಣಗೊಳಿಸುವ ಈ ಕಾರ್ಯಕ್ರಮ ನಿರ್ಮಲಾ ಸೀತಾರಾಮನ್ ಅವರ ಕನಸಿನ ಕೂಸು ಎಂದು ಯದುವೀರ ಅಭಿಪ್ರಾಯಪಟ್ಟರು.

ಭಾರತದ ಸಂಗೀತ ಮತ್ತು ಸಂಸ್ಕೃತಿಯಲ್ಲಿ ದಾಸ ಪರಂಪರೆ ಪ್ರಮುಖ ಪಾತ್ರ ವಹಿಸುತ್ತದೆ. ಅಯೋಧ್ಯೆಯಲ್ಲಿ ದಾಸ ಶ್ರೇಷ್ಠರಾದ ತ್ಯಾಗರಾಜರು ಹಾಗೂ ಪುರಂದರ ದಾಸರ ಪ್ರತಿಮೆಯನ್ನು ನಿರ್ಮಾಣ ಮಾಡಲಾಗಿದೆ. ದಾಸ ಪರಂಪರೆಯನ್ನು ಕೊಡುಗೆಯಾಗಿ ನೀಡಿದ ಈ ಭೂಮಿ ಪುಣ್ಯ ಭೂಮಿಯಾಗಿದೆ ಎಂದರು.

ಮೈಸೂರು ರಾಜರ ಸಂಸ್ಥಾನದಲ್ಲಿ ದಾಸ ಸಾಹಿತ್ಯಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು. ಸಂದರ್ಭೋಚಿತವಾಗಿ ದಾಸ ಪರಂಪರೆಯ ಸಂಗೀತೋತ್ಸವ ಇಲ್ಲಿ ನಡೆಯುತ್ತಿರುವುದು ವಿಶೇಷವಾಗಿದೆ ಎಂದು ಹೇಳಿದರು.

ವಿಕಸಿತ್ ಭಾರತ್ ಪರಿಕಲ್ಪನೆಯಲ್ಲಿ ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಮೂಲಕ ಭಾರತವನ್ನು ವಿಶ್ವದ ಭೂಪಟದಲ್ಲಿ ಅಗ್ರ ಸ್ಥಾನಕ್ಕೆ ತಂದು ನಿಲ್ಲಿಸುವುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಧ್ಯೇಯೋದ್ದೇಶವಾಗಿದೆ ಎಂದು ಯದುವೀರ್ ಹೇಳಿದರು.


ಹೆಸರಾಂತ ವಿದ್ವಾಂಸರಾದ ವಿದ್ಯಾಭೂಷಣ ಅವರು ಕರ್ನಾಟಕ ಸಂಗೀತ ಗಾಯನವನ್ನು ಪ್ರಸ್ತುತಪಡಿಸಿದರು. ಎರಡು ದಿನಗಳ ಕಾರ್ಯಕ್ರಮದಲ್ಲಿ ದಾಸ ಸಾಹಿತ್ಯ ಹಾಗೂ ಸಂಗೀತದ ಬಗ್ಗೆ ಹಲವು ವಿದ್ವಾಂಸರು ಹಲವು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಭೌಗೋಳಿಕ ಸೂಚನಾ ಟ್ಯಾಗ್ (ಜಿಐ) ಇರುವ ಗಂಜೀಫಾ ಕಲೆ, ಮೈಸೂರಿನ ಸಾಂಪ್ರದಾಯಿಕ ಚಿತ್ರ ಕಲೆ, ಚನ್ನಪಟ್ಟಣದ ಆಟಿಕೆ ವಸ್ತುಗಳು ಸೇರಿದಂತೆ ಇತರೆ ವಸ್ತು ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿತ್ತು.

ಶಾಸಕ ಟಿ.ಎಸ್.ಶ್ರೀವತ್ಸ, ಕೇಂದ್ರ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ವಿದ್ಯಾವತಿ ಹಾಗೂ ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ್ ಚಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಶನಿವಾರ ಎರಡು ದಿನಗಳ ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮವನ್ನು ಸಂಸದ ಯದುವೀರ್ ಉದ್ಘಾಟಿಸಿದರು.





ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಶನಿವಾರ ನಡೆದ ಮೈಸೂರು ಸಂಗೀತ ಸುಗಂಧ ಕಾರ್ಯಕ್ರಮದಲ್ಲಿ ಹೆಸರಾಂತ ವಿದ್ವಾಂಸರಾದ ವಿದ್ಯಾಭೂಷಣರು ಕರ್ನಾಟಕ ಸಂಗೀತ ಗಾಯನವನ್ನು (ಎಡಚಿತ್ರ) ಪ್ರಸ್ತುತಪಡಿಸಿದರು. ಇದೇ ವೇಳೆ ಜಿಐ ಟ್ಯಾಗ್ (ಭೌಗೋಳಿಕ ಸೂಚನಾ ಟ್ಯಾಗ್) ವಸ್ತುಗಳ ಪ್ರದರ್ಶನ ಮತ್ತು ಮಾರಾಟ (ಬಲಚಿತ್ರ) ಆಯೋಜಿಸಲಾಗಿತ್ತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇ ಕಾಲ್ ಹಿಮ್ ಓಜಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಇಡ್ಲಿ ಕಡಾಯಿ (ತ)	4 ಪ್ರದರ್ಶನಗಳು
ಸಂಗಂ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಲಿಡೋ	
ಇಡ್ಲಿ ಕೊಟ್ಟು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೈ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

DRC CINEMAS

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಬೆ.9.45ಕ್ಕೆ, ಮ.1.10ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸುನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ (ಹಿಂ): ಸಂ.4.30ಕ್ಕೆ.
ಸ್ಕ್ರೀನ್ 2	ತ್ರೋನ್ ಏರ್ಸ್ (ಇಂ): ಮ.1.35ಕ್ಕೆ, ರಾ.7.30ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.05ಕ್ಕೆ, ರಾವಣ ಪ್ರಭು (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂತಾರ ಚಾಪ್ಟರ್ 1(ಕ): ಬೆ.10.05ಕ್ಕೆ, ಮ.1.25ಕ್ಕೆ, ಸಂ.4.45ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲಿವರ್ ಕಾಯಿಲೆ ಬಗ್ಗೆ ಉಪನ್ಯಾಸ; ಫೈಬ್ರೋಸ್ಕ್ಯಾನ್ ಶಿಬಿರ

ಮೈಸೂರು, ಅ. 11– ಸುಯೋಗ್ ಆಸ್ಪತ್ರೆ, ಸುಯೋಗ್ ಕ್ಲಿನಿಕಲ್ ಸೊಸೈಟಿ ಮತ್ತು ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಮೂಹ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಾಳೆ (ಅ.12) ಬೆಳಗ್ಗೆ 10ಗಂಟೆಗೆ ಸುಯೋಗ್ ಆಸ್ಪತ್ರೆಯ ಸಭಾಂಗಣದಲ್ಲಿ ಈಲಿ ಕಾಯಿಲೆಗಳ ಬಗ್ಗೆ ಸಾರ್ವಜನಿಕರಿಗೆ ಉಪನ್ಯಾಸ ಮತ್ತು ಫೈಬ್ರೋಸ್ಕ್ಯಾನ್ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಶಿಬಿರವನ್ನು ಗ್ಲೋಬಲ್ ಫಾರ್‌ಚ್ಯೂನ್ ಕ್ರಿಯೇಟರ್ಸ್ ಸಂಸ್ಥೆಯ ಅಧ್ಯಕ್ಷ ಡಾ.ಬಿ.ಚಂದ್ರ ಉದ್ಘಾಟಿಸುವರು. ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಲಿವರ್ ಕಾಯಿಲೆಗಳ ಬಗ್ಗೆ ಸಾರ್ವಜನಿಕರಿಗೆ ಉಪನ್ಯಾಸ ನೀಡಲಿದ್ದಾರೆ.

ಲಿವರ್ ಕಾಯಿಲೆಯನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಲು ಫೈಬ್ರೋಸ್ಕ್ಯಾನ್ ಅತ್ಯಾಧುನಿಕ ಪರೀಕ್ಷೆಯಾಗಿದ್ದು, ಅದರಲ್ಲೂ ಮದ್ಯಪಾನಿಗಳಲ್ಲಿ ಬಹುತೇಕ ಲಿವರ್ ಕಾಯಿಲೆಗೀಡಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ, ಈ ಪರೀಕ್ಷೆಗೆ ಆಗಿಂದಾಗ್ಗೆ ಒಳಗಾಗುವುದರಿಂದ ಪ್ರಾರಂಭಿಕ ಹಂತದಲ್ಲಿಯೇ ಈಲಿ ಕಾಯಿಲೆಯನ್ನು ಪತ್ತೆಹಚ್ಚಿ, ಅದಕ್ಕೆ ಚಿಕಿತ್ಸೆ ಪಡೆಯುವುದರಿಂದ ಮುಂದೆ ಸಂಭವಿಸಬಹುದಾದ ಲಿವರ್ ವಿಫಲತೆಯನ್ನು ತಡೆಗಟ್ಟಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ಪದವಿ ಕಾಲೇಜಿನ ವಾಲಿಬಾಲ್ ತಂಡಕ್ಕೆ ಬಹುಮಾನ



ಮೈಸೂರು: ಗುಂಡ್ಲುಪೇಟೆ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಆಯೋಜಿಸಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣಾರ್ಥ ಜೆಎಸ್‌ಎಸ್ ಸಂಸ್ಥೆಯ ಪದವಿ ಅಂತರ ಕಾಲೇಜು ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯ ಪದವಿ ಕಾಲೇಜುಗಳ ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪದವಿ ವಿದ್ಯಾರ್ಥಿಗಳು ಕು. ಜಿ.ಶಶಾಂಕ್ ನಾಯಕತ್ವದಲ್ಲಿ ವಾಲಿಬಾಲ್‌ನಲ್ಲಿ ಪ್ರಥಮ ಹಾಗೂ ಕು.ಡಿ.ವಿ. ಸಿಂಧು ನಾಯ ಕತ್ವದಲ್ಲಿ ಥ್ರೋಬಾಲ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲ ಡಾ. ಎಂ. ಪ್ರಭು, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ. ಕಾರ್ತಿಕ್, ಸಿ.ಎಸ್. ನಿರಂಜನ್ ಹಾಗೂ ಬೋಧಕ–ಬೋಧಕೇತರರು ಅಭಿನಂದಿಸಿದ್ದಾರೆ.

ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಕಥೆ ಆಧರಿತ 'ಒಮ್ಮೆ ಹೆಣ್ಣಾಗು' ನಾಟಕ ಇಂದಿನಿಂದ ಪ್ರದರ್ಶನ

- ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾಹಿತಿ
- ಒಮ್ಮೆ ಬಾನು ಮುಷ್ತಾಕ್ ನಾಟಕ ವೀಕ್ಷಿಸುವ ವಿಶ್ವಾಸ



ರಂಗಾಯಣದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ವಾರಾಂತ್ಯ ನಾಟಕ 'ಒಮ್ಮೆ ಹೆಣ್ಣಾಗು' ನಾಟಕದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು,ಅ.11(ಎಂಟಿವೈ)– ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಅ.12ರಂದು ಸಂಜೆ 6.30ಕ್ಕೆ ಬೂಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್ ಅವರು ಬರೆದ ಕಥೆಗಳನ್ನಾಧರಿಸಿದ 'ಒಮ್ಮೆ ಹೆಣ್ಣಾಗು' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ರಂಗಾಯಣದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತಾಡಿದ ಅವರು, ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರು ಬರೆದಿರುವ ಐದು ಕಥೆಗಳಿಂದ ಆಯ್ದ ಕೆಲ ಸನ್ನಿವೇಶವನ್ನು ತೆಗೆದುಕೊಂಡು 'ಒಮ್ಮೆ ಹೆಣ್ಣಾಗು' ನಾಟಕದಲ್ಲಿ ರಂಗಾಯಣದ ಹಿರಿಯ ಕಲಾವಿದರಾದ ಕೆ.ಆರ್.ನಂದಿನಿ ಹಾಗೂ ಬಿ.ಎನ್.ಶಶಿಕಲಾ ಅವರು ಅಭಿನಯಿಸಿದ್ದಾರೆ. ನಾಟಕವನ್ನು ಡಾ. ಸವಿತಾ ರಾಣಿ ನಿರ್ದೇಶಿಸಿದ್ದಾರೆ. 1.20 ಗಂಟೆ ಅವಧಿಯ ಈ ನಾಟಕ ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ 5 ವಾರ ಪ್ರದರ್ಶನಗೊಳ್ಳಲಿದೆ. ಬಳಿಕ ರಾಜ್ಯದ ವಿವಿಧ ಜಿಲ್ಲೆಗಳಲ್ಲೂ ಪ್ರದರ್ಶಿಸಲು ನಿರ್ಧರಿಸಲಾಗಿದೆ. ನಾಟಕ ವೀಕ್ಷಣೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಲಾಗಿದೆ. ಅವರು ಮುಂದಿನ ದಿನಗಳಲ್ಲಿ ಯಾವುದಾದರೂ ಒಂದು ದಿನ ನಾಟಕ ವೀಕ್ಷಣೆಗೆ ಬರುವುದಾಗಿ ತಿಳಿಸಿದ್ದಾರೆ ಎಂದರು.

ನಾಟಕ ನಿರ್ದೇಶಕರಾದ ಡಾ.ಸವಿತಾ ರಾಣಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣ ಹೆಚ್ಚಾಗುತ್ತಿದೆ. ಇದು ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಎಲ್ಲಾ ಧರ್ಮದಲ್ಲೂ ಮಹಿಳೆಯರ ಮೇಲಿನ ದೌರ್ಜನ್ಯಗಳು ನಡೆಯುತ್ತಲೇ ಇರುತ್ತವೆ. ಈ ಹಿನ್ನೆಲೆಯಲ್ಲಿ ದೌರ್ಜನ್ಯವನ್ನು ಪ್ರಶ್ನಿಸುವ ಹಾಗೂ ಮಾನವೀಯ ಮೌಲ್ಯದ ಬಗ್ಗೆ ಜಾಗೃತಿ ಮೂಡಿಸುವ ಕಥಾ ಹಂದರವುಳ್ಳ 'ಒಮ್ಮೆ ಹೆಣ್ಣಾಗು' ನಾಟಕ ನಿರ್ದೇಶಿಸಿರುವುದಾಗಿ ತಿಳಿಸಿದರು.

ಸಹ ನಿರ್ದೇಶಕಿ ಹೆಚ್.ಕೆ.ಶ್ವೇತರಾಣಿ ಮಾತನಾಡಿ, ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಲೇ ಇದೆ ಆ ನಿಟ್ಟಿನಲ್ಲಿ ಬಾನು ಮುಷ್ತಾಕ್ ಅವರ 'ಹೃದಯ ದೀಪ' ಪುಸ್ತಕದಿಂದ ಶೈಸ್ತಾ ಮಹಲ್‌ನ ಕಲ್ಲಿನ ಚಪ್ಪಡಿಗಳು, ಕಪ್ಪು ನಾಗರ ಹಾವು, ಹೃದಯ ದೀಪ, ಒಮ್ಮೆ ಮಹಿಳೆಯಾಗಿದ್ದಳು ಕಥೆಗಳಿಂದ ಕೆಲವು ವಿಚಾರಗಳನ್ನು ತೆಗೆದುಕೊಂಡು ಪುರುಷ ಪ್ರಧಾನ ಮುಖವನ್ನು ಬಹಿರಂಗಪಡಿಸಲು ಮತ್ತು ಪ್ರಶ್ನಿಸಲು 'ಒಮ್ಮೆ ಹೆಣ್ಣಾಗು' ನಾಟಕ ರಂಗ ಪ್ರಯೋಗ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಂಗಸಮಾಜದ ಸದಸ್ಯ ಹೆಚ್.ಎಸ್.ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸುದರ್ಶನ್, ರಂಗಾಯಣದ ಹಿರಿಯ ಕಲಾವಿದರಾದ ಕೆ.ಆರ್.ನಂದಿನಿ, ಬಿ.ಎನ್.ಶಶಿಕಲಾ ಇದ್ದರು.



ಮೃಗಾಲಯ ನಿರ್ದೇಶಕರಿಗೆ ಅಭಿನಂದನೆ

ಮೈಸೂರು ಮೃಗಾಲಯ ಪ್ರಾಧಿಕಾರದ ನೂತನ ಅಧ್ಯಕ್ಷರಾದ ಕೆ. ರಂಗಸ್ವಾಮಿ ಅವರನ್ನು ವರುಣ ಕ್ಷೇತ್ರದ ಮರಡಿಹುಂಡಿ ಗ್ರಾಮ ಪಂಚಾಯಿತಿ ಸದಸ್ಯರು, ಕಾಂಗ್ರೆಸ್ ಮುಖಂಡರಾದ ಬುಲೆಟ್ ಮಹದೇವು, ಮರಡಿ ಹುಂಡಿ ಪುಟ್ಟಸ್ವಾಮಿ, ಪ್ಲಂಬರ್ ಜವರೇಗೌಡ, ರಘು, ಸಿಂಡಿಕೇಟ್ ಸದಸ್ಯ ಹೊಸಕೋಟೆ ಬಸವರಾಜು, ಹುಳಿಮಾವು ನಾಗರಾಜ್ ಇತರರು ಅಭಿನಂದಿಸಿದರು.

ಮಹಾಜನ ಕಾಲೇಜಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ



ಮೈಸೂರು, ಅ. 11– ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಮೈಸೂರಿನ ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಕಣ್ಣಿನ ಉಚಿತ ತಪಾಸಣೆ ಮತ್ತು ಕಣ್ಣಿನ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ನೇತ್ರಧಾಮ ಆಸ್ಪತ್ರೆಯ ವೈದ್ಯರಾದ ಡಾ. ಸೌಮ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಣ್ಣು ದೇಹದ ಕನ್ನಡಿಯಾಗಿದೆ. ಸುಮಾರು 120 ಮಿಲಿಯನ್ ನರಗಳು ಕಣ್ಣಿಗೆ ಸಂಪರ್ಕ ಹೊಂದಿರುವುದರಿಂದ ಕಣ್ಣು ಸೂಕ್ಷ್ಮವಾಗಿರುತ್ತದೆ. ಆದಿಮಾನವನ ಕಾಲದಲ್ಲಿ ಕಣ್ಣು ಕೇವಲ ದೂರದೃಷ್ಟಿಗೆ ಸೀಮಿತವಾಗಿತ್ತು. ಆದರೆ ಪ್ರಸ್ತುತ ಪ್ರಪಂಚದಲ್ಲಿ ಸಮೀಪ ದೃಷ್ಟಿ ದೋಷವು ಹೆಚ್ಚಾಗುತ್ತಿದ್ದು, 20 ರಿಂದ 40 ವರ್ಷದ ಜನರಲ್ಲಿ ಶೇಕಡಾ 50 ರಷ್ಟು ಕಣ್ಣಿನ ಸಮಸ್ಯೆ ಎದುರಾಗುತ್ತಿದೆ.

ಥೈರಾಯ್ಡ್, ಡಯಾಬಿಟೀಸ್ ಮುಂತಾದ ರೋಗಗಳು ಕಣ್ಣಿನ ನರಗಳ ಮೇಲೆ ಪ್ರಭಾವ ಬೀರುತ್ತದೆ. ಆದುದರಿಂದ ಸಮೀಪ ದೃಷ್ಟಿದೋಷ, ಕಣ್ಣಿನ ಪೊರೆ, ಗ್ಲುಕೋಮಾ, ಕಣ್ಣುಗಳ ನೈರ್ಮಲ್ಯವನ್ನು ತಡೆಗಟ್ಟಿ, ಆರೋಗ್ಯಕರ ದೃಷ್ಟಿಯನ್ನು ಹೊಂದಲು ಸರಿಯಾದ ಪೋಷಣೆ ಅಗತ್ಯ. ಡಿಜಿಟಲ್ ಕಲ್ಚರ್‌ನಿಂದ ಕಣ್ಣಿನ ಒತ್ತಡ ಹೆಚ್ಚಾಗಿರುವುದರಿಂದ ಕಣ್ಣಿನ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ನಿಯಮಿತವಾಗಿ ಕಣ್ಣಿನ ತಪಾಸಣೆಯನ್ನು ಮಾಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್. ತಿಮ್ಮೇಗೌಡ, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ. ದೊಡ್ಡರಸಯ್ಯ ಜಿ, ನಿರಂಜನ್ ಎಲ್, ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ಬಿಸಿನೆಸ್ ಡೆವೆಲಪ್‌ಮೆಂಟ್ ಎಕ್ಸಿಕ್ಯೂಟಿವ್ ಪ್ರಜ್ವಲ್, ಶ್ರೀ ರೇವಣ್ಣ, ಆಪ್ಟೋಮೆಟ್ರಿಸ್ಟ್‌ಗಳಾದ ಆದಿತ್ಯ ಮತ್ತು ನಾಗರಾಜು ಶಿಬಿರದಲ್ಲಿ ಹಾಜರಿದ್ದರು.

ಆಧ್ಯಾತ್ಮಿಕ ಜೀವನಶೈಲಿ ಪಾಲಿಸಿ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಿ



ಮೈಸೂರು, ಅ. 11– ಸುಯೋಗ್ ನರ್ಸಿಂಗ್ ಕಾಲೇಜು ಮತ್ತು ಸುಯೋಗ್ ಆಸ್ಪತ್ರೆಗಳ ಸಂಯುಕ್ತಾಶ್ರಯದಲ್ಲಿ ಇಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಸುಯೋಗ್ ಆಸ್ಪತ್ರೆಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ರೋಗಿಗಳಿಂದ ಮಾನಸಿಕ ಆರೋಗ್ಯದ ಬಗ್ಗೆ ಅವರ ಚಿಂತನೆಗಳ ಅಭಿವ್ಯಕ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಸುಯೋಗ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷರು ಮತ್ತು ವೈದ್ಯಸಾಹಿತಿ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಸೃಷ್ಟಿಯಲ್ಲಿ ಮನುಷ್ಯನ ಮನಸ್ಸು ಮತ್ತು ಮೆದುಳು ಅತ್ಯಂತ ಅದ್ಭುತವಾದ ಸೃಷ್ಟಿಗಳೆಂದು ವರ್ಣಿಸಿ ಅದರಲ್ಲೂ ಮನುಷ್ಯನ ಮನಸ್ಸಿಗೆ ಇಡೀ ಸೃಷ್ಟಿಯನ್ನೇ ಆಳುವ ಅಥವಾ ವಿನಾಶ ಮಾಡುವ ಸಾಮರ್ಥ್ಯವಿರುವುದರಿಂದ ಅದನ್ನು ಸರಿದಾರಿಯಲ್ಲಿ ತರಬೇತುಗೊಳಿಸುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಿಸಿದರು.

ಮನಸ್ಸು ಪ್ರಜ್ಞೆ ಮತ್ತು ಆಲೋಚನೆಗಳಿಂದ ವ್ಯಕ್ತವಾಗುವುದರಿಂದ ಅದರಲ್ಲಿ ಉಗಮಿಸುವ ವಿಭಿನ್ನ ಬಗೆಯ ಆಲೋಚನೆಗಳಿಂದ ಅದು ಸಕಾರಾತ್ಮಕ ಮತ್ತು ನಕಾರಾತ್ಮಕ ಭಾವಗಳನ್ನು ತಂದುಕೊಳ್ಳುವುದರಿಂದ ಮನಸ್ಸನ್ನು ಸಕಾರಾತ್ಮಕಭಾವಗಳುಂಟಾಗುವ ದಿಕ್ಕಿನಲ್ಲಿ ಬಾಲ್ಯದಲ್ಲಿಯೇ ತರಬೇತಿಗೊಳಿಸಬೇಕೆಂದರು. ಇದರಲ್ಲಿ ಪೋಷಕರು ಮತ್ತು ಪರಿಸರದ ಪಾತ್ರ ಅತ್ಯವಶ್ಯಕ ಎಂದು ತಿಳಿಸಿ ಆಧುನಿಕ ಮಾನವನ ಮನಸ್ಸು ವೈಜ್ಞಾನಿಕವಾಗಿ ಬೆಳೆಯುತ್ತಿದ್ದರೂ ಆಧ್ಯಾತ್ಮಿಕ ಚಿಂತನೆಗಳಿಲ್ಲದೇ ಅಶಾಂತಿಯಿಂದ ನರಳುತ್ತಿದೆ ಎಂದರು. ಆಧ್ಯಾತ್ಮಿಕ ಜೀವನಶೈಲಿಯಿಂದ ಮಾತ್ರ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದಾಗಿದ್ದು, ಯೋಗ ಇದಕ್ಕೆ ಪೂರಕವಾಗಿದ್ದು, ವಿಜ್ಞಾನದಿಂದ ಇದು ಸಾಧ್ಯವಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷರಾದ ಡಾ.ಸೀಮಾ ಯೋಗಣ್ಣ, ಸುಯೋಗ್ ಅಲೈಡ್ ಪ್ರಾಂಶುಪಾಲರಾದ ಡಾ.ಸಂಗೀತ, ಸುಯೋಗ್ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನಾಗಮಣಿ, ಮಾನಸಿಕ ಆರೋಗ್ಯ ತಜ್ಞೆ ಹಾಗೂ ಉಪನ್ಯಾಸಕಿ ಸಂಗೀತ ಉಪಸ್ಥಿತರಿದ್ದರು.

ಬಡವರಿಗೆ ನಿವೇಶನ ನೀಡಿದ ಮಾದೇಗೌಡರ ಕಾರ್ಯ ಸ್ತುತ್ಯಾರ್ಹ

ಮಾಜಿ ಎಂಎಲ್‌ಸಿ ಡಿ.ಮಾದೇಗೌಡರಿಗೆ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ

ಮೈಸೂರು,ಅ.11(ಜಿಎ)–ಡಾ.ಮಾದೇಗೌಡರು ಮನೆ ಮನೆ ಸಮೀಕ್ಷೆ ನಡೆಸಿ, ನಿರ್ಗತಿಕರು, ಬಡವರನ್ನು ಗುರುತಿಸಿ ನಿವೇಶನ ನೀಡಿದ್ದು ಚರಿತ್ರಾರ್ಹ ಎಂದು ಹಿರಿಯ ಸಾಹಿತಿ ಡಾ.ಸಿಪಿಕೆ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರನ್ನು ಹಾಡಿ ಹೊಗಳಿದ್ದಾರೆ.

ಡಿ.ಮಾದೇಗೌಡರಿಗೆ ಬೆಂಗಳೂರು ವಿವಿ ಗೌರವ ಡಾಕ್ಟರೇಟ್ ನೀಡಿದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಕನ್ನಡ ಚಳವಳಿಗಾರರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಮಾದೇಗೌಡರು ಚರಿತ್ರಾರ್ಹ ವ್ಯಕ್ತಿತ್ವ ಪಡೆದಿರುವ ಕೆಲವೇ ಮಂದಿಯಲ್ಲಿ ಒಬ್ಬರು. ಆಧುನಿಕ ಮೈಸೂರಿನ ಹಲವಾರು ಮನೆಗಳಲ್ಲಿ ಇಂದಿಗೂ ಸಹಾ ಹಲವರು ಇವರನ್ನು ಸದಾ ಸ್ಮರಿಸುತ್ತಿದ್ದಾರೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಕನ್ನಡ ಚಳವಳಿಗಾರರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಡಿ.ಮಾದೇಗೌಡರಿಗೆ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಿವೇಶನ ನೀಡಿದ್ದು ಮಾತ್ರವಲ್ಲದೇ, ನಗರದ ಹೃದಯ ಭಾಗದಲ್ಲಿ ಭವ್ಯವಾದ ವಿವೇಕ ಸ್ಮಾರಕ ನಿರ್ಮಾಣಕ್ಕಾಗಿ ನಡೆದ ದೊಡ್ಡ ಹೋರಾಟದ ನೇತೃತ್ವ ವಹಿಸಿದ್ದರು. ಶೀಘ್ರವೇ ಅದು ಲೋಕಾರ್ಪಣೆಗೊಳ್ಳಲಿದೆ ಇತರರಿಗಾಗಿನ ಬದುಕು ಇವರದ್ದಾಗಿದೆ ಎಂದು ನುಡಿದರು.

ನಂತರ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಜನರ ಸೂರಿನ ಮಹತ್ವವನ್ನು ಅರಿತು ಮೈಸೂರಿನಲ್ಲಿ ನಿವೇಶನವನ್ನು ನೀಡುವ ಮೂಲಕ ಅನೇಕ ಮನೆಗಳಿಗೆ ದೇವರ ರೂಪವಾಗಿದ್ದಾರೆ. ಅವರು ಇಂದಿನ ರಾಜಕಾರಣಿಗಳಂತೆ ಅಲ್ಲ. ಮಾದೇಗೌಡರು ಹಳೇ ಮೈಸೂರು ಭಾಗದ ಪಾರಂಪರಿಕ ರಾಜಕಾರಣಿಯಾಗಿದ್ದು, ರಾಜಕಾರಣದ ಹೆಗ್ಗುರುತು. ಇವರಿಗೆ ಮಹತ್ವ ಇಂದಿಗೂ ಕಡಿಮೆ ಆಗಿಲ್ಲ ಎಂದು ಬಣ್ಣಿಸಿದರು.

ಹಿರಿಯ ಸಮಾಜ ಸೇವಕ ರಘುರಾಮ ವಾಜಪೇಯಿ ಮಾತನಾಡಿ, ಈ ಹಿಂದೆ ವಸತಿಹೀನರಿಗೆ ನಿವೇಶನ ನೀಡಬೇಕೆಂದಾಗ ಕ್ರಮ ಕೈಗೊಂಡದ್ದು ಮಾತ್ರವಲ್ಲ, ಅರ್ಜಿಗಳನ್ನು ಹೇಗೆ ಭರ್ತಿ ಮಾಡಬೇಕೆಂಬ ಪುಸ್ತಕವನ್ನೂ ವಿತರಿಸಿ, ನಿವೇಶನ ಪಡೆದುಕೊಳ್ಳುವ ಕೆಲಸ ಸುಲಭವನ್ನಾಗಿಸಿದರು. ಈಗಲೂ ಅಂತಹ ಬಡಾವಣೆಗಳಿಗೆ ಹೋದಲ್ಲಿ, ಹಲವರು ಮಾದೇಗೌಡರು ತಮಗೆ ನಿವೇಶನ ನೀಡಿದ ಕಾರಣ ಸೂರು ದೊರಕಿಸಿಕೊಂಡಿದ್ದೇವೆ ಎಂದು ಸ್ಮರಿಸುತ್ತಾರೆಂದರು.

> ಮೈಸೂರು ಮಹಾರಾಜರು ಹೇಗೆ ಮೈಸೂರು ಅಭಿವೃದ್ಧಿಗೆ ಶ್ರಮಿಸಿದ್ದಾರೆ, ಹಾಗೇ ಮಾದೇಗೌಡರು ಕಷ್ಟ ಪಟ್ಟಿದ್ದಾರೆ. ಅವರಿಗೆ ಬೆಂಗಳೂರು ವಿವಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿರುವುದು ಸಂತಸದ ವಿಚಾರ. ಆದರೆ, ಮೈಸೂರು ವಿಶ್ವವಿದ್ಯಾನಿಲಯದಿಂದಲ್ಲೇ ಡಾಕ್ಟರೇಟ್ ಪ್ರದಾನ ಮಾಡಬಹುದಾಗಿತ್ತು.
>
> -ಸಿ.ನಾರಾಯಣಗೌಡ, ಅಧ್ಯಕ್ಷ, ಜಿಲ್ಲಾ ಹೋಟೆಲ್ ಮಾಲೀಕರ ಸಂಘ

ಕಾರ್ಯಕ್ರಮದಲ್ಲಿ ಡಿ.ಮಾದೇಗೌಡರಿಗೆ ಮೈಸೂರು ಜಿಲ್ಲಾ ಕನ್ನಡ ಚಳವಳಿಗಾರರ ಸಂಘ ವತಿಯಿಂದ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಕೋದಂಡರಾಮು, ಕಸಾಪ ಮಾಜಿ ಅಧ್ಯಕ್ಷರಾದ ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಸಂಘದ ಅಧ್ಯಕ್ಷ ಬಿ.ಎ. ಶಿವಶಂಕರ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ಅರಮನೆ ಆವರಣದಲ್ಲಿ ಜ್ಯುವೆಲ್ಸ್ ಆಫ್ ಇಂಡಿಯಾ 27ನೇ ಆವೃತ್ತಿ ಪ್ರದರ್ಶನ ಆಯೋಜನೆ

ನಟಿ ಸಮಂತಾ ರುತ್ ಚಾಲನೆ



ಬೆಂಗಳೂರಿನಲ್ಲಿ ಆಯೋಜಿಸಿರುವ 'ಜ್ಯುವೆಲ್ಸ್ ಆಫ್ ಇಂಡಿಯಾ' ಆಭರಣ ಪ್ರದರ್ಶನವನ್ನು ಜನಪ್ರಿಯ ನಟಿ ಸಮಂತಾ ಶುಕ್ರವಾರ ಉದ್ಘಾಟಿಸಿದರು.

ಮೈಸೂರು, ಅ.11– ಭಾರತದ ಅತಿದೊಡ್ಡ ಆಭರಣ ಪ್ರದರ್ಶನ ಮೇಳಗಳಲ್ಲಿ ಒಂದಾದ 'ಜ್ಯುವೆಲ್ಸ್ ಆಫ್ ಇಂಡಿಯಾ'ದ 27ನೇ ಆವೃತ್ತಿ ಪ್ರದರ್ಶನವನ್ನು ಬೆಂಗಳೂರಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ.

ಈ ಆಭರಣ ಪ್ರದರ್ಶನಕ್ಕೆ ಜನಪ್ರಿಯ ನಟಿ ಸಮಂತಾ ರುತ್ ಪ್ರಭು ಶುಕ್ರವಾರ ಚಾಲನೆ ನೀಡಿದ್ದು, ಭಾನುವಾರ (ಅ.12) ಸಮಾರೋಪಗೊಳ್ಳಲಿದೆ. ಭಾರತದ ವಿವಿಧೆಡೆಯ ಉನ್ನತ ದರ್ಜೆಯ ಆಭರಣ ತಯಾರಕರು ಒಂದೇ ಸೂರಿನಡಿ ಚಿನ್ನ, ಬೆಳ್ಳಿ, ವಜ್ರದಿಂದ ಸಿದ್ಧಪಡಿಸಿದ ವೈವಿಧ್ಯಮಯ ವಿನ್ಯಾಸದ ಆಭರಣಗಳನ್ನು ಪ್ರದರ್ಶಿಸಿದ್ದಾರೆ. ಸಾಂಪ್ರದಾಯಿಕ ಹಾಗೂ ಅತ್ಯಾಧುನಿಕ ವಿನ್ಯಾಸದ ಆಭರಣಗಳು ಕಣ್ಮನ ಸೂರೆಗೊಳ್ಳುತ್ತಿದ್ದು, ಲಕ್ಕಿ ಡ್ರಾ ಮೂಲಕ ಗ್ರಾಹಕರಿಗೆ ವಜ್ರದ ನೆಕ್ಲೆಸ್ ಗೆಲ್ಲುವ ಅವಕಾಶದ ಜೊತೆಗೆ ಜ್ಯುವೆಲ್ಸ್ ಆಫ್ ಇಂಡಿಯಾ ಗೋಲ್ಡ್ ಉಳಿತಾಯ ಯೋಜನೆಯನ್ನೂ ಕಲ್ಪಿಸಲಾಗಿದೆ.

'ಜುವೆಲ್ಸ್ ಆಫ್ ಇಂಡಿಯಾ' ಆಯೋಜಕರಾದ ವಿಕ್ರಮ್ ಮೆಹ್ತಾ ಮಾತನಾಡಿ, ಈ ಪ್ರತಿಷ್ಠಿತ ಆಭರಣ ಪ್ರದರ್ಶನವು 27 ವರ್ಷಗಳ ಅದ್ಭುತ ಪಯಣವನ್ನು ಸಂಭ್ರಮಿಸುತ್ತಿದೆ. ಪ್ರತಿ ವರ್ಷದಂತೆ ದೇಶದ ಉನ್ನತ ಆಭರಣ ತಯಾರಕರು ಭಾಗವಹಿಸಿದ್ದು, ಕರ್ನಾಟಕದ ಜೊತೆಗೆ ನೆರೆ ರಾಜ್ಯಗಳ ಗ್ರಾಹಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದ್ದಾರೆ.

ಸಿಜೆಐ ಮೇಲೆ ಶೂ ಎಸೆಯಲೆತ್ನ

ಕರ್ನಾಟಕ ದಲಿತ ಪ್ಯಾಂಥರ್ಸ್ ಖಂಡನೆ

ಮೈಸೂರು, ಅ.11– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಕಡೆಗೆ ವಕೀಲನೊಬ್ಬ ಶೂ ಎಸೆಯಲು ಯತ್ನಿಸಿದ ಘಟನೆಯನ್ನು ಕರ್ನಾಟಕ ದಲಿತ ಪ್ಯಾಂಥರ್ಸ್ ಸಂಘಟನೆ ತೀವ್ರವಾಗಿ ಖಂಡಿಸಿದೆ.



ಯೋಗ ನರಸಿಂಹ

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಸಂಘಟನೆ ಅಧ್ಯಕ್ಷ ಯೋಗ ನರಸಿಂಹ, ಸುಪ್ರೀಂ ಕೋರ್ಟ್ ಹಿರಿಯ ವಕೀಲ ರಾಕೇಶ್ ಕಿಶೋರ್ ಕಲಾಪದ ವೇಳೆಯೇ ಸನಾತನ ಧರ್ಮಕ್ಕೆ ಆದ ಅವಮಾನ ಸಹಿಸಲಾಗದು ಎಂದು ಕೂಗುತ್ತಾ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರತ್ತ ಶೂ ಎಸೆಯಲು ಯತ್ನಿಸಿದ್ದಾನೆ. ಇಂತಹ ವಿಕೃತ ಮನಃಸ್ಥಿತಿ ಅತ್ಯಂತ ಆತಂಕಕಾರಿ. ರಾಕೇಶ್ ಕಿಶೋರ್ ವಿರುದ್ಧ ಪ್ರಕರಣ ದಾಖಲಿಸಿ, ಕಠಿಣಾತಿ ಕಠಿಣ ಶಿಕ್ಷೆ ವಿಧಿಸುವ ಮೂಲಕ ನ್ಯಾಯ ಪೀಠದ ಗೌರವವನ್ನು ರಕ್ಷಿಸ ಬೇಕಿದೆ ಎಂದು ಒತ್ತಾಯಿಸಿದ್ದಾರೆ.

PUBLIC NOTICE

Our client intends to purchase the schedule property from **Sri. C.N. Yoga Narasimhe Gowda,** Son of Sri C.N. Narasimhe Gowda, Residing at Chikkodanahalli, Kasaba Hobli, H.D. Kote Taluk, Mysuru District – 570 004 and Sri N. Trimurthy, Son of late Nachimuthu Goundar, Residing at No.263/3, H.B. Road, Next to Saint Mary's High School, H.D. Kote Town, Mysuru District - 571114.Any person/s who claims any right, title or interest of any nature or any lien/charge or enforceable right in relation to the schedule property has any objection of any nature to the transaction should lodge such claim/objection in writing to the undersigned together with supporting documents within 10 days thereof, failing which it will be presumed that no valid claim/s or objections subsists and our client would proceed to complete the sale transaction.

SCHEDULE PROPERTY

All that piece and parcel of land bearing Site No.10, Property No.337, Junjer No. 1815, E-Katha No.6651043916 & 4282070639, measuring East to West 143 Feet, North to South 50+42/2 feet together with building named as "SRI MANJUNATHA KALYANA MANTAPA" situated at Yarahalli (Hand post), Hirige Gramapanchayathi, presently under Purasabha jurisdiction, Kasaba Hobli, H.D. Kote Taluk, Mysuru Districtand bounded on the:

East by : Taraka Kirunale
West by : M.M. Road
North by : Samrathlal Kotharia's property
South by : V.N. Krishnappa's property

T.N.VISWANATHA & T.N.RAMESH,
Advocates
No.75/21, 2nd Floor, "Hulkul Complex".
Lalbagh Main Road, Bengaluru-27.







ಪ್ರಮಾಣ ಪತ್ರ

ಬೆಳಗಾಂ, ಹಿಂಡವಾಡೀ, ಮಹಾವೀರ ನಗರ, ಗೋಮ್ಮಟೇಶ, ಮನೆ ನಂ. 1031ರಲ್ಲಿ ವಾಸವಾಗಿರುವ ಶ್ರೀಮತಿ ಸೌಮ್ಯ. ಬಿ (**Sowmya.B**) ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನಗೆ ದಿನಾಂಕ 5-4-2019ರಂದು ಗಂಡು ಮಗು ಜನಿಸಿದ್ದು, ಜನನ ಪ್ರಮಾಣ ಪತ್ರ ಪಡೆದಿದ್ದು ಅದರಲ್ಲಿ ಮಗುವಿನ ಹೆಸರನ್ನು ರಿಯಾನ್ಸ್ ಅಜಿಂಕ್ಯ ಪಾಟೀಲ್ (**Reyansh Ajinkya Patil**) ಎಂದು ನಮೂದು ಮಾಡಿ ಪಡೆದುಕೊಂಡಿರುತ್ತೇನೆ. ಈಗ ನನ್ನ ಮಗನ ಹೆಸರನ್ನು ರಿಯಾನ್ಸ್.ಎ (**Reyansh.A**) ಎಂದು ಬದಲಾಯಿಸಿ ಜನನ ಪ್ರಮಾಣ ಪತ್ರವನ್ನು ನೀಡಬೇಕಾಗಿ ಈ ಪ್ರಮಾಣ ಪತ್ರದ ಮೂಲಕ ನೋಟರಿ ಎಂ. ಗೀತಾ ರವರ ಎದುರು ದಿನಾಂಕ 15-9-2025ರಂದು ಪ್ರಮಾಣೀಕರಿಸಿರುತ್ತೇನೆ.

ಸಹಿ/– ಸೌಮ್ಯ.ಬಿ

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

